ರಂಜನೆ ಬೋಧನೆ ಪ್ರಬೋಧನೆ

# ಲಂಕೇಶ್


02 ಜುಲೈ 2014 ಪುಟ 20 ರೂ. 15/-

ಐಬಿ ವರದಿ
ಎತ್ತಿಗೆ ಜ್ವರ ಎಮ್ಮೆಗೆ ಬರೆ



# ಲಿಂಗವಂತರ ಹುಸಿ ಕ್ಯಾತೆ

ಕಲಿಯುಗ ಕರ್ಣನ
## ಲೈಟುದಾಹ



ಕೆಪಿಸಿಸಿ ಗದ್ದುಗೆ
## ಒಕ್ಕಲಿಗ ಲಿಂಗಾಯತ ಗುದುಮುರಿಗೆ



ಕುಚೇಲ–ಕೋಟ್ಯಾಧೀಶ
## ಮಾಣಿ



# ವಿಶ್ವಕಪ್


ಮುಸಲ್ಮಾನರ

'ಸೂಪರ್ ವ್ಯಾನ್' ಪರ್ಸಿ!

**ಇತ್ತೀಚೆಗೆ ತೀರಿಕೊಂಡ ಅಮೆರಿಕದ ಖ್ಯಾತ ಲೇಖಕಿ ಮೇರಿ ಆ್ಯಂಜಲೊ ಅವರ ಆತ್ಮಕಥನ 'ಐ ನೋ ವೈ ದ ಕೇಜ್ಡ್ ಬರ್ಡ್ ಸಿಂಗ್ಸ್' ಪುಸ್ತಕದ ಆಯ್ದ ಭಾಗ ಇಲ್ಲಿದೆ.**



# ಮೇರಿ





ಮಾತು ಪ್ರಾರಂಭವಾದ ಸ್ವಲ್ಪಹೊತ್ತಿಗೆ ತಾನೊಬ್ಬ 'ಲಿಬರಲ್' ಎಂದು ಬಣ್ಣಿಸಿಕೊಳ್ಳುವ ಟೆಕ್ಸಾಸಿನ ಬಿಳಿಯ ಹೆಂಗಸೊಬ್ಬಳ ಭೇಟಿಯಾಯಿತು. ನಿನ್ನ ಹುಟ್ಟೂರು ಯಾವುದು ಎಂದು ನನ್ನನ್ನು ಕೇಳಿದಳು. ನನ್ನ ಪೂರ್ವಿಕರು ನೆಲೆಸಿದ್ದ ಸ್ಟ್ಯಾಂಪ್ಸ್ ಎಂಬ ಊರಿನಲ್ಲಿ ನನ್ನ ಅಜ್ಜಿ ನೀಗ್ರೋ ಜನರಲ್ ಸ್ಟೋರ್ಸ್ ಒಂದನ್ನು ನಡೆಸುತ್ತಿದ್ದಳು ಎಂದು ನಾನು ಹೇಳಿದಾಗ "ಓ! ಹಾಗಾದರೆ ನೀನು ಒಂದರ್ಥದಲ್ಲಿ ಮೊದಲಗಿತ್ತಿಯೇ ಅಂತಾಯಿತು!" ಎಂದು ಉದ್ಗರಿಸಿದ್ದಳು. ಮಹಾ ಅಸಂಬದ್ಧ ಎನ್ನಿಸಿದರೂ ಸರಿಯೇ, ಅಮೆರಿಕದ ದಕ್ಷಿಣದ ಸಣ್ಣ ಊರುಗಳಲ್ಲಿ ನೀಗ್ರೋ ಹುಡುಗಿಯರು ಬೆಳೆದು ದೊಡ್ಡವರಾಗುವಾಗ ಗೃಹಕೃತ್ಯದ ಹಲವಾರು ವಿಷಯಗಳಲ್ಲಿ ವಿಸ್ತಾರವಾದ ತರಬೇತಿಯನ್ನು ನೀಡಲಾಗುತ್ತಿತ್ತು. ಕಿತ್ತು ತಿನ್ನುವ ಬಡತನವಿದ್ದರೂ ಸರಿ! ಹೇಗೋ ಹೊಂಚಿ ತಿನ್ನುವ ಛಾತಿಯಷ್ಟೇ ಇದ್ದರೂ ಸರಿ! ಶ್ರೀಮಂತ ಬಿಳಿಯ ಹುಡುಗಿಯರಿಗೆ ಪರಿಪೂರ್ಣ ಹೆಣ್ಣಾಗುವ ಕಲೆಯಲ್ಲಿ ತರಬೇತಿ ಕೊಡುವ ಸುದ್ದಿ ಫ್ಯಾಷನ್ ಪತ್ರಿಕೆಗಳಲ್ಲಿ ಬರುತ್ತಿತ್ತಲ್ಲ? ನಮಗೂ ಹಾಗೇ ಇತ್ತು. ವ್ಯತ್ಯಾಸವಿಷ್ಟೆ: ಅವರಿಗೆ ಥಳುಕುವ, ಬಳುಕುವ, ನರ್ತಿಸುವ, ನಲಿಯುವ, ವಾಲಾಡುವ ಕಲೆಗಳಲ್ಲಿ ತರಬೇತಿ ಸಿಕ್ಕರೆ, ನಮಗೆ ಮಧ್ಯಯುಗದ ವಿಕ್ಟೋರಿಯನ್ ಕಲೆಗಳಲ್ಲಿ ತರಬೇತಿ ಸಿಗುತ್ತಿತ್ತು. ಇಷ್ಟಕ್ಕೂ ಕಲಿತಿದ್ದನ್ನು ಆಮೇಲೆ ಪ್ರಯೋಗಿಸಲು ನಮಗೆ ದುಡ್ಡಾದರೂ ಎಲ್ಲಿರುತ್ತಿತ್ತು? ಬಿಳಿಯ ಹುಡುಗಿಯರು ವಾಲ್ಟ್ಜ್ ನೃತ್ಯದಲ್ಲಿ ಹದವಾಗಿ ಹೆಜ್ಜೆ ಹಾಕುವ, ಪಾರ್ಟಿಗಳಲ್ಲಿ ಬಿಳಿಯ ತೊಡೆಯ ಮೇಲೆ ಟೀ ಕಪ್ಪು ಬೀಳದಂತೆ ನಯವಾಗಿ ಕೂರುವ ಕಲೆಯಲ್ಲಿ ಪಳಗಿದರೆ ಅದು ಆಮೇಲೂ ಉಪಯೋಗಕ್ಕೆ ಬರುತ್ತಿತ್ತು, ನಮಗೆಲ್ಲಿ ಆ ಭಾಗ್ಯ? ಬೇಕಿದ್ದರೆ ಎಡ್ನಾ ಲೋಮಾಕ್ಸ್‌ಳನ್ನೇ ನೋಡಿ! ಆ ಮಹಾತಾಯಿ ಹತ್ತಿ ಆಯ್ದು ಸಂಪಾದಿಸಿದ ದುಡ್ಡೆಲ್ಲವನ್ನೂ ಟ್ಯಾಟಿಂಗ್ ರೇಷ್ಮೆ ದಾರ ಕೊಳ್ಳಲು ಖರ್ಚು ಮಾಡಿದಳು! ಅವಳ ಒರಟು ಕೈಗಳಿಗೆ ರೇಷ್ಮೆ ದಾರದ ಹೆಣಿಗೆ ಹೊಂದಬೇಕಲ್ಲ? ಹೆಣೆದು, ಬಿಚ್ಚಿ, ಹೆಣೆದು, ಬಿಚ್ಚಿ ಸುಸ್ತು ಹೊಡೆದು ಹೋದಳಲ್ಲ! ಹಾಗಂತ ದಾರ ಕೊಳ್ಳುವಾಗ ಅವಳಿಗೆ ಗೊತ್ತಿರಲಿಲ್ಲವೆಂದಲ್ಲ!

'ನಾವೆಲ್ಲ ಕಸೂತಿ ಕಲೆಯಲ್ಲಿ ಪಳಗಬೇಕಿತ್ತು, ನಾನು ಕಸೂತಿ ಹಾಕಿದ್ದ ಟವೆಲ್ಲುಗಳು, ದಿಂಬಿನ ಕವರುಗಳು, ಕರವಸ್ತ್ರಗಳು, ಪೆಟ್ಟಿಗೆಯಲ್ಲಿ ಧಂಡಿಯಾಗಿ ಬಿದ್ದಿದ್ದವು. ಕ್ರೋಶಾ, ಟ್ಯಾಟಿಂಗ್ ಕಲೆಯಲ್ಲಿ ಸಹ ನಾನು ಪಸಂದಾಗಿ ಪಳಗಿದ್ದೆ.

ನನ್ನ ಹಲವಾರು 'ಕಲಾಕೃತಿ'ಗಳು ಮುಸುಗು ಹಾಕಿಕೊಂಡು ಎಲ್ಲೋ ಭದ್ರವಾಗಿ ಕೂತಿದ್ದವು. ಬಟ್ಟೆ ಒಗೆಯುವುದರಲ್ಲಿ, ಇಸ್ತ್ರಿ ಮಾಡುವುದರಲ್ಲಿ ನಮ್ಮದು ಎತ್ತಿದ ಕೈ ಎಂದು ಹೇಳುವ ಅಗತ್ಯವೇ ಇಲ್ಲ ಬಿಡಿ. ಆದರೆ ಕೆಲವು 'ಎತ್ತರದ ಸ್ತರ'ದ ಕಲೆಗಳೂ ಇದ್ದವಲ್ಲ? ಹೊಳೆಹೊಳೆಯುವ ಬೆಳ್ಳಿಯ ತಟ್ಟೆ, ಲೋಟಾ, ಚಮಚ ಇತ್ಯಾದಿಗಳಿದ್ದಾಗ ಅತಿಥಿಗಳಿಗೆ ಮೇಜನ್ನು ಸಿದ್ಧಪಡಿಸುವುದು ಹೇಗೆ? ಮಾಂಸವನ್ನು ಬರೀ ಕಾವಿನಲ್ಲಿ ಸುಡುವುದು ಹೇಗೆ? ಮಾಂಸವನ್ನು ಮಿಶ್ರ ಮಾಡದೆ ಬರೀ ತರಕಾರಿಯನ್ನು ಬೇಯಿಸುವುದು ಹೇಗೆ? ಇತ್ಯಾದಿ ಕಲೆಗಳನ್ನು ಬೇರೆಲ್ಲೋ ಕಲಿಯುವುದು ಅನಿವಾರ್ಯವಾಗಿತ್ತು. ಬೇರೆಲ್ಲೋ ಎಂದರೆ ಎಲ್ಲಿ ಆ ಪದ್ಧತಿಗಳು ಜನ್ಮ ತಾಳಿದವೋ ಅಲ್ಲಿಯೇ. ನನ್ನ ಹತ್ತನೆಯ ವರ್ಷದಲ್ಲಿ ಬಿಳಿಯ ಗೃಹಿಣಿಯ ಅಡುಗೆ ಮನೆಯಲ್ಲಿ ನನ್ನ ಮನೆವಾಳ್ತನದ ತರಬೇತಿ ಪರಿಪೂರ್ಣವಾಗಬೇಕಿತ್ತು.

ಮಿಸೆಸ್ ವಯೋಲ ಕಲಿನನ್ ಅಂಚೆ ಕಚೇರಿಯ ಹಿಂದುಗಡೆಯಲ್ಲೆಲ್ಲೋ ಇದ್ದ ಮೂರು ಬೆಡ್ ರೂಮಿನ ಮನೆಯ ದಪ್ಪೂತಿ ಒಡತಿ. ಅಯ್ಯಮ್ಮ ಎನ್ನಿಸುವ ಕುರೂಪ! ನಕ್ಕಾಗ ಮಾತ್ರ ಅವಳನ್ನು ಮಹಾ ಕೊಳಕಿಯಂತೆ ಕಾಣಿಸುವಂತೆ ಮಾಡುತ್ತಿದ್ದ ಕಣ್ಣಿನ ಮತ್ತು ಬಾಯಿಯ ಸುತ್ತಲಿನ ಸುಕ್ಕುಗಳು ಮರೆಯಾಗಿ, ತುಂಟ ಪೋರಿಯ ಮುಖವಾಡ ಹೊತ್ತ ಯಕ್ಷಿಯಂತೆ ಕಂಡು ಸ್ವಲ್ಪ ಸಹ್ಯವೆನ್ನಿಸುತ್ತಿದ್ದಳು. ಮಧ್ಯಾಹ್ನದ ಹೊತ್ತಿನಲ್ಲಿ ಅವಳ ಗೆಳತಿಯರ ಆಗಮನವಾಗುತ್ತಿತ್ತು, ಅವರು ಬಂದಾಗ ಅಂಟಿಸಿಕೊಂಡ ಆ ನಗು ಅವರು ಹೋಗುವವರೆಗೂ ಇರುತ್ತಿತ್ತು.

ಏನೇ ಆದರೂ ಆ ಮನೆಯ ಠಾಕುಠೀಕುತನ ವಾಕರಿಕೆ ಬರಿಸುವಂತಿತ್ತಪ್ಪ! ಅಲ್ಲಿ ಮನುಷ್ಯತ್ವೇ ಇಲ್ಲವೇನೋ ಅಂತನ್ನಿಸುತ್ತಿತ್ತು. ಈ ಕಪ್ಪನ್ನು ಇಲ್ಲಿಡಬೇಕೆಂದರೆ ತಲೆ ಹೋದರೂ ಇಲ್ಲಿಯೇ ಇಡಬೇಕು! ಹೀಗಿಡಬೇಕೆಂದರೆ ಹೀಗೆಯೇ ಇಡಬೇಕು. ದೂಸರಾ ಮಾತಿಗೆ ಅವಕಾಶವೇ ಇಲ್ಲ. ಇಲ್ಲಿಡಬೇಕಾದ ಕಪ್ಪನ್ನು ಎಲ್ಲಿಯೋ ಇಟ್ಟರೆ ನೀನೊಬ್ಬ ತಲೆಹರಟೆ! ಅಧಿಕಪ್ರಸಂಗಿ! ಅಷ್ಟೆ. ಹನ್ನೆರಡು ಗಂಟೆ ಢಣ್ ಎಂದಾಗ ಮೇಜಿನ ಮೇಲೆ ಎಲ್ಲವೂ ಸಿದ್ಧವಾಗಿರಬೇಕು! 12.15 ಕ್ಕೆ ಮಿಸೆಸ್ ಕಲಿನನ್ ಊಟಕ್ಕೆ ಕೂರಬೇಕು (ಗಂಡ ಬರಲಿ! ಬಿಡಲಿ!) 12.16 ಕ್ಕೆ ಮಿಸ್ ಗ್ಲೋರಿ ಊಟ ಬಡಿಸಬೇಕು!

ನನಗಂತೂ ಸಲಾಡ್ ತಿನ್ನಲು ಯಾವ ತಟ್ಟೆ, ಬ್ರೆಡ್ ತಿನ್ನಲು ಯಾವ ತಟ್ಟೆ, ಊಟದ ಕೊನೆಯಲ್ಲಿ ಬರುವ ಸಿಹಿಖಾದ್ಯವನ್ನು ತಿನ್ನಲು ಯಾವ ತಟ್ಟೆ ಎಂದು ಗೊತ್ತು ಮಾಡಿಕೊಳ್ಳಲು, ವ್ಯತ್ಯಾಸವನ್ನು ತಿಳಿದುಕೊಳ್ಳಲು ಒಂದು ವಾರವೇ ಹಿಡಿದಿತ್ತು.

ಮಿಸೆಸ್ ಕಲಿನನ್ ತನ್ನ ಶ್ರೀಮಂತ ತಂದೆತಾಯಿಯರ ಆಚಾರವಿಚಾರಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುತ್ತಿದ್ದಳು. ಅವಳು ವರ್ಜೀನಿಯಾದವಳಂತೆ. ಮಿಸ್ ಗ್ಲೋರಿಯ ಗುಲಾಮ ವಂಶದ ಪೂರ್ವಜರು ಕಲಿನನ್ ಮನೆತನದ ಸೇವೆಯಲ್ಲಿ ಜೀವ ತೇದಿದ್ದರು. ತನ್ನ ಒಡತಿಯ ಪ್ರವರವನ್ನು ನನಗೆ ಹೇಳಿದ್ದು ಅವಳೇ. ಮಿಸೆಸ್ ಕಲಿನನ್ ತನ್ನ ಶ್ರೀಮಂತಿಕೆಗೆ ಹೊಂದದವನ ಜೊತೆ ಮದುವೆ ಮಾಡಿಕೊಳ್ಳಬೇಕಾಯಿತಂತೆ. ಅವನ ಹತ್ತಿರ ದುಡ್ಡಿದ್ದರೂ ಅವಳ ಅಂತಸ್ತಿಗೆ ತಕ್ಕಷ್ಟಲ್ಲವಂತೆ.

ಈ ಮುಸುಡಿಗೆ ಎಂಥದೋ ಒಬ್ಬ ಗಂಡ ಸಿಕ್ಕಿದ್ದೂ ಪವಾಡವೇ ಎಂದು ಅಂದುಕೊಂಡಿದ್ದೆ. ಜೋರಾಗಿ ಹೇಳುವಂತಿಲ್ಲ, ಮಿಸ್ ಗ್ಲೋರಿಗೆ ತನ್ನ ಒಡತಿಯ ಬಗ್ಗೆ ಯಾವ ಸಣ್ಣ ಮಾತನ್ನೂ ಆಡಬಾರದು. ಆದರೂ ಆಕೆ ನನಗೆ ಇಷ್ಟವಾಗುತ್ತಿದ್ದಳು. ನನ್ನ ಕೆಲಸದ ವಿಷಯದಲ್ಲಿ ಮಿಸ್ ಗ್ಲೋರಿಗೆ ಸಾಕಷ್ಟು ತಾಳ್ಮೆಯಿತ್ತೆಂದೇ ಹೇಳಬೇಕು. ಬೆಲೆಬಾಳುವ ಚಿನ್ನ ಮತ್ತು ಬೆಳ್ಳಿಯ ಬೌಲು, ತಟ್ಟೆ, ಚಮಚ ಇತ್ಯಾದಿಗಳ ಜೊತೆಗೆ ಕೆಲಸದವರನ್ನು ಹಾಜರುಪಡಿಸಲೆಂದೇ ಇದ್ದ ಥಿಣಿ ಥಿಣಿ ಕರೆಗಂಟೆಗಳ ಪರಿಚಯವನ್ನೂ ಒಂದೊಂದಾಗಿ ಮಾಡಿಕೊಟ್ಟದ್ದಳು. ಸೂಪ್ ಇಡಲೆಂದು ಇದ್ದ ಬೋಗುಣಿಯಾಕಾರದ ಪಾತ್ರೆಯನ್ನು ಸೂಪ್ ಬೌಲು ಎಂದು ಕರೆಯುವುದಿಲ್ಲವಂತೆ. 'ಟರೀನ್' ಎಂದು ಕರೆಯಬೇಕಂತೆ! ಅದೇ ಕಪ್ಪಿಗೆ ಅದೇ ಸಾಸರ್ ಇಡಬೇಕಂತೆ! ಮದ್ಯ ಕುಡಿಯಲು ಒಂದು ತರದ ಗ್ಲಾಸು! ಶರಬತ್ತಿಗೆ ಇನ್ನೊಂದು ತರದ್ದು! ವೈನ್‌ಗೆ ಮತ್ತೊಂದು ತರದ್ದು! ನೀರಿಗೆ ಮಗದೊಂದು ತರದ್ದು! ಐಸ್ ಕ್ರೀಮ್ ತಿನ್ನಲು ಬೇರೆಯೇ ತರದ್ದು! ಅಯ್ಯಮ್ಮ ತರಾವರಿಯೇ! ನನಗೆ, ಮಿಸ್ ಗ್ಲೋರಿಗೆ ಮಾತ್ರ ಬೇರೆ ತರದ ಗ್ಲಾಸುಗಳು. ಅವೆರಡೂ ದೂರವಾಗಿ ಬೇರೆಯದೇ ಆದ ಶೆಲ್ಫಿನಲ್ಲಿ ಕೂತು ಮಿಕಿಮಿಕಿ ನೋಡುತ್ತಿದ್ದವು. ಸೂಪ್ ಚಮಚಗಳು, ಬೋಗುಣಿಯಾಕಾರದ ಗ್ರೇವಿಯ ಬಟ್ಟಲುಗಳು, ಬೆಣ್ಣೆ ಚಾಕುಗಳು, ಸಲಾಡ್ ಫೋರ್ಕುಗಳು, ತಿನಿಸನ್ನು ಚಾಕುವಿನಿಂದ ಕತ್ತರಿಸಿ ತಿನ್ನಬೇಕಾದಾಗ ಬಳಸುವ ತಟ್ಟೆಗಳು... ಅಯ್ಯೋ, ಅಯ್ಯೋ... ಒಂದೇ? ಎರಡೆ? ದಿನದಿನಕ್ಕೆ ನನ್ನ ಜ್ಞಾನಸಂಪತ್ತು ಹೆಚ್ಚುತ್ತಾ ಹೋಗುತ್ತಿತ್ತು. ಹೊಸದಾದ ಭಾಷೆಯೊಂದನ್ನು ಕಲಿಯುತ್ತಿದ್ದ ಸಡಗರ ನನ್ನಲ್ಲಿತ್ತು, ಆ ಲೋಕದ ಹೊಸತನ, ಅಲ್ಲಿಂದಿಲ್ಲಿಗೆ ಪತರಗುಟ್ಟುತ್ತಿದ್ದ ಮಿಸೆಸ್ ಕಲಿನನ್, ಅವಳ ಅಲೀಸ್-ಇನ್-ವಂಡರ್ ಲ್ಯಾಂಡ್‌ನಂತಹ ಮನೆ...! ನಾನು ನೋಡಿದ್ದು, ಕೇಳಿದ್ದು, ಕಲಿತಿದ್ದು, ಎಲ್ಲವೂ ಹೊಸತೋ ಹೊಸತು!

ಅವಳ ಗಂಡನೆಂಬ ಪ್ರಾಣಿ ಹೇಗಿದ್ದ ಎನ್ನುವುದೇ ಮರೆತುಹೋಗಿದೆ. ನಾನು ನೋಡಿದ ಮತ್ತು ...

ಇರಲು ಪ್ರಯತ್ನಿಸಿದ್ದ ಬೇರೆಲ್ಲ ಬಿಳಿಯ ಗಂಡಸರ ಮ...
ಮೂಟೆಯೊಳಗೆ ಅವನ ಮೂತಿಯನ್ನೂ ತಳ್ಳಿ ...
ಮೂಲೆಯಲ್ಲಿ ಬಿಸಾಕಿದ್ದೆ.

ಒಂದು ದಿನ ಸಾಯಂಕಾಲ ಕೆಲಸ ಮುಗಿಸಿ ಮ...
ದ್ದಾಗ, ಮಿಸ್ ಗ್ಲೋರಿ ನನ್ನ ಹತ್ತಿರ ಮಿಸೆಸ್ ಕಲಿ...
ಮಕ್ಕಳಾಗಲು ಸಾಧ್ಯವೇ ಇಲ್ಲವೆಂಬ ಸುದ್ದಿ ತಿಳಿಸಿ...
ಯಾಕೆ? ಅವಳ ಮೂಳೆಗಳು ತುಂಬಾ ಸೂಕ್ಷ್ಮ...
ತಾಯ್ತನದ ಭಾರವನ್ನು ತಡೆಯಲಾರವಂತೆ! ಅವಳ ದ...
ತುಂಬ ಪದರಪದರಗಳಾಗಿ ಹರಡಿಕೊಂಡಿದ್ದ ನೆಣದ ...
ಮೂಳೆಗಳು ಎಲ್ಲಿದ್ದವ್ರೋ! ಹೇಗಿದ್ದವ್ರೋ! ಅಂತಂದುಕೊ...
ಮಿಸ್ ಗ್ಲೋರಿ ಮಾತು ಮುಂದುವರೆಸುತ್ತಾ ವೈ...
ಮಿಸೆಸ್ ಕಲಿನನ್ ದೇಹದಲ್ಲಿದ್ದ ಹೆಣ್ತನದ ಅಂಗಾಂಗಗ...
ತೆಗೆದುಬಿಟ್ಟಿದ್ದಾರೆ ಅಂತಲೂ ಹೇಳಿದಳು. ಹಾಗೆಂದರೆ...
ಹಂದಿಯ ದೇಹದಲ್ಲಿ ಅತ್ಯಗತ್ಯ ಅಂಗಗಳೆಂದರೆ ಶ್ವಾಸಕೋ...
ಹೃದಯ ಮತ್ತು ಯಕೃತ್ ತಾನೇ? ಅಂದರೆ ಮಿ...
ಕಲಿನನ್ ತನ್ನ ದೇಹದೊಳಗಿನ ಅತ್ಯಗತ್ಯ ಭಾಗಗಳೇ ಇ...
ಖಾಲಿ ಮೂಟೆಯ ತರಹ ಲಳಲಳ ಓಡಾಡಿಕೊ...
ದ್ದಾಳೆಯೆ? ಯಾವ್ಯಾವುದೋ ಬಾಟಲಿಗಳಿಂದ ಮದ್ಯ...
ಆ ಪಾಟಿ ಹೊಟ್ಟೆಗೆ ಸುರಿದುಕೊಳ್ಳುತ್ತಿದ್ದದ್ದು ಅ...
ಏನೋ! ದೇಹದ ಒಳಗೆ ಕೊಳೆತು ನಾರು...
ಇಟ್ಟುಕೊಳ್ಳಲು ಕಷ್ಟಪಡುತ್ತಿದ್ದಳೇನೋ, ಪಾಪ!

ಬೈಲಿ ಜೊತೆ ಈ ಸುದ್ದಿಯನ್ನು ಹಂಚಿಕೊಂ...
ನನ್ನ ಊಹೆ ನಿಜ ಎಂದು ಅವನೂ ಒಪ್ಪಿಕೊಂಡ. ಜೊ...
ಇನ್ನೊಂದು ಸುದ್ದಿಯನ್ನೂ ಸೇರಿಸಿದ. ಮಿಸೆಸ್ ಕಲಿನ...
ಗಂಡನಿಗೆ ಕಪ್ಪು ಹೆಂಗಸೊಬ್ಬಳ ಜೊತೆ ಸಂಬಂಧವಿ...
ಇಬ್ಬರು ಹೆಣ್ಣುಮಕ್ಕಳನ್ನೂ ಹುಟ್ಟಿಸಿದ್ದಾನಂತೆ. ಅವರು...
ಅಪ್ಪನ ತದ್ರೂಪವಂತೆ. ನನಗೂ ಅವರ ಪರಿಚ...
ವಿದೆಯಂತೆ!

ಮಿಸ್ಟರ್ ಕಲಿನನ್ ಮುಖವನ್ನು ನೆನಪಿಸಿಕೊ...
ಪ್ರಯತ್ನಿಸಿದೆ. ಕೆಲವೇ ಗಂಟೆಗಳ ಹಿಂದೆ ಅವನನ್ನು ನೋ...
ನಾದರೂ ಹಾಳಾದ್ದು ಅವನ ಮೂತಿಯೇ ಕಣ್ಣೆದು...
ಮೂಡಲೊಲ್ಲದು. ಆ ಕೋಲ್‌ಮನ್ ಹುಡುಗಿ...
ಅವನ ಮಕ್ಕಳಿರಬಹುದೆ? ಅವರ ಚರ್ಮ ಸಾ...
ತಿಳಿಯಾಗೇನೋ ಇತ್ತು, ಅವರಮ್ಮನ ಹೋಲಿಕೆ...
ಇರಲಿಲ್ಲ ಬಿಡಿ! (ಮಿಸ್ಟರ್ ಕೋಲ್‌ಮನ್ ಬಗ್ಗೆ ಯ...
ಮಾತನ್ನೇ ಎತ್ತುತ್ತಿರಲಿಲ್ಲ, ಒಂತರಾ ಇದ್ದೂ ಇಲ್ಲದ...

ಮಾರನೆಯ ದಿನ ಬೆಳಗ್ಗೆ ನಾನು ಕಣ್ಣು ಬಿ...
ಹೊತ್ತಿಗೆ ನನ್ನ 'ಪಾಪ ಮಿಸೆಸ್ ಕಲಿನನ್!' ಭಾವ ಚಿ...
ಚೆಕ್ಕಿನ ತರಹ ಇಷ್ಟಗಲ ಹಲ್ಲು ಕಿರಿಯುತ್ತಿತ್ತು, ...
ಮಗಳಂದಿರಾಗಿರಬಹುದಾಗಿದ್ದ ಆ ಹೆಣ್ಣು ಮಕ್ಕಳು ...
ಚೆಂದವಾಗಿದ್ದಾರಪ್ಪ! ಕೂದಲನ್ನು ನೇರವಾಗಿ...
ತಾಪತ್ರಯವೇ ಅವರಿಗಿರಲಿಲ್ಲ, ಮಳೆಯಲ್ಲಿ ನೆಂದಾಗಲೂ...
ಅವರ ಜಡೆಗಳು ಜೋತು ಬಿದ್ದ ಹಾವಿನಂತೆ ತ...
ಬಿದ್ದಿರುತ್ತಿದ್ದವು. ಅವರ ತುಟಿಗಳು ಮನ್ಮಥನ ಬಾಣ...
ಸದಾ ಬಾಗಿರುತ್ತಿದ್ದವಲ್ಲ! ಇಂಥ ಮುದ್ದಾದ ಹೆಣ್ಣು ಮ...
ಪಡೆಯುವ ಭಾಗ್ಯ ಮಿಸೆಸ್ ಕಲಿನನ್‌ಗೆ ಇ...
ಹೋಯಿತಲ್ಲ, ಛೆ! ತಾನೇನು ಕಳೆದುಕೊಂಡ...
ಎನ್ನುವುದರ ಅರಿವೂ ಅವಳಿಗಿದೆಯೋ ಇಲ್ಲವೋ!
ಆದರೂ ಮಿಸೆಸ್ ಕಲಿನನ್, ಛೆ! ಪಾಪ!

ಹಲವಾರು ವಾರಗಳ ಮಟ್ಟಿಗೆ ಅವಳ ಬಂ...
ಮರುಕ ಸೂಚಿಸುವ ನನ್ನ ಪ್ರಯತ್ನ ಮುಂದುವರೆ...
ಬೆಳಗ್ಗೆ ಬೇಗನೇ ಕೆಲಸಕ್ಕೆ ಬಂದು, ಸಂಜೆಯಾದರೂ...
ಮಾಡುತ್ತಾ, ಅವಳು ಕಾಲಲ್ಲಿ ಹೇಳಿದ್ದನ್ನು ತಲೆಯ...
ಮಾಡುತ್ತಾ ... ಹೀಗೇ ಏನೇನೋ ಮಾಡುತ್ತಿದ್ದೆ. ...
ತನ್ನದೇ ಮಕ್ಕಳಿದ್ದಿದ್ದರೆ ನನ್ನನ್ನು ಅದು ತಾ, ಇದ...
ಅಲ್ಲಿಗೆ ಹೋಗು, ಇಲ್ಲಿಗೆ ಬಾ ಎಂದು ಅವಳ ವ...
ಹಿಂಬಾಗಿಲಿನಿಂದ ಅವಳ ಗೆಳತಿಯರ ವ...
ಹಿಂಬಾಗಿಲುಗಳಿಗೆ ಸಾವಿರ ಸಲ ಅಲೆಸುವ ...
ಅವಳಿಗಿರುತ್ತಿತ್ತೆ? ಮಿಸೆಸ್ ಕಲಿನನ್, ಛೆ, ಪಾಪ!

ಒಂದು ದಿನ ಮಿಸ್ ಗ್ಲೋರಿ ಜಗಲಿನ ...
ಕುರ್ಚಿಗಳಲ್ಲಿ ಕೂತು ಹರಟೆ ಹೊಡೆಯ...
ಅತಿಥಿನಿಯರಿಗೆಲ್ಲ ಟೀ ಸರಬರಾಜು ಮಾಡಲು ಹೇ...
ಟ್ರೇಯನ್ನು ಮೇಜಿನ ಮೇಲಿಟ್ಟು ಹಿಂತಿರುಗಿ ...
ಮನೆಯತ್ತ ಹೋಗಲು ಹೆಜ್ಜೆಯಿಟ್ಟದ್ದೆ ಅಷ್ಟೆ. ಅವ...
ಕನ್ನಡಕಧಾರಿನಿ "ನಿನ್ನ ಹೆಸರೇನು ಹುಡುಗಿ?" ...
ಕೇಳಿದಳು. ಮಿಸೆಸ್ ಕಲಿನನ್ ತಕ್ಷಣವೇ "ಅವಳು...
ಮಾತಾಡುವುದಿಲ್ಲ, ಅವಳ ಹೆಸರು ಮಾರ್ಗರೆಟ್" ...

"ಮಾತಾಡುವುದಿಲ್ಲವೆ?? ಮೂಕಿಯೆ?"

"ಹಾಗೇನಿಲ್ಲ, ತನಗೆ ಬೇಕಿದ್ದರೆ ಮಾತಾ...
ಇಲ್ಲದಿದ್ದರೆ ಪುಸೆ ತುಂಬ ಸುಂಡಿಲಿ...
ಓಡಾಡಿಕೊಂಡಿರುತ್ತಾಳೆ. ಅಲ್ಲವಾ ಮಾರ್ಗರೆಟ್?"

ನಾನು ಅವಳತ್ತ ನೋಡಿ ಸುಮ್ಮನೆ ನಕ್ಕೆ...
ಹೆಂಗಸು! ಮೊದಲೇ ಹೊಟ್ಟೆಯೆಲ್ಲಾ ಖಾಲಿ!
ನನ್ನ ಹೆಸರನ್ನು ಸರಿಯಾಗಿ ಉಚ್ಚರಿಸಲು ನಾಲಿ...
ಹೊರಳದಂತಹ ಸ್ಥಿತಿ!


**ಓದುಗರ ಗಮನಕ್ಕೆ**

ಕಾರಣಾಂತರಗಳಿಂದ ಈ ವಾರ ವಾಸುರವರ 'ಅಂಚೆನಿಂದ' ಅಂಕಣವು ಪ್ರಕಟವಾಗಿರುವುದಿಲ್ಲ... ಮುಂದಿನ ವಾರದಿಂದ ಎಂದಿನಂತೆ ಪ್ರಕಟವಾಗುವುದು

-ಸಂ.

# ಅಜ್ಞಾನಿ ಮೋದಿಯ ಗುಜರಾತ್‌ನಲ್ಲಿ ಮಕ್ಕಳೂ ಅಜ್ಞಾನದ ಕೂಪದಲ್ಲಿ

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಮೋದಿ ಅಜ್ಞಾನಿ ಮಾತ್ರವಲ್ಲ, ಆರೆಸ್ಸೆಸ್‌ನ ...ೋಮುವಾದಿ ಸಿದ್ಧಾಂತವನ್ನು ತನ್ನ ಪ್ರತಿಕಣದಲ್ಲೂ ...ಂಬಿಸಿಕೊಂಡಿರುವಾತ ಎಂಬುದೀಗ ...ಟಾಬಯಲಾಗಿದೆ. ಆದರೆ ದುರದೃಷ್ಟವಶಾತ್ ...ತನನ್ನು ಮುಖ್ಯಮಂತ್ರಿಯನ್ನಾಗಿಸಿದ ತಪ್ಪಿಗೆ ಆತನ ...ಜರಾತ್ ರಾಜ್ಯದ ಮಕ್ಕಳನ್ನೂ ಅಜ್ಞಾನದ ಕೂಪಕ್ಕೆ ...ೂಡಲಾಗುತ್ತಿದೆ.

ವಿಷಯ ಏನೆಂದರೆ ಗುಜರಾತ್ ರಾಜ್ಯದಲ್ಲಿ ...ರಿಂದ ಎಂಟನೇ ತರಗತಿಯಲ್ಲಿ ಓದುತ್ತಿರುವ ...ಕ್ಕಳ ಶಾಲಾಪಠ್ಯಗಳಲ್ಲಿ ಘನಘೋರವಾದ ಮತ್ತು ...ಪ್ರೋಲಕಲ್ಪಿತ ವಿಷಯಗಳನ್ನು ಸೇರಿಸಲಾಗಿದೆ. ...ಣಾಮವಾಗಿ ಗುಜರಾತ್ ಮಕ್ಕಳು ಕಲಿಯುತ್ತಿರುವ ...ತಗಳು ಹೀಗಿವೆ:

ಮಹಾತ್ಮ ಗಾಂಧಿಯವರನ್ನು 1948ರ ...ಕ್ಟೋಬರ್ 30 ರಂದು ಕೊಲೆ ಮಾಡಲಾಯಿತು.

ಎರಡನೆ ಮಹಾ ಯುದ್ಧದ ಸಂದರ್ಭದಲ್ಲಿ ...ಪಾನ್ ದೇಶವು ಅಮೆರಿಕದ ಮೇಲೆ ಅಣುಬಾಂಬ್ ...ಕಿತು.

ಭಾರತದ ವಿಭಜನೆಯ ನಂತರ 'ಇಸ್ಲಾಮಿಕ್ ...ಸ್ಲಾಮಾಬಾದ್' ಎಂಬ ಹೊಸ ದೇಶವು ...ಟ್ಟಿಕೊಂಡಿತು. ಅದರ ರಾಜಧಾನಿಯು ...ಂದೂಖುಶ್ ಪರ್ವತ ಶ್ರೇಣಿಗಳಿರುವ 'ಖೈಬರ್ ...ಟ್'ನಲ್ಲಿದೆ.

ಎಲ್ಲಾ ದಕ್ಷಿಣ ಭಾರತೀಯರು 'ಮದ್ರಾಸಿ'ಗಳು.

ಪೂರ್ವ ಭಾರತದಲ್ಲಿ ವಾಸಿಸುವ ಜನ ...ಣಕಾಲಿನ ಮೇಲೆ ಬಟ್ಟೆಯನ್ನು ತೊಡುತ್ತಾರೆ. ...ಕ್ಕೆ ಕಾರಣ ಆ ಪ್ರದೇಶದಲ್ಲಿ ಹೆಚ್ಚು ಮಳೆ ಬೀಳುವುದು. ಅಲ್ಲಿನ ಮಹಿಳೆಯರೂ ಸೀರೆಯನ್ನು ವಿಚಿತ್ರವಾಗಿ ಕಟ್ಟಿಕೊಳ್ಳುತ್ತಾರೆ.

ಪೂರ್ವ ಭಾರತದಲ್ಲಿರುವ ಜನ ಹಲಗೆ ಮತ್ತು ಬಿದರಿನಿಂದ ನಿರ್ಮಿಸಿರುವ ಮನೆಗಳಲ್ಲಿ ವಾಸಿಸುತ್ತಾರೆ.

ಭೂಮಿಯು ಗುಂಡಗಿದೆ ಎಂದು ನೀವು ಕೇಳಿರಬಹುದು. ಆದರೆ ಭೂಮಿಯ ಮೇಲಿದ್ದರೆ ಅದು ಗುಂಡಗಿದೆ ಎಂದು ಹೇಗೆ ಗೊತ್ತಾಗುತ್ತದೆ? ಅದಕ್ಕೆ ಚಂದಮಾಮಾ ನಮ್ಮನ್ನು ತನ್ನಲ್ಲಿಗೆ ಕರೆದ. ಅಲ್ಲಿಗೆ ಹೋಗಿದ್ದ ಜನ ಅಲ್ಲಿಂದ ನಮ್ಮ ಭೂಮಿಯ ಫೋಟೋ ತೆಗೆದಿದ್ದರಿಂದ ನಮ್ಮ ಭೂಮಿ ಗುಂಡಗಿದೆ ಎಂದು ಗೊತ್ತಾಯಿತು.

ಪ್ರಾಚೀನ ಕಾಲದಲ್ಲಿ ಭಾರತದ ವಿವಿಧ ಕಡೆ ಮಾನವ ಗೋಧಿ, ಜೋಳ ಇತ್ಯಾದಿಗಳನ್ನು ಒಂದೇ ಸಮಯದಲ್ಲಿ ಕಂಡ. ಆಗ ಮಾನವ ಅವನ್ನೆಲ್ಲ ಸಂಗ್ರಹಿಸಿ ಜೋಪಾನವಾಗಿಟ್ಟ. ಆಗಿನ ಕಾಲದಲ್ಲಿ ಮನುಷ್ಯರು ಪದೇಪದೇ ಭೇಟಿ ಆಗುತ್ತಿದ್ದರಿಂದ ಇಲ್ಲಿ 'ಸಮಾಜವಾದ' ಬೆಳೆಯಿತು. 20 ಲಕ್ಷ ವರ್ಷಗಳ ಹಿಂದೆ ಮಾನವ ಕಂಡುಹಿಡಿದಿದ್ದರ ಫಲವನ್ನು ನಾವು ಇವತ್ತು ಅನುಭವಿಸುತ್ತಿದ್ದೇವೆ.

...... ಇವು ಕೆಲವು ಉದಾಹರಣೆಗಳಷ್ಟೇ.

ಇತಿಹಾಸ ಪಠ್ಯಗಳಲ್ಲೂ ಮಕ್ಕಳಿಗೆ ಸುಳ್ಳುಗಳನ್ನು ಹೇಳಿಕೊಡಲಾಗುತ್ತಿದೆ. ಉದಾಹರಣೆಗೆ ಇತಿಹಾಸದ ಪಠ್ಯದಲ್ಲಿ ಮಧ್ಯಯುಗದ ಬಗ್ಗೆ ಒಂದು ಇಡೀ ಅಧ್ಯಾಯ ಇದ್ದರೂ ಅದರಲ್ಲಿ ಮೊಘಲ್ಲರ ಬಗ್ಗೆ ಒಂದೇ ಒಂದು ಪ್ಯಾರಾ ಇದೆ. ಮಾತ್ರವಲ್ಲ ಅದೇ ಅಧ್ಯಾಯದಲ್ಲಿ ಘಜನಿ ಮೊಹಮದ್ 'ಭಾರತ ಮತ್ತು ಗುಜರಾತ್‌ನಲ್ಲಿರುವ ಸೌರಾಷ್ಟ್ರವನ್ನು ಲೂಟಿ ಮಾಡಿದ' ಎಂಬುದಕ್ಕೇ ಹೆಚ್ಚು ಒತ್ತು ಕೊಡಲಾಗಿದೆ.

ಗುಜರಾತ್‌ನ ಮಹಿಳೆಯರಲ್ಲಿ ಹೆಚ್ಚಿನ ಅಪೌಷ್ಟಿಕತೆ ಇರುವ ಬಗ್ಗೆಯೂ ಮೋದಿ ಲಘುವಾಗಿ ಮಾತನಾಡಿ ತನ್ನ ಮಹಿಳಾ ವಿರೋಧಿ ನಿಲುವನ್ನು ಬಹಿರಂಗಪಡಿಸಿದ್ದ. ಸಹಜವಾಗಿಯೇ ಈ ಮಹಿಳಾ ವಿರೋಧಿ ನಿಲುವೂ ಪಠ್ಯಗಳಲ್ಲಿ ಥಾಳಾಗಿವೆ. ಉದಾಹರಣೆಗೆ ಈ ಪುಸ್ತಕದಲ್ಲಿರುವ ಚಿತ್ರಗಳಲ್ಲಿ ಗಂಡು ಮಕ್ಕಳು ಕಂಪ್ಯೂಟರ್ ಅಥವಾ ಮೊಬೈಲ್‌ಗಳನ್ನು ಬಳಸುತ್ತಿರುವಂತೆ ತೋರಿಸಿದ್ದರೆ ಹೆಣ್ಣು ಮಕ್ಕಳು ಮಾತ್ರ ನೆಲ ಸಾರಿಸುತ್ತಿರುವುದು, ಅಡುಗೆ ಬಡಿಸುತ್ತಿರುವುದು, ಕುಡಿಯುವ ನೀರು ಹೊತ್ತು ಬರುತ್ತಿರುವಂತೆ ತೋರಿಸಲಾಗಿದೆ. ಈ ಪಠ್ಯಗಳಲ್ಲಿ ಎಲ್ಲೂ ಭಾರತದ ಪ್ರಥಮ ಮಹಿಳಾ ಪ್ರಧಾನಿ ಇಂದಿರಾ ಗಾಂಧಿಯವರ ಬಗ್ಗೆಯಾಗಲಿ, ಸುಪ್ರೀಂಕೋರ್ಟಿನ ಪ್ರಥಮ ಮಹಿಳಾ ನ್ಯಾಯಮೂರ್ತಿ ಫಾತಿಮಾ ಬೀವಿ ಅವರ ಬಗ್ಗೆಯಾಗಲಿ ಚಕಾರವೆತ್ತಿಲ್ಲ!

ಇಂತಹ ಅವಾಂತರಗಳಿಗೆ ಕಾರಣವೇನು? ಬೇರೇನಲ್ಲ, ಮೋದಿಯ ಹಿಂದೂತ್ವವಾದಿ ಕೋಮು ಬುದ್ಧಿ. ಯಾಕೆಂದರೆ ನಮ್ಮ ದೇಶದ ಬೇರೆ ರಾಜ್ಯಗಳು ಎನ್‌ಸಿಈಆರ್‌ಟಿ ಕೊಟ್ಟಿರುವ ಮಾರ್ಗಸೂಚಿಯಂತೆಯೇ ಪಠ್ಯಗಳನ್ನು ಸಿದ್ಧಪಡಿಸಿದ್ದರೆ ಗುಜರಾತ್ ಮಾತ್ರ ಎನ್‌ಸಿಈಆರ್‌ಟಿ ಬಗ್ಗೆ ಕ್ಯಾರೆ ಅನ್ನದೆ ತನ್ನದೇ ಆದ ಹಾದಿಯಲ್ಲಿ ಸಾಗಿದೆ.


ಅಂದಹಾಗೆ ಸುಮಾರು ಐವತ್ತು ಸಾವಿರದಷ್ಟು ಮಕ್ಕಳು ಓದುತ್ತಿರುವ ಈ ಪಠ್ಯ ಪುಸ್ತಕಗಳನ್ನು 2001ರಲ್ಲೇ ಸಿದ್ಧಪಡಿಸಿರುವವರು ಗುಜರಾತ್ ಕೌನ್ಸಿಲ್ ಆಫ್ ಎಜುಕೇಶನಲ್ ರಿಸರ್ಚ್ ಅಂಡ್ ಟ್ರೈನಿಂಗ್ (ಜಿಸಿಈಆರ್‌ಟಿ) ಮತ್ತು ಗುಜರಾತ್ ಸ್ಟೇಟ್ ಬೋರ್ಡ್ ಫಾರ್ ಸ್ಕೂಲ್ ಟೆಕ್ಸ್ಟ್ ಬುಕ್ಸ್ (ಜಿಎಸ್‌ಬಿಎಸ್‌ಟಿ) ಎಂಬ ಎರಡು ಸಂಸ್ಥೆಗಳಲ್ಲಿರುವ ಬೃಹಸ್ಪತಿಗಳು! ಇವರೆಲ್ಲ ಎಂತಹ ಅವಿವೇಕಿಗಳು ಎಂಬುದನ್ನು ಅವರು ಸಿದ್ಧಪಡಿಸಿರುವ ಪಠ್ಯಗಳೇ ಎತ್ತಿ ತೋರುತ್ತಿವೆ.

ಈ ಬೃಹಸ್ಪತಿಗಳೇ ಇತ್ತೀಚೆಗೆ ಶಾಲಾ ಪಠ್ಯಪುಸ್ತಕಗಳಲ್ಲಿ ಮೋದಿಯ ಜೀವನಗಾಥೆಯನ್ನು ಸೇರಿಸಬೇಕೆಂದು ಹೊರಟಿದ್ದವರು!!

ಇಂತಹ ಪಾಠಗಳನ್ನು ತನ್ನ ರಾಜ್ಯದ ಮಕ್ಕಳಿಗೆ ಹೇಳಿಕೊಟ್ಟ ವ್ಯಕ್ತಿ ಈಗ ದೇಶದ ಪ್ರಧಾನಿ ಆಗಿದ್ದಾನೆ. ಜೊತೆಗೆ ಸ್ಮೃತಿ ಇರಾನಿ ಎಂಬ ಇನ್ನೋರ್ವ ಅಜ್ಞಾನಿಯನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವೆಯಾಗಿ ನೇಮಿಸಿದ್ದಾನೆ. ಈಗಾಗಲೇ ಈ ಸ್ಮೃತಿ "ಹಿಂದೂ ದೃಷ್ಟಿಕೋನವಿರುವಂತೆ ಶಾಲಾ ಪಠ್ಯಗಳನ್ನು ಪುನರ್ ರಚಿಸಲಾಗುವುದು" ಎಂದು ಬೆದರಿಸಿದ್ದಾಳೆ.

ಇವರಿಬ್ಬರು ಆರೆಸ್ಸೆಸ್ ಜೊತೆ ಸೇರಿಕೊಂಡು ಭಾರತದ ಮಕ್ಕಳನ್ನು ಅಜ್ಞಾನದ ಕೂಪಕ್ಕೆ ದೂಡಿ ಓಟು ಗೆಲ್ಲುವ ಹುನ್ನಾರ ನಡೆಸಲಿದ್ದಾರೆ ಎಂಬುದಂತೂ ಶತಸಿದ್ಧ. ●






# ...ಬೋರ್ಡ್ ಹಾಕಿ ಬಿಡಿ: "ಇಲ್ಲಿ ಹೆಣ್ಣುಮಕ್ಕಳ ದೇಹಗಳು ಅತ್ಯಾಚಾರಕ್ಕಿವೆ.."

ಒಂದು ಪತ್ರ

...ಜೂನ್ 18, 2014ರ ಸಂಚಿಕೆಯ 'ಕಂಡಹಾಗೆ' ಓದಿ ಮನಸ್ಸು ...ಚಿತು. ಬಹುಶಃ ಈ ದೇಶದಲ್ಲಷ್ಟೆ ಹೀಗಾಗಲು ಸಾಧ್ಯವೇನೋ. ಒಬ್ಬ ...ರ್ಭಯ'ಳಿಗೆ ಸಿಗುವ ಬೆಂಬಲ, ನ್ಯಾಯ ಒಬ್ಬ ದಲಿತ ಹೆಣ್ಣುಮಗಳಿಗೆ ...ತ್ತವೆಂಬ ನಂಬಿಕೆಯನ್ನು ಯಾವ ಕಾರಣಕ್ಕೂ ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ...ತ್ತರ ಪ್ರದೇಶ ಇರಬಹುದು ಅಥವಾ ಇನ್ನಾವುದೇ ರಾಜ್ಯದಲ್ಲಿರಬಹುದು, ...ತ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಅತ್ಯಾಚಾರ ಮತ್ತು ದೌರ್ಜನ್ಯ ...ರಣಗಳಲ್ಲಿ ಶೇ. 90 ಭಾಗ ಆಚೆ ಬರುತ್ತಿಲ್ಲ, ಅತ್ಯಾಚಾರಕ್ಕೆ ಈಡಾದ ಆ ...ಣ್ಣುಮಕ್ಕಳು ತಮ್ಮ ನೋವು ಮತ್ತು ಅವಮಾನವನ್ನು ಒಡಲೊಳಗೆ ...ಟ್ಟುಕೊಂಡು ಸತ್ತು ಬದುಕುತ್ತಿದ್ದಾರೆ.

...ಯಾಕೆ ಎಲ್ಲರೂ ದಲಿತ ಹೆಣ್ಣು ಮಕ್ಕಳನ್ನೂ ನಮ್ಮ ಮಕ್ಕಳು ...ಮಕೊಳ್ಳುವುದಿಲ್ಲ? ಉತ್ತರಪ್ರದೇಶದ ಚಿತ್ರಣ ನೋಡಿದರೆ ಎಂತಹವರ ...ಷ್ಟೂ ಕೆರಳುತ್ತದೆ. ಬಂದೂಕು ತೆಗೆದುಕೊಂಡು ಎಲ್ಲರನ್ನೂ ಹೊಡೆದುಕೊಂಡು ...ೀಣ ಎನಿಸುತ್ತದೆ. ಜಾತಿಯನ್ನೇ ಹೊದ್ದು ಮಲಗುವ ಈ ದೇಶದಲ್ಲಿ ...ಸ್ಥಿತಿ ಮುಂದೆ ಬದಲಾಗುತ್ತದೆ ಎಂಬ ನಂಬಿಕೆಯೂ ಇಲ್ಲ. ದಲಿತ ...ಣ್ಣುಮಕ್ಕಳ ಬದುಕನ್ನು ಹಸನುಗೊಳಿಸುವ ಯಾವುದಾದರೂ ಮಾರ್ಗ ...ರೆ ಬರೆಯಿರಿ.

... 'ಕಂಡಹಾಗೆ' ಓದಿದನಂತರ ಒಂದು ಪದ್ಯ ಬರೆದಿದ್ದೇನೆ.

...ರ್ಡ್ ಹಾಕಿ ಬಿಡಿ
... ಹೆಣ್ಣುಮಕ್ಕಳ ದೇಹಗಳು ಅತ್ಯಾಚಾರಕ್ಕಿವೆ.."

... ಹೇಳಲಿ ತಂಗಿ
...ಕರುಳು ಕತ್ತರಿಸಿ ಹಾರ ಹಾಕಬೇಕಿದೆ ಭಾರತಾಂಬೆಗೆ
...ನ್ನು ಕಾಪಾಡಿಕೊಳ್ಳದ ಕಾರಣ
... ಒತ್ತರಿಸಿ, ಮನಸ್ಸು ಸುಟ್ಟುಹೋಗಿದೆ

...ವ ದೇಶದಲ್ಲಿದ್ದೇವೆ ತಂಗಿ
...ರಿಸುತ್ತಾರೆ, ಕತ್ತರಿಸುತ್ತಾರೆ
...ಮಕ್ಕಳ ಎದುರು ಅತ್ಯಾಚಾರ ಮಾಡುತ್ತಾರೆ
... ತಂಗಿ, ಅಷ್ಟ ಎಂದರೂ ಹರಿದು ಮುಕ್ಕುತ್ತಾರೆ

ನಾನು ನೀನು ಓದಿದ ರಾಕ್ಷಸರೆಲ್ಲರೂ ಇಲ್ಲೇ ಇದ್ದಾರೆ,
ಮನುಷ್ಯ ರೂಪದಲ್ಲಿದ್ದಾರೆ
ದಯವಿಟ್ಟು ಕ್ಷಮಿಸು ತಂಗಿ, ನಾವು ಹುಟ್ಟಿದ ನೆಲ ದೇವರಾಣೆ ನಮ್ಮದಲ್ಲ


ತಂಗಿ
ಅದೆಷ್ಟು ನರಳಿರಬೇಕು ಈ ನೆಲ
ನೇಣು ಹಾಕಿದ ನಿನ್ನ ಪಾದ ಮತ್ತೆ ಭೂಮಿಗೆ ಸೋಕಲು ತಡವಿದಾಗ
ಪಾಪ ಗಾಳಿ, ಬೆಳಕು, ಮರದ ಕೊಂಬೆ, ಹಕ್ಕಿಪಕ್ಷಿಗಳು
ಪ್ರಳಯ ಆಗಬಾರದಿತ್ತೇ ಅಂದು ಕಿರುಚಾಡಿದವಂತೆ

ನಿನ್ನ ನೇಣು ಹಾಕಿದ ರೆಂಬೆ ಮೈ ಸುಟ್ಟುಕೊಂಡರೂ ಮುರಿದು ಬೀಳದ
ಕಾರಣ ತಾನೇ ಆತ್ಮಹತ್ಯೆ ಮಾಡಿಕೊಂಡಿತಂತೆ

ಸೂರ್ಯ ಕಣ್ಣಿಗೆ ಚೂರಿ ಹಾಕಿಕೊಂಡು ರಕ್ತ ಕಾರಿದನಂತೆ
ಆತನ ಬತ್ತಿ ಹೋದ ರಕ್ತದ ಬೆಳಕೇ ನಿಮ್ಮ ಮೈಮೇಲೆ ಸೋಕಿದ್ದು


ಉಳಿಸಿಬಿಡಿ ಅವರನ್ನು
ಕೀರುತ್ತಲೇ.. ಪಕ್ಷಿಗಳು ರೆಕ್ಕೆ ಕತ್ತರಿಸಿಕೊಂಡು
ಯಾವುದೋ ಬಂಡೆಗೆ ಡಿಕ್ಕಿ ಹೊಡೆದು ಸತ್ತು ಹೋದವು
ಆದರೂ ನಿಮ್ಮ ಕೂಗು ನಮಗೆ ಕೇಳಿಸಲಿಲ್ಲ
ನಮ್ಮ ಕಿವಿಗೆ ಕಾದ ಕಬ್ಬಿಣದ ಸೀಸವನ್ನು ಹೊಯ್ಯು ದೇವರೇ..

ಆದರೂ ಗಹಗಹಿಸಿ ನಗುತ್ತಿದ್ದಾರೆ, ಕೇಳಲು ನೀವಿಲ್ಲ?
ಹೆಸರಿಗಿದು ಗಾಂಧಿ ಮೆಟ್ಟಿದ ನಾಡು
ಬೋರ್ಡ್ ಹಾಕಿ ಬಿಡಿ
ಇಲ್ಲಿ ದಲಿತ ಹೆಣ್ಣುಮಕ್ಕಳ ದೇಹಗಳು ಅತ್ಯಾಚಾರಕ್ಕಿವೆ
ನೇಣು ಹಾಕಲು ಜಾತಿಯ ಮರಗಳಿವೆ
ಇಲ್ಲಿ ನೋಡಲು ಕಣ್ಣುಗಳಿಲ್ಲ, ಕೇಳಲು ಬಾಯಿಗಳಿಲ್ಲ
ಆದರೂ ಇಲ್ಲಿ ಬದುಕಿದ್ದೇವೆ
ಜಾತಿಯ ಭೂತಗಳೇ ನಮ್ಮನ್ನೂ ಕೊಂದುಬಿಡಿ
ಭಾರತಾಂಬೆಯೇ..



ನಮ್ಮ ಕಾಲುಗಳು ಸುಡುತ್ತಿವೆ. ಮನಸ್ಸುಗಳು ಬೇಯುತ್ತಿವೆ
ನಿಂತ ನೆಲ ನಮ್ಮದಲ್ಲ - ಕ್ಷಮಿಸು ಭಾರತಾಂಬೆ
ಈ ಜಾತಿಯ ನಾಡಲ್ಲಿ ಹುಟ್ಟಬಾರದಿತ್ತು
ನಮಗೆ ಗೊತ್ತಾಗಿ ಹೋಗಿದೆ ಇದು ನಮ್ಮ ನೆಲವಲ್ಲ, ನಮ್ಮವರು ಇಲ್ಲಿಲ್ಲ.

• ನಾಗರಾಜ್ ಹೆತ್ತೂರ್, ಹಾಸನ




ಕೋಬಾನ್




ಹ್ಯಾರೀಸ್ ಸಫಿರೋವಿಚ್



ಅಡ್ಮಿಟ್ ಮೆಹಮದಿ



ಕರೀಮ್ ಮುಸ್ತಾಫಾ ಬೆಂಜೆಮಾ



ಮೆಸೂತ್ ಓಜಿಲ್

# ವಿಶ್ವಕಪ್: ಯುರೋಪಿನ ತಂಡಗಳನ್ನು ಶ್ರೀಮಂತಗೊಳಿಸಿದ ಧಾರ್ಮಿಕ ಅಲ್ಪಸಂಖ್ಯಾತರು

**ಬ್ರೆಜಿಲ್ ದೇಶದಲ್ಲಿ ನಡೆಯುತ್ತಿರುವ ವಿಶ್ವ ಕಪ್ ಫುಟ್‌ಬಾಲ್ ಪಂದ್ಯದಲ್ಲಿ ಎಲ್ಲಾ ದೇಶಗಳಿಗೆ - ಅದರಲ್ಲೂ ಮುಸಲ್ಮಾನ ದೇಶಗಳಿಗೆ - ಒಂದು ಪಾಠ ಅಡಗಿದೆ.**

ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ, ಅದರಲ್ಲೂ ಧಾರ್ಮಿಕ ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ, ಯೂರೋಪ್ ದೇಶಗಳಿಂದ ಇತ್ತೀಚೆಗೆ ಬರುತ್ತಿರುವ ಎಲ್ಲಾ ಸುದ್ದಿಗಳು ನಕಾರಾತ್ಮಕವಾಗಿಲ್ಲ ಎಂಬುದೇ ನೆಮ್ಮದಿಯ ಸಂಗತಿ. ಉದಾಹರಣೆಗೆ ಈಗ ಬ್ರೆಜಿಲ್ ದೇಶದಲ್ಲಿ ನಡೆಯುತ್ತಿರುವ ಫೀಫಾ ವಿಶ್ವಕಪ್ ಪಂದ್ಯಾವಳಿಯಲ್ಲಿ ಮೊನ್ನೆ ಫ್ರಾನ್ಸ್ ದೇಶದ ತಂಡ ಹೊಂಡೂರಾಸ್ ವಿರುದ್ಧ 3-0 ಗೋಲ್‌ಗಳ ಅಂತರದಿಂದ ಜಯ ಸಾಧಿಸಿತು. ಆ ಮೂರೂ ಗೋಲ್‌ಗಳನ್ನು ಬಾರಿಸಿದ್ದು ಕರೀಮ್ ಮುಸ್ತಾಫಾ ಬೆಂಜೆಮಾ. ಆಲ್ಜೀರಿಯ ಮೂಲದವನಾದ ಕರೀಮ್ ಮುಸಲ್ಮಾನ. ಇತ್ತೀಚೆಗೆ ಫ್ರಾನ್ಸ್ ದೇಶವು ಮುಸಲ್ಮಾನ ಮಹಿಳೆಯರು ಬುರ್ಖಾವನ್ನು ಮತ್ತು ಸಿಖ್ ಪುರುಷರು ಪೇಟವನ್ನು ಧರಿಸಕೂಡದೆಂಬ ಕಾನೂನನ್ನು ಜಾರಿಗೆ ತಂದು ವಿವಾದಕ್ಕೆ ಗುರಿಯಾಗಿತ್ತು.


ಹಾಗೆಯೇ ಸ್ವಿಟ್ಜರ್‌ಲ್ಯಾಂಡ್ ದೇಶ ಕೂಡ ಇತ್ತೀಚೆಗೆ ಮಸೀದಿಗಳ ಮೇಲೆ 'ಮಿನಾರ್'ಗಳನ್ನು ನಿರ್ಮಿಸಬಾರದೆಂಬ ಕಾನೂನನ್ನು ಜಾರಿಗೆ ತಂದಿದೆ. ಮೊನ್ನೆ ಬ್ರೆಜಿಲ್‌ನಲ್ಲಿ ಈಕ್ವೆಡಾರ್ ತಂಡದ ವಿರುದ್ಧ ಸ್ವಿಟ್ಜರ್‌ಲ್ಯಾಂಡ್ ತಂಡ 2-1 ಗೋಲ್‌ಗಳ ಅಂತರದಿಂದ ಜಯ ಸಾಧಿಸಿತು. ಆ ಎರಡೂ ಗೋಲ್‌ಗಳನ್ನು ಬಾರಿಸಿದ್ದು ಇಬ್ಬರು ಮುಸಲ್ಮಾನರು. ಮೊದಲನೆ ಗೋಲ್‌ಅನ್ನು ಹ್ಯಾರಿಸ್ ಸಫಿರೋವಿಚ್ (ಸಫೀರ್) ಸಾಧಿಸಿದ್ದರೆ ಎರಡನೆ ಗೋಲ್‌ಅನ್ನು ಗೆದ್ದಿದ್ದು ಅಡ್ಮಿಟ್ ಮೆಹಮದಿ (ಅಹಮದ್ ಮೆಹಮೂದ್). ಜೊತೆ… ಸ್ವಿಟ್ಜರ್‌ಲ್ಯಾಂಡ್ ತಂಡದ ನಾಯಕ ಕೋಬಾನ್ ಇಂಲರ್… ಕೂಡ ಮುಸಲ್ಮಾನನೇ. ಈಗ ಸ್ವಿಟ್ಜರ್‌ಲ್ಯಾಂಡ್ ತಂಡದಲ್ಲಿರುವ… 23 ಸದಸ್ಯರ ಪೈಕಿ ಎಂಟು ಜನ ಮುಸಲ್ಮಾನರು (ಅವರೆಲ್… ಮಾಜಿ ಯುಗೊಸ್ಲಾವಿಯಾ ದೇಶದಿಂದ ವಲಸ… ಬಂದಿರುವವರು).

ಮೊನ್ನೆ ಸ್ವಿಟ್ಜರ್‌ಲ್ಯಾಂಡ್ ಪರ ಮೊದಲನೆ ಗೋಲ್… ಬಾರಿಸಿದ ಸಫಿರೋವಿಚ್ ಆ ದೇಶದ 'ಅಂಡರ್ 17… ತಂಡದಲ್ಲೂ ಭಾಗಿಯಾಗಿದ್ದ. ಆ ತಂಡದಲ್ಲಿ ಅರ್ಧಕ್ಕಿಂತ… ಹೆಚ್ಚಿನ ಸದಸ್ಯರು ಮುಸಲ್ಮಾನರಾಗಿದ್ದರು. ಅವರೆಲ್ಲ 'ಅಂಡರ್ 17' ಪಂದ್ಯಾವಳಿಯನ್ನು ಗೆದ್ದು ಸ್ವಿಟ್ಜರ್‌ಲ್ಯಾಂಡ್ ದೇಶ…

# 'ಸೂಪರ್‌ವ್ಯಾನ್' ಪರ್ಸಿ!







ಗಿಲ್ಲೆರ್ಮೊ ಒಚಾವೊ

ಬರುವ ಜುಲೈ 16ರಂದು ಅಂತಿಮವಾಗಿ ಯಾವ ದೇಶ ಈ ಬಾರಿಯ ಫುಟ್‌ಬಾಲ್ ವಿಶ್ವಕಪ್ ಗೆಲ್ಲುತ್ತದೆಯೋ ಗೊತ್ತಿಲ್ಲ ಆದರೆ 2014ರ ಪಂದ್ಯಾವಳಿಯಲ್ಲಿ ಅತ್ಯದ್ಭುತವಾದ ಗೋಲ್ ಹೊಡೆದದ್ದು ಯಾರು ಎಂಬುದಂತೂ ಈಗಾಗಲೇ ಸ್ಪಷ್ಟವಾಗಿದೆ.

ಕಳೆದ ಶನಿವಾರ ಹಾಲೆಂಡ್ ಮತ್ತು ಸ್ಪೇನ್ ನಡುವೆ ಪಂದ್ಯ ನಡೆಯುತ್ತಿತ್ತು. 2010ರಲ್ಲಿ ವಿಶ್ವ ಚಾಂಪಿಯನ್ ಆಗಿದ್ದ ಸ್ಪೇನ್ ತಂಡ ಹಾಲೆಂಡ್ ವಿರುದ್ಧ ಸೋಲುವುದು ಅಸಾಧ್ಯ ಎಂದೇ ಬಹಳಷ್ಟು ಜನ ನಂಬಿದ್ದರು. ಅದಕ್ಕೆ ತಕ್ಕಂತೆ ಸ್ಪೇನ್ ಕೂಡ ಆರಂಭದಲ್ಲೇ ಒಂದು ಗೋಲ್ ಬಾರಿಸಿ ಮುನ್ನಡೆದಿತ್ತು.

ಆಗ ಒಂದು ಚಮತ್ಕಾರ ನಡೆದುಹೋಯಿತು.

ರಾಬಿನ್ ವ್ಯಾನ್ ಪರ್ಸಿ ಎಂಬ ಹಾಲೆಂಡ್ ಆಟಗಾರನತ್ತ ಬಾಲ್ ಹಾರಿ ಬಂತು. ಪರ್ಸಿ ಇನ್ನೂ ಸ್ಪೇನ್ ತಂಡದ ಗೋಲ್ ದಿಕ್ಕಿನತ್ತ ಓಡುತ್ತಿದ್ದ. ಬಾಲ್ ಭೂಮಿಗಿಳಿದ ನಂತರ ಅದನ್ನು ಕಿಕ್ ಮಾಡುವಷ್ಟು ಸಮಯ ಆತನಿಗಿರಲಿಲ್ಲ. ಆಗ ಪರ್ಸಿ ಏನು ಮಾಡಿದನೆಂದರೆ ಓಡೋಡುತ್ತಲೇ ಹಾರಿ ಬಾಲ್‌ಗೆ ಬಲವಾಗಿ ಡಿಕ್ಕಿ ಹೊಡೆದ. ಪರ್ಸಿ ಬಾಲ್‌ಗೆ ಡಿಕ್ಕಿ ಹೊಡೆದಾಗ ಆತ ಗೋಲ್‌ನಿಂದ ಇನ್ನೂ 135 ಅಡಿಯಷ್ಟು ದೂರವಿದ್ದ. ಆದರೂ ಆತನ ಗುರಿ ಅದೆಷ್ಟು ನಿಖರವಾಗಿತ್ತೆಂದರೆ ಗೋಲರ್ ಸ್ತಂಭೀಭೂತನಾಗಿ ನೋಡುತ್ತಿದ್ದಂತಯೇ ಬಾಲ್ ಗೋಲ್ ಹೊಕ್ಕಿಯೇ ಬಿಟ್ಟಿತು!

ಪರ್ಸಿ ಹೊಡೆದ ಈ ಗೋಲ್ ಜಗತ್ತಿನಾದ್ಯಂತ ಸಂಚಲನವನ್ನೇ ಮೂಡಿಸಿತು. ಪರ್ಸಿಯ 'ಹಾರು'ವಿಕೆಯನ್ನು… ಕೊಂಡಾಡಿದ ಜನ ಆತನಿಗೆ 'ಸೂಪರ್‌ವ್ಯಾನ್' ಪರ್ಸಿ… ಎಂದು ಮರುನಾಮಕರಣ ಮಾಡಿದರು. ಮಾತ್ರವಲ್ಲ ಆತ… ಹಾರುತ್ತಿರುವ ಫೋಟೋ ಬಳಸಿ ಹಲವಾರು ಹೊಸ… 'ಫೋಟೋ'ಗಳನ್ನು ಸೃಷ್ಟಿಸಿದರು. ಅಂತಹ ಹಲವು… ಫೋಟೋಗಳನ್ನು ನಮ್ಮ ಓದುಗರಿಗಾಗಿ ಇಲ್ಲಿ ನೀಡಿದ್ದೇವೆ…

ಅಂದಹಾಗೆ ಆ ಪಂದ್ಯದಲ್ಲಿ ಸ್ಪೇನ್ 1-5 ಗೋಲ್‌ಗ… ಅಂತರದಲ್ಲಿ ಮಣ್ಣುಮುಕ್ಕಿತು.

ಈ ಬಾರಿ ಪರ್ಸಿಯಂತೆ ಸಂಚಲನ ಮೂಡಿಸಿ… ಮತ್ತೊಬ್ಬ ಆಟಗಾರನೆಂದರೆ ಗಿಲ್ಲೆರ್ಮೊ ಒಚಾವೊ. ಮೆಕ್ಸಿಕೋ… ತಂಡದ ಗೋಲ್‌ಕೀಪರ್ ಆದ ಒಚಾವೊ ನಿನ್ನೆ ಅದೆಷ್ಟು… ಚೆನ್ನಾಗಿ ಆಡಿದನೆಂದರೆ ಬ್ರೆಜಿಲ್ ತಂಡಕ್ಕೆ ಒಂದೇ ಒಂದು… ಗೋಲ್ ಕೂಡ ಬಾರಿಸಲು ಸಾಧ್ಯವಾಗಲಿಲ್ಲ.

ಹಾಗೆ ನೋಡಿದರೆ ಈ ಒಚಾವೊ ಮೂರನೆ ಬಾರಿ… ಮೆಕ್ಸಿಕೋ ತಂಡಕ್ಕೆ ಆಯ್ಕೆಯಾಗಿದ್ದರೂ ಇಲ್ಲಿಯತನ… ಆತನಿಗೆ ವಿಶ್ವಕಪ್‌ನಲ್ಲಿ ಆಡಲು ಒಮ್ಮೆಯೂ ಅವಕಾಶ… ಸಿಕ್ಕಿರಲೇ ಇಲ್ಲ. ಈ ಬಾರಿಯೂ ಆತನನ್ನು ಎಕ್ಸ್‌ಟ್ರಾ… ಆಟಗಾರನಾಗಿ ತಂಡಕ್ಕೆ ಸೇರಿಸಿಕೊಳ್ಳಲಾಗಿತ್ತು. ಆದರೆ ಕೊ… ಗಳಿಗೆಯಲ್ಲಿ ಆತನನ್ನು ಗೋಲ್ ಕೀಪರ್ ಕಾರ್ಯ… ನಿಯೋಜಿಸಲಾಗಿತ್ತು.

ಅವಕಾಶ ಸಿಕ್ಕಿದ್ದೇ ತಡ ಒಚಾವೊ 'ಸೀಳಲಾಗ… ಗೋಡೆ'ಯಂತೆ ನಿಂತುಬಿಟ್ಟ. ಆತನ ಆಟವನ್ನು ನೋಡಿ… ಜನ "ಆತನ ಕೈಯಲ್ಲಿ ಆರು ಬೆರಳುಗಳಿವೆ. ಆದ್ದರಿಂ… ಆತ ಇಷ್ಟು ಸೊಗಸಾಗಿ ಗೋಲ್ ಕಾಪಾಡಬಲ್ಲ" ಎಂ… ಸುದ್ದಿಯನ್ನು ಹಬ್ಬಿಸಲಾರಂಭಿಸಿದರು. ಜೊತೆಗೆ ಆ…




ರಾಬಿನ್ ವ್ಯಾನ್ ಪರ್ಸಿಯ ನೈಜ ಸಾಹಸದ ಫೋಟೋಗಳು

ಷ್ಟು ತಂದಿದ್ದರು. 2008 ತನಕ ಸ್ವಿಟ್ಜರ್‌ಲ್ಯಾಂಡ್ ತಂಡದ ವಾಗಿ ಅತಿಹೆಚ್ಚು ಗೋಲ್‌ಗಳನ್ನು ದಾಖಲಿಸಿದ್ದ ಹಿರಿಮೆ ಬಲ್ಲೈ ತುರ್ಕ್ಲಮಾಜ್ ಎಂಬಾತನ ಹೆಸರಲ್ಲಿತ್ತು, ಟರ್ಕಿ ಮೂಲದ ಈತನೂ ಮುಸಲ್ಮಾನನೇ.

ಇತ್ತೀಚೆಗೆ ಯೂರೋಪ್ ದೇಶಗಳಿಂದ ಎರಡು ತದ ವಾದಗಳು ಕೇಳಿಬರುತ್ತಿವೆ. ಬಹುಸಂಖ್ಯಾತರ ದ ಹೀಗಿದೆ: ಯೂರೋಪ್ ದೇಶಗಳಲ್ಲಿ ನೆಲೆಸಿರುವ ರ್ಣ (ಕರಿಯರು) ಮತ್ತು ಧಾರ್ಮಿಕ (ಮುಸಲ್ಮಾನ) ಲ್ಪಸಂಖ್ಯಾತರು ಸರ್ಕಾರಿ ದಾನಗಳನ್ನು ಅವಲಂಬಿಸಿದ್ದಾರಲ್ಲದೆ ಚ್ಚೆಚ್ಚು ಮಕ್ಕಳಿಗೆ ಜನ್ಮ ನೀಡುತ್ತಿದ್ದಾರೆ. ಅಲ್ಪಸಂಖ್ಯಾತರ ದ ಹೀಗಿದೆ: ಉದ್ಯೋಗ, ಕ್ರೀಡೆ ಇತ್ಯಾದಿ ವಲಯಗಳಲ್ಲಿ ಲ್ಪಸಂಖ್ಯಾತರಿಗೆ ಸಮಾನ ಅವಕಾಶಗಳನ್ನು ಾಕರಿಸಲಾಗುತ್ತಿದೆ.

ಇಂತಹ ಪರಸ್ಪರ ಅಪನಂಬಿಕೆಗಳು ಆ ದೇಶಗಳಲ್ಲಿನ ಹಾರ್ದ ವಾತಾವರಣವನ್ನು ಹಾಳು ಮಾಡುವುದರಲ್ಲಿ ಶಸ್ವಿಯಾಗಿವೆ. ಆದರೀಗ ನಡೆಯುತ್ತಿರುವ ವಿಶ್ವ ಕಪ್ ದ್ಯಾವಳಿಗಳಿಂದ ಅಲ್ಪಸಂಖ್ಯಾತರು ವಲಸೆಹೋದ ಶಗಳಿಂದ ಹೇಗೆ ಫಾಯಿದೆ ಪಡೆದಿದ್ದಾರೆಯೋ ಹಾಗೆಯೇ ದೇಶಗಳೂ ವರ್ಣ, ಭಾಷೆ ಮತ್ತು ಧಾರ್ಮಿಕ ಲ್ಪಸಂಖ್ಯಾತರಿಗೆ ಅವಕಾಶಗಳನ್ನು ಕೊಡುವ ಮೂಲಕ ಭ ಪಡೆದಿವೆ ಎಂಬುದು ಸಾಬೀತಾಗಿದೆ. ವಿಶ್ವಕಪ್ ದ್ಯಾವಳಿಯಲ್ಲಿ ಭಾಗವಹಿಸುತ್ತಿರುವ 13 ತಂಡಗಳ ಐದು ತಂಡಗಳಲ್ಲಿ ಮುಸಲ್ಮಾನರಿದ್ದಾರೆ. ಹಾಗೆಯೇ ಯರು ಕೂಡ ಹೆಚ್ಚಿನ ತಂಡಗಳಲ್ಲಿ ಸದಸ್ಯರಾಗಿದ್ದಾರೆ.

ಜರ್ಮನಿ ತಂಡದ ಸದಸ್ಯನಾಗಿರುವ ಮೆಸೂತ್ ಸೂದ್) ಓಜಿಲ್ ಅವರನ್ನು 2001ರಲ್ಲಿ "ಜರ್ಮನ್ ಮಾಜದೊಂದಿಗೆ ಯಶಸ್ವಿಯಾಗಿ ಒಂದಾದ ಉತ್ತಮ ದಾಹರಣೆ" ಎಂದು ಕೊಂಡಾಡಲಾಯಿತಲ್ಲದೆ ಅದಕ್ಕೊಂದು ರಿಗೆ 'ಬ್ಯಾಂಬಿ' ಪ್ರಶಸ್ತಿಯನ್ನೂ ನೀಡಿ ಗೌರವಿಸಲಾಯಿತು. ನು ಮುಸಲ್ಮಾನ ಎಂಬುದರ ಬಗ್ಗೆ ಯಾವ ುಚ್ಚುಮರೆಯನ್ನೂ ಮಾಡದ ಓಜಿಲ್ ಪ್ರತಿ ಪಂದ್ಯ ುವಾಗುವ ಮುನ್ನ ತಾನು ಕುರ್‌ಆನ್ ಓದುತ್ತೇನೆಂದು ಳಿದ್ದಾರೆ. ಇಂತಹ ಓಜಿಲ್ ಯಾವುದೇ ತಂಡದ ಗವಾಗಿದ್ದರೂ - ಅದರಲ್ಲೂ ಈಗ ಅವರು ದತ್ತು ದುಕೊಂಡಿರುವ ಜರ್ಮನಿ ದೇಶದ ತಂಡಕ್ಕೆ -ಅವರು ಲ್ಲ ಪ್ರತಿಭೆಯನ್ನು ಉಪಯೋಗಿಸಿ ಆಡುತ್ತಾರೆ.

ಈಗ ಫ್ರಾನ್ಸ್ ದೇಶದ ತಂಡದಲ್ಲಿರುವ ಮಮದೊ ಶಕೋ ಅವರು ಪ್ಯಾರಿಸ್ ನಗರದ ಕೊಳಗೇರಿಗಳಲ್ಲಿ ಬೆಳೆದವರು. ಆದರೀಗ ಅವರು ಯೂರೋಪಿನ ಪ್ರತಿಷ್ಠಿತ ಕ್ಲಬ್‌ಗಳಲ್ಲಿ ಒಂದಾದ ಎಫ್.ಸಿ.ಲಿವರ್‌ಪೂಲ್ ತಂಡದಲ್ಲಿ ಒಬ್ಬರಾಗಿದ್ದಾರೆ. ಅವರು ಫುಟ್ ಬಾಲ್ ಕ್ರೀಡೆಯ ಮೂಲಕ ಪಡೆದ ಮೊಟ್ಟಮೊದಲ ಸಂಭಾವನೆಯಲ್ಲಿ ತನ್ನ ತಂದೆಯನ್ನು ಮೆಕ್ಕಾಗೆ ಕಳುಹಿಸಿದ್ದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಧಾರ್ಮಿಕ ಅಲ್ಪಸಂಖ್ಯಾತರ ಕೊಡುಗೆಗಳನ್ನು ಪರಿಗಣನೆಗೆ ತೆಗೆದುಕೊಂಡಿರುವ ಬಾಯರ್ನ್ ಮ್ಯೂನಿಚ್ ಮತ್ತು ಮ್ಯಾಂಚೆಸ್ಟರ್ ಯುನೈಟೆಡ್ ತರಹದ ಕ್ಲಬ್‌ಗಳು ಅಲ್ಪಸಂಖ್ಯಾತರ ಧಾರ್ಮಿಕ ನಂಬುಗೆಗಳಿಗೆ ಅನುವು ಮಾಡಿಕೊಡಲು ಸರ್ವಧರ್ಮ ಪ್ರಾರ್ಥನಾ ಹಾಲ್‌ಗಳನ್ನು ನಿರ್ಮಿಸಿವೆ.

ಇಂತಹ ಉದಾಹರಣೆಗಳಲ್ಲಿ ಹಲವು ದೇಶಗಳಿಗೆ - ನಿರ್ದಿಷ್ಟವಾಗಿ ಅಲ್ಪಸಂಖ್ಯಾತರನ್ನು ಕಡೆಗಣಿಸುವಲ್ಲಿ ಕೆಟ್ಟ ದಾಖಲೆಯನ್ನು ಹೊಂದಿರುವ ಮುಸಲ್ಮಾನ ದೇಶಗಳಿಗೆ - ಕೆಲವು ಪಾಠಗಳು ಅಡಗಿವೆ. ಎಲ್ಲರನ್ನೂ ಜೊತೆಗೂಡಿಸಿ ಮುನ್ನಡೆವ ದೇಶದ ಸಮಾಜ ಉದ್ಧಾರವಾಗುತ್ತದೆ; ಅದರ ಬದಲಾಗಿ ಧಾರ್ಮಿಕ, ಭಾಷಿಕ ಮತ್ತು ಇತರೆ ಸಮುದಾಯಗಳ ಅಲ್ಪಸಂಖ್ಯಾತರನ್ನು ಕಡೆಗಣಿಸುವ ದೇಶಗಳು ಆಯಾ ಸಮುದಾಯಗಳಲ್ಲಿ ಇರುವ ಪ್ರತಿಭೆಗಳನ್ನು ಉಪಯೋಗಿಸಿಕೊಳ್ಳದೆ ವಿಜ್ಞಾನ, ಕ್ರೀಡೆ, ಕಲೆ, ಇತ್ಯಾದಿ ವಲಯಗಳಲ್ಲಿ ವಿಜಯಿ ಆಗದೆ ವಿಫಲವಾಗುತ್ತದೆ ಎಂಬುದೇ ಇಲ್ಲಿರುವ ಪಾಠ. ಪಾಕಿಸ್ತಾನದಂತಹ ಮುಸಲ್ಮಾನ ದೇಶವು ಭಾರತದ ಧಾರ್ಮಿಕ ಅಲ್ಪಸಂಖ್ಯಾತರು ಪ್ರತಿ ಕ್ಷೇತ್ರದಲ್ಲೂ - ಉದಾಹರಣೆಗೆ ಟಾಟಾ, ಅಜೀಮ್ ಪ್ರೇಮ್‌ಜಿ ಮತ್ತು ಬಾಲಿವುಡ್‌ನ ಖಾನ್‌ಗಳು - ಹೇಗೆ ನಮ್ಮ ದೇಶದ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಿದೆ.

ಭಾರತದಲ್ಲೇ ಆಗಲಿ, ಜಗತ್ತಿನ ಇನ್ನಾವುದೇ ದೇಶದಲ್ಲೇ ಆಗಲಿ, ಅಲ್ಪಸಂಖ್ಯಾತರಿಗೆ ಸಮಾನ ಹಕ್ಕುಗಳನ್ನು ನೀಡಿದರೆ ಬಹಳಷ್ಟನ್ನು ಸಾಧಿಸಬಹುದು ಎಂಬುದು ಅರ್ಥವಾಗಬೇಕಿದೆ.

ಅದಕ್ಕೆ ಉತ್ತಮ ಉದಾಹರಣೆ ನಮ್ಮ ಮಾಜಿ ರಾಷ್ಟ್ರಪತಿ ಎ.ಪಿ.ಜೆ.ಅಬ್ದುಲ್ ಕಲಾಂ. ಕಲಾಂ ಅವರಿಗೆ ಸಮಾನ ಅವಕಾಶಗಳು ಸಿಗದಿದ್ದರೆ ವಿಜ್ಞಾನ ವಲಯದಲ್ಲಿ ನಮ್ಮ ದೇಶದ ಸಾಧನೆ ಎಷ್ಟು ಪೇಲವವಾಗಿರುತ್ತಿತ್ತು?!

● ಅಮೀನ್ ಅಹಮದ್, ತುಮಕೂರು


ರಾಬಿನ್ ವ್ಯಾನ್ ಪರ್ಸಿಯ ಸಾಹಸದ ಸೃಷ್ಟಿ ಫೋಟೋಗಳು



ಳುಗಳಿರುವ ಒಚಾವ್ರೋ ಫೋಟೋವನ್ನೂ ತರಜಾಲದಲ್ಲಿ ಹಂಚಿಕೊಳ್ಳಲಾರಂಭಿಸಿದರು. ವಾಸ್ತವವಾಗಿ ಾವ್ರೋ ಕೈಯಲ್ಲಿ ಇರುವುದು ಐದು ಬೆರಳುಗಳು ತ್ರ!

ಈಗ ಜಗತ್ತಿನಾದ್ಯಂತ ಏರಿರುವ ಫುಟ್‌ಬಾಲ್ ಸಾಂಬಾ ಅದಿನ್ನೆಷ್ಟು ಅದ್ಭುತವಾದ ದೃಶ್ಯಗಳನ್ನು ಕಾಣಲಿದೆಯೋ. ಫುಟ್‌ಬಾಲ್ ಪ್ರಿಯರಿಗಂತೂ ರಸದೌತಣ ಸಿಗುತ್ತಿದೆ!

● ಅಶೋಕ್



# ಮೋದಿಯ ಅಜ್ಞಾನವೂ, ಭೂತಾನಿಯರ ಚಪ್ಪಾಳೆಯೂ



ತಾನು ಅದೆಂತಹದ್ದೋ ಕರೆಸ್ಪಾಂಡೆನ್ಸ್ ಕೋರ್ಸ್ ಮೂಲಕ ಬಿಎ/ಎಂಎ ಮಾಡಿಕೊಂಡಿರುವುದಾಗಿ ಮೋದಿ ಹೇಳುತ್ತಾನಾದರೂ ಆತ ಹೈಸ್ಕೂಲ್ ದಾಟಿದ್ದೇ ಡೌಟು! ಆದರೂ ಆತ ತಾನೋರ್ವ ಮೇಧಾವಿ, ವಿದ್ವಾಂಸ ಎಂಬಂತೆ ಪೋಸು ಕೊಡುತ್ತಾನೆ. ತಲೆ ಹೊಡೆದರೂ ನಾಲ್ಕು ಸಾಲುಗಳನ್ನು ಇಂಗ್ಲಿಷ್‌ನಲ್ಲಿ ಓದಲಾಗದ ಈತ ಸಂದರ್ಶನಗಳಲ್ಲಿ ಸಾಲುಸಾಲಾಗಿರುವ ಪುಸ್ತಕಗಳ ಮುಂದೆ ನಿಂತು ಫೋಟೋ ತೆಗೆಸಿಕೊಳ್ಳುತ್ತಾನೆ. ಆದರೇನಂತೆ, ಪೋಸು ಎಷ್ಟಿದ್ದರೂ ಪೋಸೇ! ಯಾಕೆಂದರೆ ಮೋದಿ ತನ್ನ ಅಜ್ಞಾನದ ಆಳ ಮತ್ತು ಅಗಲವನ್ನು ಮತ್ತೆಮತ್ತೆ ಸಾಬೀತು ಮಾಡುತ್ತಲೇ ಇರುತ್ತಾನೆ.

ನೆನಪಿದೆಯೇ ಇದೇ ಮೋದಿ ಈ ಹಿಂದೆ "ದಲಿತರು ಬುದ್ಧಿಮಾಂದ್ಯ ಮಕ್ಕಳಿದ್ದಂತೆ", "ವಾಲ್ಮೀಕಿ ಜನಾಂಗದವರು ಆಧ್ಯಾತ್ಮಿಕ ಅನುಭವ ಪಡೆಯಲು ಮಲ ಹೊರುತ್ತಾರೆ" ಎಂದು ಹೇಳುವ ಮೂಲಕ ಆ ಸಮುದಾಯಗಳಿಗೆ ಅವಮಾನ ಮಾಡಿದ್ದ, ಇನ್ನು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ವಿರೋಧ ಪಕ್ಷಗಳ ವಿರುದ್ಧ ತಡೆಯಿಲ್ಲದೆ ಹರಿದ ಈತನ ನಾಲಿಗೆ ಅಲೆಕ್ಸಾಂಡರ್‌ನನ್ನು ಬಿಹಾರದ ತನಕ ತಂದಿತ್ತು, ಆರೆಸ್ಸೆಸ್‌ನ ಮಾಜಿ ನಾಯಕ ಬಂಗಾಳದ ಶ್ಯಾಮ್ ಪ್ರಸಾದ್ ಮುಖರ್ಜಿ ಗುಜರಾತಿನವರು ಎಂತಲೂ, ಮಹಾತ್ಮ ಗಾಂಧಿಯವರ ಸಂಪೂರ್ಣ ಹೆಸರು ಮೋಹನದಾಸ್ ಕರಮ್ ಚಂದ್ ಗಾಂಧಿ ಅಲ್ಲ ಬದಲಾಗಿ ಮೋಹನ್‌ಲಾಲ್ ಕರಮ್ ಚಂದ್ ಗಾಂಧಿಯಂತಲೂ ಇದೇ ಮೋದಿ ಘೋಷಿಸಿದ್ದ!

ಮೋದಿ ಹೆಚ್ಚು ಓದಿಲ್ಲವಾದ್ದರಿಂದ ಇಂತಹ ಎಡವಟ್ಟುಗಳಾಗುತ್ತವೆ ಎಂದು ಆತನ ಅಭಿಮಾನಿಗಳು ಸಮರ್ಥಿಸಿಕೊಳ್ಳಬಹುದು. ಆದರೆ ಮಾಜಿ ಪ್ರಧಾನಿಯಾದ ನಮ್ಮ ದೇವೇಗೌಡರೂ ಹೆಚ್ಚು ಓದಿದವರಲ್ಲ, ಆದರೂ ಅವರೆಂದೂ ಇಂತಹ ಎಡವಟ್ಟು ಮಾಡಿಕೊಂಡಿರಲಿಲ್ಲ ಎಂಬುದನ್ನು ಮೋದಿ ಬೆಂಬಲಿಗರು ನೆನಪಿಟ್ಟುಕೊಳ್ಳಬೇಕು.

ಇಂತಹ ಅಜ್ಞಾನಿ ಮೋದಿ ಪ್ರಧಾನಿಯಾಗಿ ಕೈಗೊಂಡ ಮೊಟ್ಟಮೊದಲ ವಿದೇಶಿ ಪ್ರವಾಸದಲ್ಲೂ ಒಂದೇ ದಿನದಲ್ಲಿ ಎರಡೆರಡು ಎಡವಟ್ಟುಗಳನ್ನು ಮಾಡಿಕೊಂಡು ಅಪಹಾಸ್ಯಕ್ಕೆ ಗುರಿಯಾಗಿದ್ದಾನೆ.

ಇತ್ತೀಚೆಗೆ ಮೋದಿ ಭೂತಾನ್ ದೇಶಕ್ಕೆ ಭೇಟಿ ಕೊಟ್ಟಿದ್ದನಲ್ಲವೆ? ಆತ ಆ ದೇಶದ ಸಂಸತ್ತಿನ ಜಂಟಿ ಸಭೆಯನ್ನು ಉದ್ದೇಶಿಸಿ ಮಾತನಾಡುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು, ಈ ಸಭೆಯ ಮುನ್ನವೇ ಭೂತಾನ್ ಸರ್ಕಾರ ಎಲ್ಲಾ ಪತ್ರಕರ್ತರಿಗೆ ಒಂದು ಸೂಚನೆಯನ್ನು ನೀಡಿತ್ತು, ಆ ಸೂಚನೆ ಹೀಗಿತ್ತು: "ಭೂತಾನ್ ಸಂಸತ್ತಿನ ಜಂಟಿ ಸಭೆಯನ್ನು ಭಾರತದ ಪ್ರಧಾನಿ ಅವರು ಉದ್ದೇಶಿಸಿ ಮಾತನಾಡುವಾಗ ಯಾರೂ ಚಪ್ಪಾಳೆ ಹೊಡೆಯುವಂತಿಲ್ಲ, ಯಾಕೆಂದರೆ ನಮ್ಮ ಧಾರ್ಮಿಕ ನಂಬಿಕೆಯ ಪ್ರಕಾರ ಭೂತ/ಪ್ರೇತಗಳನ್ನು ಓಡಿಸಲು ಮಾತ್ರ ಜನ ಚಪ್ಪಾಳೆ ತಟ್ಟುತ್ತಾರೆ."

ಅದು ಹಾಗಿರಲಿ, ಭೂತಾನ್ ಸಂಸತ್ತನ್ನು ಉದ್ದೇಶಿಸಿ ಮಾತನಾಡಲು ಘನಗಾಂಭೀರ್ಯದಿಂದ ಪ್ರಾರಂಭಿಸಿದ ಮೋದಿ ಆರಂಭದಲ್ಲೇ "ನೇಪಾಳಿ ರಾಜಮನೆತನವನ್ನು ಅಭಿನಂದಿಸುತ್ತೇನೆ" ಎಂದುಬಿಟ್ಟ. ಆತನ ಭಾಷಣ ಮುಗಿದಾಗ ಅಲ್ಲಿ ಸೇರಿದ್ದ ಭೂತಾನಿ ಸಂಸದರು ಜೋರಾಗಿ ಚಪ್ಪಾಳೆ ಹೊಡೆದರು.

ಆದರೆ ಅವರು ಚಪ್ಪಾಳೆ ಹೊಡೆದಿದ್ದರ ಹಿಂದಿನ ಅಸಲಿ ಮರ್ಮವೇನು? ನಮ್ಮ ಮಾಧ್ಯಮಗಳು 'ಮೋದಿಯ ಅದ್ಭುತ ಭಾಷಣಕ್ಕೆ ಭೂತಾನ್ ಸಂಸದರು ಅದೆಷ್ಟು ಮಾರುಹೋದರೆಂದರೆ ತಮ್ಮ ಸಂಪ್ರದಾಯವನ್ನೇ ಮುರಿದು ಚಪ್ಪಾಳೆ ಹೊಡೆದರು' ಎಂದೇ ವರದಿ ಮಾಡಿದವು.

ಅಷ್ಟೇ ಅಲ್ಲದೆ ಅದೇ ದಿನ ಇನ್ನೊಂದು ಕಾರ್ಯಕ್ರಮದಲ್ಲಿ ಮೋದಿ ಅದೇ ಭೂತಾನ್ ದೇಶವನ್ನು ಲಡಾಕ್ ಎಂದು ಕರೆದ! ಈ ಎರಡನೇ ಪ್ರಮಾದವನ್ನು ಹೆಚ್ಚಿನ ಮಾಧ್ಯಮಗಳು ವರದಿಯೇ ಮಾಡಲಿಲ್ಲ ಎಂಬುದು ಬೇರೇ ಮಾತು.

ಮೋದಿಯ ಬೆನ್ನಿಗೆ ನಿಂತಿರುವ ಕಾರ್ಪೊರೇಟ್ ಕಂಪನಿಗಳ ಹಂಗಿನಲ್ಲಿರುವ ಮಾಧ್ಯಮಗಳಿಗೆ ಹಾಗೆ ವರದಿ ಮಾಡದೆ ವಿಧಿ ಇರಲಿಲ್ಲವೇನೋ. ಆದರೆ ಖಾಸಗಿ ವ್ಯಕ್ತಿಗಳು ಅಂತಹ ಯಾವ ಹಂಗಿನಲ್ಲೂ ಇರಲ್ಲವಾದ್ದರಿಂದ ಅವರೆಲ್ಲ ಟ್ವಿಟರ್ ಮತ್ತು ಅಂತರಜಾಲದಲ್ಲಿ ಮೋದಿಯ ಅಜ್ಞಾನವನ್ನು ಜಾಲಾಡಿದರು.

ಎಲ್ಲೆಡೆ ಹರಿದಾಡಿದ ಟೀಕಾ ಪ್ರಹಾರದ ಹಲವು ಉದಾಹರಣೆಗಳನ್ನು ನಿಮ್ಮ ಮೋಜಿಗಾಗಿ ಇಲ್ಲಿ ನೀಡಿದ್ದೇವೆ.

"ರಾಹುಲ್ ಗಾಂಧಿ 'ರಾಣಿಯ ಝಾನ್ಸಿ' ಎಂದರೆ ಆತ ಮೂರ್ಖ. ಅದೇ ಮೋದಿ ಭೂತಾನ್ ದೇಶವನ್ನು ನೇಪಾಳ್ ಎಂದು ಕರೆದರೆ ಆತ ಕನಸುಗಾರ."

"ನೇಪಾಳ್ ಮತ್ತು ಲಡಾಕ್‌ಗೆ ಹೋಗಿ ಬರುವ ಖರ್ಚುವೆಚ್ಚವನ್ನು ಮೋದಿ ಈ ಮೂಲಕ ಉಳಿಸಿದ್ದಾನೆ."

"ಭೂತಾನ್ ಮತ್ತು ನೇಪಾಳ್ ಎರಡೂ ಅಖಂಡ ಭಾರತದ ಭಾಗಗಳಾಗಲಿವೆ ಎಂಬ ಎಚ್ಚರಿಕೆಯನ್ನು ಮೋದಿ ನೀಡಿದ್ದಾನೆ."

"ಮೋದಿಯ ಭೌಗೋಳಿಕ ಅಜ್ಞಾನವನ್ನು ಇದು ಸೂಚಿಸುತ್ತದೆ."

"ಸದ್ಯದಲ್ಲೇ ಮೋದಿಯ ಭಟ್ಟಂಗಿ ಆಗಿರುವ ಪತ್ರಕರ್ತ ಜಗನ್ನಾಥನ್ 'ಭೂತಾನ್ ಮತ್ತು ನೇಪಾಳ್ ಅನ್ನು ಒಂದುಗೂಡಿಸಿದ್ದು ಮೋದಿಯ ಸಾಧನೆ' ಎಂದು ಬರೆಯಲಿರುವ ಲೇಖನಕ್ಕೆ ಕಾಯುತ್ತಿದ್ದೇನೆ."

"ಭೂತಾನ್ ಸಂಸದರು ಮೆಚ್ಚುಗೆಯಿಂದ ಚಪ್ಪಾಳೆ ತಟ್ಟಲಿಲ್ಲ, ಬದಲಾಗಿ ಮೋದಿ ಎಂಬ ಪ್ರೇತವನ್ನು ಅಲ್ಲಿಂದ ಓಡ್ಡೋಡಿಸಲು ಚಪ್ಪಾಳೆ ತಟ್ಟಿದರು."

"ಅವರೆಲ್ಲರೂ ತಮ್ಮ ಸಾಂಪ್ರದಾಯಿಕ ನಂಬಿಕೆಯನ್ನು ತೊರೆಯಲಿಲ್ಲ, ಬದಲಾಗಿ ಅದನ್ನು ಮತ್ತೊಮ್ಮೆ ವ್ಯಕ್ತಪಡಿಸಿದರಷ್ಟೇ."

ಮೋದಿಯ ಅಜ್ಞಾನಕ್ಕೆ ಬೆಂಕಿ ಹಾಕ!

# 'ಧರ್ಮಕ್ಷೇತ್ರ'ದ ಭೂ ಹಗರಣ ತನಿಖೆಗೆ ಆದೇಶ

'ಧರ್ಮಕ್ಷೇತ್ರದ' ಧರ್ಮಾಧಿಕಾರಿಯ ಭೂ ಅವ್ಯವಹಾರಕ್ಕೆ ಸಂಬಂಧಿಸಿದ ವರದಿಗಳನ್ನು ಎರಡು ವಾರಗಳ ಹಿಂದಷ್ಟೆ 'ಲಂಕೇಶ್'ನಲ್ಲಿ ನೀವು ನೋಡಿರಬಹುದು. ಕಾನೂನಿನ ಪ್ರಕಾರ ಬಡಬಗ್ಗರಿಗೆ ಸೇರಬೇಕಿದ್ದ ಸಾವಿರಾರು ಎಕರೆ ಭೂಮಿಯನ್ನು ಸುಳ್ಳು ದಾಖಲೆಗಳ ಆಧಾರದಲ್ಲಿ ಲಪಟಾಯಿಸಿರುವುದಕ್ಕೆ ಸಂಬಂಧಿಸಿದ ಗಂಭೀರ ಪ್ರಕರಣ ಇದು. ಸುಳ್ಳು ದಾಖಲೆಗಳನ್ನು ಸೃಷ್ಟಿಸುವಲ್ಲಿ, ತಪ್ಪು ಆದೇಶಗಳನ್ನು ಹೊರಡಿಸುವಲ್ಲಿ ಹತ್ತಾರು ಅಧಿಕಾರಿಗಳೇ ಭಾಗಿಯಾಗಿದ್ದಾರೆಂಬ ಗಂಭೀರ ಆರೋಪವಿದೆ.

ಈಗ ಈ ಪ್ರಕರಣ ಒಂದು ಮಹತ್ವದ ತಿರುವು ಪಡೆದುಕೊಂಡಿದೆ. ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಎ.ಬಿ.ಇಬ್ರಾಹಿಂ ಅವರು ಸದರಿ ಪ್ರಕರಣದ ಬಗ್ಗೆ ಖುದ್ದಾಗಿ ತನಿಖೆ ನಡೆಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿಯನ್ನು 60 ದಿನಗಳೊಳಗಾಗಿ ಸಲ್ಲಿಸಬೇಕೆಂದು ಪುತ್ತೂರು ಉಪ ವಿಭಾಗಾಧಿಕಾರಿ ಹೆಚ್.ಎಂ.ಕೃಷ್ಣಮೂರ್ತಿಯವರಿಗೆ ಆದೇಶಿಸಿದ್ದಾರೆ.

ಈ ಸುದ್ದಿ ಹೊರಬಿದ್ದಾಗಿನಿಂದ ತಪ್ಪಿತಸ್ಥರಲ್ಲಿ ಆತಂಕ ಮನೆಮಾಡಿರುವುದು ಸುಳ್ಳಲ್ಲ. ಮತ್ತೊಂದು ಕಡೆ ಧರ್ಮಸ್ಥಳ - ಬೆಳ್ತಂಗಡಿಗಳಲ್ಲಿ ಮಾತ್ರವಲ್ಲದೆ ನಾಡಿನಾದ್ಯಂತ ಈ ಪ್ರಕರಣ ತೀವ್ರ ಕುತೂಹಲ ಕೆರಳಿಸಿದೆ.


ದೇವರು ಭಕ್ತಪರಾಧೀನ ಎಂಬುದು ಅನಾದಿ ಕಾಲದಿಂದಲೂ ನಮ್ಮ ಸಮಾಜದಲ್ಲಿರುವ ನಂಬಿಕೆ. ತನ್ನ ಭಕ್ತರಿಗೆ ವಿಪತ್ತು ಎದುರಾದಾಗ ದೇವರೇ ಸ್ವತಃ ಭಕ್ತರ ಸೇವೆಗೆ ನಿಂತ ದೃಷ್ಟಾಂತ ಕತೆಗಳು ನಮ್ಮ ಪುರಾಣಗಳಲ್ಲಿ ಸಾಕಷ್ಟು ಕಂಡುಬರುತ್ತವೆ. ಇದು ದೇವರ ವಿಷಯವಾಯಿತು. ಆದರೆ ದೇವರ ಹೆಸರಿನಲ್ಲಿ ಚಲಾವಣೆಯಲ್ಲಿರುವ ಸ್ವಘೋಷಿತ ದೇವಮಾನವರು, ಪೀಠಾಧಿಪತಿಗಳು, ಧರ್ಮಾಧಿಕಾರಿಗಳು ಇತ್ಯಾದಿ ಇತ್ಯಾದಿಗಳು ನಿಷ್ಕಲ್ಮಷ ಭಕ್ತಿ ತೋರುವ ಭಕ್ತ ಸಮೂಹದ ನಂಬಿಕೆಗೆ ದ್ರೋಹ ಮಾಡುತ್ತಿರುವ ಪ್ರಕರಣಗಳು ದಿನೇದಿನೇ ಹೆಚ್ಚುತ್ತಿದ್ದು, ಧಾರ್ಮಿಕ ಶ್ರದ್ಧೆಯುಳ್ಳ ಜನರ ಭಾವನೆಗಳಿಗೆ ಭಾರೀ ಘಾಸಿ ಉಂಟುಮಾಡುತ್ತಿವೆ.


ಬೇರೆ ಕ್ಷೇತ್ರಗಳ ವಿಷಯ ಹಾಗಿರಲಿ; ಸ್ವತಃ ಧರ್ಮಸ್ಥಳ ಕ್ಷೇತ್ರದಿಂದ ಇಂಥಾ ಪ್ರಕರಣಗಳನ್ನು ಭಕ್ತರು ನಿರೀಕ್ಷಿಸಿರಲಿಲ್ಲ. ಆದರೆ ಇತ್ತೀಚಿನ ವರ್ಷಗಳಲ್ಲಿ ನಮ್ಮ ಧರ್ಮಸ್ಥಳದಿಂದಲೂ ಚಿತ್ರವಿಚಿತ್ರ ಪ್ರಕರಣಗಳು ಹೊರಬರುತ್ತಿದ್ದು ಭಕ್ತಾದಿಗಳಲ್ಲಿ ಜಿಗುಪ್ಸೆ ಮೂಡಿಸುತ್ತಿರುವುದು ಮಾತ್ರ ಭಕ್ತರ ಪಾಲಿಗೆ ದುರಂತವೇ ಸರಿ! ಧರ್ಮಸ್ಥಳದಲ್ಲಿ "ಕಾಣದ ಕೈ"ಗಳಿಂದ ಅತ್ಯಾಚಾರಕ್ಕೀಡಾಗಿ ಕೊಲೆಯಾದ ಅಮಾಯಕ ವಿದ್ಯಾರ್ಥಿನಿ ಕು.ಸೌಜನ್ಯಳ ಪ್ರಕರಣ ಇದೀಗ ಸಿಬಿಐ ತನಿಖೆಯ ಹಂತ ತಲುಪಿದೆ. ಅದೂ ಸಾಲದೆಂಬಂತೆ ಈಗ ಧರ್ಮಾಧಿಕಾರಿ ಯವರೇ ಭಾಗಿಯಾಗಿರುವ ಸಾವಿರಾರು ಎಕರೆ ಭೂಮಿಗೆ ಸಂಬಂಧಿಸಿದ ಪ್ರಕರಣದ ಬಗ್ಗೆ ತನಿಖೆಯ ಆದೇಶ ಹೊರಬಿದ್ದಿರುವುದು ಮತ್ತೊಂದು ಆಘಾತ ತಂದಿದೆ.

## ಡಿಸಿ ಆದೇಶದ ಹಿನ್ನೆಲೆ

ಧರ್ಮದ ಸೋಗಿನಲ್ಲಿ ಸ್ವಾರ್ಥ ಸಾಧಿಸಿಕೊಳ್ಳುತ್ತಿರುವ ಆಷಾಢಭೂತಿಗಳ ಮಾತು ಸದ್ಯಕ್ಕೆ ಪಕ್ಕಕ್ಕಿಡೋಣ. ಆದರೆ ಈ ಕ್ಷೇತ್ರದಲ್ಲಿ ಸತ್ಯ, ನ್ಯಾಯ, ಕಾನೂನುಗಳನ್ನು ನೆಲೆಗೊಳಿಸಬೇಕೆಂಬ ಅಪೇಕ್ಷೆ ಹೆಚ್ಚಿನ ಭಕ್ತರದು. ನೈಜ ಭಕ್ತರ ಇಂಥಾ ಅಪೇಕ್ಷೆಗೆ ಇಂಬು ಕೊಡುವಂತೆ ನಾಗರಿಕ ಸೇವಾ ಟ್ರಸ್ಟ್ ಎಂಬ ಸಂಸ್ಥೆಯೊಂದು ಈ ವಿಷಯದಲ್ಲಿ ಹಲವಾರು ವರ್ಷಗಳಿಂದ ಕಾನೂನಾತ್ಮಕ ಹೋರಾಟ ನಡೆಸುತ್ತಾ ಬಂದಿದೆ. ಆದರೆ ಉಳ್ಳವರಿಗೆ ಮಣೆ ಹಾಕುವವರು, ಭ್ರಷ್ಟಾಚಾರಿಗಳೇ ತುಂಬಿ ತುಳುಕುತ್ತಿರುವ ಇಂದಿನ ವ್ಯವಸ್ಥೆಯಲ್ಲಿ ಪ್ರಭಾವಶಾಲಿ ವ್ಯಕ್ತಿಗಳ ವಿರುದ್ಧ ನಿಷ್ಪಕ್ಷಪಾತ ತನಿಖೆ ನಡೆಯುತ್ತದೆ ಎಂದು ನಿರೀಕ್ಷಿಸಲು ಹೇಗೆ ಸಾಧ್ಯ ಹೇಳಿ. ಧರ್ಮಸ್ಥಳ ಭೂಮಿ ಪ್ರಕರಣದಲ್ಲೂ ಯಥಾವತ್ ಹೀಗೇ ಆಯಿತು. ಇದುವರೆಗೆ ಜಿಲ್ಲೆಗೆ ಬಂದ ಯಾವುದೇ ಜಿಲ್ಲಾಧಿಕಾರಿ ಈ ಪ್ರಕರಣವನ್ನು ತನಿಖೆಗೆ ತೆಗೆದುಕೊಳ್ಳುವ ಧೈರ್ಯ ಮಾಡಲಿಲ್ಲ.

ತಮ್ಮ ಹೋರಾಟದ ಭಾಗವಾಗಿ ಟ್ರಸ್ಟ್‌ನವರು ಸ್ಥಳೀಯ ಬೆಳ್ತಂಗಡಿ ಶಾಸಕ ವಸಂತ ಬಂಗೇರಾ


ಸೋಮನಾಥ ನಾಯಕ್


ಮಂಗಳೂರು ಡಿಸಿ- ಎಬಿ ಇಬ್ರಾಹಿಂ ಐಎಎಸ್

ಅವರಿಗೂ ಮನವಿ ಸಲ್ಲಿಸಿ ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿದರು.

ಪುತ್ತೂರು ಶಾಸಕಿ ಶಕುಂತಲಾ ಶೆಟ್ಟಿ ಮತ್ತು ವಸಂತ ಬಂಗೇರಾ ಅವರು ಈ ವಿಷಯವನ್ನು ಸದನದಲ್ಲೂ ಪ್ರಸ್ತಾಪಿಸಿದರು. ಈ ವಿಷಯವನ್ನು ಸಿಎಂ ಗಮನಕ್ಕೂ ತಂದರು. ಮಾತ್ರವಲ್ಲದೆ ಟ್ರಸ್ಟ್‌ನ ಪದಾಧಿಕಾರಿಗಳಾದ ಸೋಮನಾಥ ನಾಯಕ್ ಮತ್ತು ರಂಜನ್‌ರಾವ್ ಯರ್ಡೂರು ಮುಂತಾದವರು ಖುದ್ದಾಗಿ ಸಿಎಂ ಅವರನ್ನು ಭೇಟಿಯಾಗಿ ಪ್ರಕರಣದ ಹೀನಸುಳಿಗಳ ಬಗ್ಗೆ ತಾವು ಸಂಗ್ರಹಿಸಿರುವ ದಾಖಲೆ ಪತ್ರಗಳ ಸಮೇತ ವಿವರಿಸಿದರು.

ನಾಗರಿಕ ಸೇವಾ ಟ್ರಸ್ಟ್‌ನವರು ಅಷ್ಟಕ್ಕೆ ಸುಮ್ಮನಾಗಿ ಕೈಕಟ್ಟಿ ಕೂರಲಿಲ್ಲ. ಇಷ್ಟಾದರೂ ಸರಕಾರ ಕ್ರಮ ತೆಗೆದುಕೊಳ್ಳದೇ ಹೋದರೆ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡುವುದಾಗಿ ಪತ್ರಿಕಾಗೋಷ್ಠಿಯಲ್ಲಿ ಘೋಷಿಸಿಬಿಟ್ಟರು.

ಸುದೀರ್ಘ ನಿದ್ದೆಯಲ್ಲಿದ್ದ ಸರ್ಕಾರ ಇನ್ನು ಮೀನಮೇಷ ಎಣಿಸುವಂತಿರಲಿಲ್ಲ. ಈ ಹಿನ್ನೆಲೆಯಲ್ಲಿ ವಿಧಾನಸೌಧದಿಂದ ಅಧಿಕೃತ ಆದೇಶವೊಂದು ಕೊನೆಗೂ ಮಂಗಳೂರು ಜಿಲ್ಲಾಧಿಕಾರಿ ಕಚೇರಿಗೆ 'ಸರಕಾರದ ಪತ್ರ ಸಂಖ್ಯೆ ಕಂಇ 27 ಎಲ್.ಆರ್.ಎ/2014 ಸಂಖ್ಯೆಯ ಆದೇಶ ಪತ್ರ' ರವಾನೆಯಾಗಿದೆ.

2014ರ ಜನವರಿಯಲ್ಲಿ ವಿಧಾನಸೌಧದಿಂದ ಪತ್ರ ರವಾನೆಯಾದ ಹಿನ್ನೆಲೆಯಲ್ಲಿ ಈ ಪ್ರಕರಣವನ್ನು ಸಂಬಂಧಿಸಿದ ಉಪವಿಭಾಗಾಧಿಕಾರಿ ತನಿಖೆ ನಡೆಸಬೇಕಿತ್ತು, ಆದರೆ ಪುತ್ತೂರು ಎಸಿ ಈ ತನಿಖೆಯನ್ನು ಕೈಗೊಳ್ಳದೆ ಇದರ ಜವಾಬ್ದಾರಿಯನ್ನು ಬೆಳ್ತಂಗಡಿ ತಹಸೀಲ್ದಾರ್ ಹೆಗಲಿಗೆ ಕಟ್ಟಿ, ಈ ಬಗ್ಗೆ ಕೆ.ಎಲ್.ಆರ್.ಸಿ.ಆರ್-72/14-15 ಸಂಖ್ಯೆಯುಳ್ಳ ಪತ್ರವೊಂದನ್ನು ಡಿಸಿ ಕಚೇರಿಗೆ ಟಪಾಲು ಮಾಡಿ ನಿರುಮ್ಮಳವಾಗಿದ್ದು ಬಿಟ್ಟರು. ಆದರೆ ಒಂದು ವಿಷಯವನ್ನು ನಾವಿಲ್ಲಿ ಗಮನಿಸಲೇಬೇಕು.

ಭೂ ಸುಧಾರಣಾ ಕಾಯ್ದೆಯ ಉಲ್ಲಂಘನೆಯಾದ ಪ್ರಕರಣಗಳನ್ನು ಅಸಿಸ್ಟೆಂಟ್ ಕಮಿಷನರ್ ಅವರೇ ಖುದ್ದಾಗಿ ತನಿಖೆ ಕೈಗೊಳ್ಳಬೇಕೆಂಬ ನಿಯಮಾವಳಿ ಇದೆ. ಎಸಿ ಕೃಷ್ಣಮೂರ್ತಿಯವರಿಗೆ ಈ ವಿಷಯ ತಿಳಿಯದ ಸಂಗತಿಯೇನಲ್ಲ. ಹೀಗಿದ್ದರೂ ತಮ್ಮ ಗುರುತರವಾದ ಜವಾಬ್ದಾರಿಯನ್ನು ಕೆಳಗಿನ ಅಧಿಕಾರಿಗೆ ವರ್ಗಾಯಿಸಿದ್ದರ ಹಿಂದಿನ ಕಾರಣವೇನಿರಬಹುದು? ಮೇಲ್ನೋಟಕ್ಕೆ ಇದರಲ್ಲಿ ಎರಡು ಸ್ಪಷ್ಟ ಸಾಧ್ಯತೆಗಳು ಕಂಡುಬರುತ್ತವೆ.

1) ಇದುವರೆಗೂ ನಡೆದು ಬಂದಿರುವಂತೆ ವಿನಾ ಕಾರಣ ತನಿಖೆಯ ಪ್ರಕ್ರಿಯೆಯನ್ನು ವಿಳಂಬ ಮಾಡುವ ಉದ್ದೇಶ ಮೇಲುನೋಟಕ್ಕೆ ಕಂಡುಬರುತ್ತದೆ. ಹೀಗೆ ಮಾಡಿದರೆ ಪಟ್ಟಭದ್ರಶಕ್ತಿಗಳಿಗೆ ಅನುಕೂಲ ಮಾಡಿಕೊಟ್ಟಂತಾ ಗುತ್ತದೆ. ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯಸ್ಸು ಎಂಬ ಗಾದೆಮಾತಿನಂತೆ ತಪ್ಪಿತಸ್ಥರು ಕಾನೂನಿನ ಕಣ್ಣಿಗೆ ಮಣ್ಣೆರಚಲು ಹೊಸ ತಂತ್ರಗಳನ್ನು ಹುಡುಕಬಹುದು. ಈ ಪ್ರಕರಣದ ವಿಳಂಬ ನೀತಿಗೆ ವಿಶೇಷ ಇತಿಹಾಸವೇ ಇದೆ. 1974ರಲ್ಲಿ ದಾಖಲಾದ ಪ್ರಕರಣದ ಬಗ್ಗೆ ಅಂತಿಮ ತೀರ್ಪು ಹೊರಬಿದ್ದದ್ದು 2012ರಲ್ಲಿ. ಈ ತೀರ್ಪು ನೀಡಿದ ಸುಂದರ ಭಟ್ ಎಂಬ ಉಪವಿಭಾಗಾಧಿಕಾರಿ ಎಲ್ಲ ರೀತಿಯ ಕಾನೂನುಗಳನ್ನು ಗಾಳಿಗೆ ತೂರಿಬಿಟ್ಟದ್ದ ಎಂಬುದು ಬೇರೆ ಮಾತು.

2) ಹಾಗಿಲ್ಲವಾದರೆ ವೀರೇಂದ್ರ ಹೆಗ್ಗಡೆಯವರಂಥ ಭಾರೀ ಪ್ರಭಾವೀ ವ್ಯಕ್ತಿಯ ವಿರುದ್ಧ ತನಿಖೆ ಕೈಗೊಂಡು ಅವರ ಕೆಂಗಣ್ಣಿಗೆ ಗುರಿಯಾಗುವ ಅಪಾಯದಿಂದ ತಪ್ಪಿಸಿಕೊಳ್ಳುವ ಉದ್ದೇಶ ಇರಬಹುದು.

ಈ ಮೇಲಿನ ಯಾವ ಕಾರಣವಿದ್ದರೂ ಅದು ಗಂಭೀರ ಕರ್ತವ್ಯ ಲೋಪವಾಗುತ್ತದೆ. ಈ ವಿಷಯ ಹಾಲಿ ಡಿಸಿ ಹೊರಡಿಸಿರುವ ಆದೇಶದಲ್ಲೇ ಸ್ಪಷ್ಟವಾಗಿ ಉಲ್ಲೇಖಿತ ವಾಗಿರುವುದು ಕಂಡುಬಂದಿದೆ.

"ನೀವು (ಉಪ ವಿಭಾಗಾಧಿಕಾರಿ) ಈ ಪ್ರಕರಣವನ್ನು ಸ್ವತಃ ತನಿಖೆ ನಡೆಸುವ ಬದಲು ತಹಸೀಲ್ದಾರರು ಬೆಳ್ತಂಗಡಿ ಇವರಿಗೆ ತನಿಖೆ ನಡೆಸಲು ಕಳುಹಿಸಿಕೊಟ್ಟಿರುವುದು ಉಲ್ಲೇಖ 3 ರ ನಿಮ್ಮ ಪತ್ರದಿಂದ ತಿಳಿದುಬರುತ್ತದೆ. ಕರ್ನಾಟಕ ಭೂಸುಧಾರಣಾ ಕಾಯ್ದೆಯ ಉಲ್ಲಂಘನೆ ಬಗ್ಗೆ ಉಪವಿಭಾಗಾಧಿಕಾರಿಯವರೇ ತನಿಖೆ ಮಾಡಬೇಕಾಗಿದ್ದು, ತಹಸೀಲ್ದಾರರಿಗೆ ತನಿಖೆ ಬಗ್ಗೆ ಕಳಿಸಿಕೊಟ್ಟಿರುವುದು ಸಮಂಜಸವಲ್ಲ. ಈ ಬಗ್ಗೆ ತಾವೇ ತನಿಖೆ ಮಾಡಬೇಕಾಗಿ ರುತ್ತದೆ."

03-06-2014ರಂದು ಮಂಗಳೂರು ಡಿಸಿಯವರ ಕಟ್ಟುನಿಟ್ಟಿನ ಆದೇಶ ಹೊರಬಿದ್ದಿರುವುದರಿಂದ ಈಗ ಹಾಲಿ ಎ.ಸಿ ಸಾಹೇಬರು 'ಧರ್ಮ'ಸಂಕಟಕ್ಕೆ ಸಿಲುಕಿದ್ದಾರೆ. ತನಿಖೆ ಯಾವ ದಿಕ್ಕಿನಲ್ಲಿ ಸಾಗುತ್ತದೆ ಎಂಬುದನ್ನು ನಾವು ಕಾದು ನೋಡಬೇಕು.

ಈ ಬಾರಿಯ ಡಿಸಿ ಆದೇಶದಲ್ಲಿ ಮತ್ತಷ್ಟು ವಿಷಯಗಳನ್ನು ಸ್ಫುಟವಾಗಿ ಕಾಣಿಸಲಾಗಿದೆ. "ನಾಗರಿಕ ಸೇವಾ ಟ್ರಸ್ಟ್ ಇವರು, 'ಶ್ರೀ ಡಿ.ವೀರೇಂದ್ರ ಹೆಗ್ಗಡೆಯವರು ಸುಮಾರು 1300 ಎಕ್ರೆ ಜಮೀನನ್ನು ಪ್ಲಾಂಟೇಷನ್ ಮತ್ತು ಕೃಷಿಯೇತರ (ಡೀಮ್ಡ್ ಕನ್ವರ್ಷನ್) ಎಂದು ತೋರಿಸಿ ಮಿಗತೆ ಭೂಮಿಯನ್ನು ಹೊಂದಿಲ್ಲವೆಂದು ಭೂನ್ಯಾಯ ಮಂಡಳಿಯಿಂದ ಆದೇಶ ಮಾಡಿಸಿ ಸರಕಾರಕ್ಕೆ ಮೋಸ ಮಾಡಿರುವುದಾಗಿ ಆಪಾದಿಸಿ, ಈ ಭೂನ್ಯಾಯ ಮಂಡಳಿ ಆದೇಶವನ್ನು ರದ್ದು ಪಡಿಸುವಂತೆ ಕೋರಿಕೊಂಡು ಸರಕಾರಕ್ಕೆ ಮಾನ್ಯ ಶಾಸಕರು ಸಲ್ಲಿಸಿರುವ ಮನವಿಯನ್ನು ಪರಿಶೀಲನೆ ನಡೆಸಿ ಈ ಪ್ರಕರಣದಲ್ಲಿ ಭೂನ್ಯಾಯ ಮಂಡಳಿಯು ನಿಯಮ ಬಾಹಿರವಾಗಿ ಆದೇಶ ಮಾಡಿರುತ್ತದೋ ಎಂಬ ಬಗ್ಗೆ ತನಿಖೆಯನ್ನು ನಡೆಸಿ ವರದಿಯನ್ನು ಸಲ್ಲಿಸಲು" ಸೂಚಿಸಲಾಗಿದೆ.

ಅ.ಸ.ಪ.ಸಂಖ್ಯೆ ಎಲ್.ಆರ್.ಎಫ್ (2) ಸಿಆರ್ 250/2013-14/123944 ದಿನಾಂಕ 03-06-2014

ಮಾನ್ಯರೇ,

ವಿಷಯ:ಧರ್ಮಸ್ಥಳದ ಶ್ರೀ ಡಿ.ವೀರೇಂದ್ರ ಹೆಗ್ಗಡೆಯವರು ಕರ್ನಾಟಕ ಭೂ ಸುಧಾರಣೆ ಕಾಯ್ದೆಯನ್ನು ಉಲ್ಲಂಘನೆ ಮಾಡಿ ಹೆಚ್ಚುವರಿ 1300 ಎಕರೆ ಜಮೀನು ಹೊಂದಿರುವುದಾಗಿ ಆಪಾದಿಸಿ ನಾಗರಿಕ ಸೇವಾ ಟ್ರಸ್ಟ್ ಇವರು ಸಲ್ಲಿಸಿರುವ ಮನವಿ ಕುರಿತು.

ಉಲ್ಲೇಖ:1. ಸರಕಾರದ ಪತ್ರ ಸಂಖ್ಯೆ ಕಂಇ 27 ಎಲ್.ಆರ್.ಎ 2014 ದಿನಾಂಕ 24-01-2014.
2. ಈ ಕಚೇರಿ ಪತ್ರ ಎಲ್.ಆರ್.ಎಫ್(2) ಸಿಆರ್ 250/2013-14 ದಿನಾಂಕ : 26-02-2014.
3.ನಿಮ್ಮ ಪತ್ರ ಸಂಖ್ಯೆ ಕೆ.ಎಲ್.ಆರ್.ಸಿಆರ್: 72/14-15.

********

ಉಲ್ಲೇಖಿತ 2 ರ ಈ ಕಚೇರಿ ಪತ್ರದತ್ತ ನಿಮ್ಮ ಗಮನವನ್ನು ಸೆಳೆಯಲಾಗಿದೆ. ಈ ಪತ್ರದೊಂದಿಗೆ ನಾಗರಿಕ ಸೇವಾ ಟ್ರಸ್ಟ್ ಇವರು . ಶ್ರೀ .ಡಿ.ವೀರೇಂದ್ರ ಹೆಗ್ಗಡೆಯವರು ಸುಮಾರು 1300 ಎಕ್ರೆ ಜಮೀನನ್ನು ಪ್ಲಾಂಟೇಶನ್ ಮತ್ತು ಕೃಷಿಯೇತರ (ಡೀಮ್ಡ್ ಕನ್ವರ್ಷನ್) ಎಂದು ತೋರಿಸಿ ಮಿಗತೆ ಭೂಮಿಯನ್ನು ಹೊಂದಿಲ್ಲದೆಂದು ಭೂನ್ಯಾಯ ಮಂಡಳಿಯಿಂದ ಆದೇಶ ಮಾಡಿಸಿ ಸರಕಾರಕ್ಕೆ ಮೋಸಮಾಡಿರುವುದಾಗಿ ಆಪಾದಿಸಿ ಈ ಭೂನ್ಯಾಯ ಮಂಡಳಿ ಆದೇಶವನ್ನು ರದ್ದು ಪಡಿಸುವಂತೆ ಕೋರಿಕೊಂಡು ಸರಕಾರಕ್ಕೆ ಮಾನ್ಯ ಶಾಸಕರು ಸಲ್ಲಿಸಿರುವ ಮನವಿಯನ್ನು ಪರಿಶೀಲನೆ ನಡೆಸಿ ಈ ಪ್ರಕರಣದಲ್ಲಿ ಭೂನ್ಯಾಯ ಮಂಡಳಿಯು ನಿಯಮ ಬಾಹಿರವಾಗಿ ಆದೇಶವನ್ನು ಮಾಡಿರುತ್ತದೋ ಎಂಬ ಬಗ್ಗೆ ತನಿಖೆಯನ್ನು ನಡೆಸಿ ವರದಿಯನ್ನು ಸಲ್ಲಿಸಲು ಉಲ್ಲೇಖ 2 ರ ಈ ಕಚೇರಿ ಪತ್ರದಂತೆ ನಿಮ್ಮನ್ನು ಕೋರಿಕೊಳ್ಳಲಾಗಿತ್ತು.

ಆದರೆ ನೀವು ಈ ಪ್ರಕರಣವನ್ನು ಸ್ವತಹ ತನಿಖೆ ನಡೆಸುವ ಬದಲು ತಹಶಿಲ್ದಾರರು ಬೆಳ್ತಂಗಡಿ ಇವರಿಗೆ ತನಿಖೆ ನಡೆಸಲು ಕಳುಹಿಸಿಕೊಟ್ಟಿರುವುದು ಉಲ್ಲೇಖ 3 ರ ನಿಮ್ಮ ಪತ್ರದಿಂದ ತಿಳಿದು ಬರುತ್ತದೆ. ಕರ್ನಾಟಕ [illegible] ಕಾಯ್ದೆಯ ಉಲ್ಲಂಘನೆ ಬಗ್ಗೆ ಉಪವಿಭಾಗಾಧಿಕಾರಿಯವರ ತನಿಖೆಮಾಡಬೇಕಾಗಿದ್ದು,

ತಹಶೀಲ್ದಾರರಿಗೆ ತನಿಖೆ ಬಗ್ಗೆ ಕಳುಹಿಸಿಕೊಟ್ಟಿರುವುದು ಸಮಂಜಸವಲ್ಲ. ಈ ಬಗ್ಗೆ ತಾವೇ ತನಿಖೆ ಮಾಡಬೇಕಾಗಿರುತ್ತದೆ. ಈ ಪ್ರಕರಣದಲ್ಲಿ ನಿಯಮ ಬಾಹಿರವಾಗಿ ಭೂನ್ಯಾಯ ಮಂಡಳಿಯು ಆದೇಶವನ್ನು ಮಾಡಿರುತ್ತದೆ ಎಂಬುದನ್ನು ಪುಷ್ಟೀಕರಿಸುವ ಬಗ್ಗೆ ನಾಗರಿಕ ಸೇವಾಟ್ರಸ್ಟ್ ಇವರು ದಿನಾಂಕ 29-05-2014 ರಂದು ಸಲ್ಲಿಸಿರುವ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ. ಈ ಎಲ್ಲಾ ದಾಖಲೆಗಳನ್ನು ಪರಿಶೀಲಿಸುವಾಗ ಮೇಲ್ನೋಟಕ್ಕೆ ಕೆಲವು ಜಮೀನುಗಳಿಗೆ ವಿನಾಯಿತಿಯನ್ನು ಪಡೆದಿರುವುದು ಕಂಡುಬರುತ್ತದೆ. ಕೆಲವು ದಾಖಲೆಗಳು ಒಂದಕ್ಕೊಂದು ವ್ಯತಿರಿಕ್ತವಾಗಿರುತ್ತವೆ.

ಆದ್ದರಿಂದ ನೀವು ಈ ಪ್ರಕರಣದಲ್ಲಿ ಸ್ವತಹ ದೂರುದಾರರಿಗೆ ಹಾಗೂ ಘೋಷಣೆದಾರರಿಗೆ ಅವಕಾಶ ನೀಡಿ ಅವರ ಹೇಳಿಕೆಗಳನ್ನು ಪಡೆದು ಕೊಂಡು ಸಂಬಂಧಿಸಿದ ಜಮೀನಿನ ಎಲ್ಲಾ ದಾಖಲೆ ಹಾಗೂ 01-03-1974ರ ಪೂರ್ವದ ಪಹಣಿ ಪತ್ರಗಳೊಂದಿಗೆ ತಾಳೆ ನೋಡಿ ಸಂಬಂಧಪಟ್ಟ ಹೇಳಿಕೆಗಳ ಸಹಿತ ಎಲ್ಲಾ ವಿವರಗಳನ್ನು ತನಿಖಾ ವರದಿಯಲ್ಲಿ ಉಲ್ಲೇಖಿಸಿ ವಿವರವಾದ ವರದಿಯನ್ನು ಸ್ಪಷ್ಟ ಅಭಿಪ್ರಾಯದೊಂದಿಗೆ 2 ತಿಂಗಳೊಳಗಾಗಿ ಒಪ್ಪಿಸಲು ಕೋರಲಾಗಿದೆ.

ವಂದನೆಗಳೊಂದಿಗೆ

ತಮ್ಮ

ಡಾ. ಹೆಚ್.ಕೆ. ಕೃಷ್ಣ ಮೂರ್ತಿ ಕೆ.ಎ.ಎಸ್.
ಸಹಾಯಕ ಕಮಿಷನರು ಪುತ್ತೂರು.

-5 JUN 2014

ಜಿಲ್ಲಾಧಿಕಾರಿ ಆದೇಶದ ಸ್ಕ್ಯಾನ್ ಕಾಪಿ

ಅಷ್ಟು ಮಾತ್ರವಲ್ಲದೆ "ಈ ಪ್ರಕರಣದಲ್ಲಿ
ಯಮಬಾಹಿರವಾಗಿ ಭೂನ್ಯಾಯ ಮಂಡಳಿಯು
ದೇಶವನ್ನು ಮಾಡಿರುತ್ತದೆ ಎಂಬುದನ್ನು
ಮಖೀಕರಿಸುವ ಬಗ್ಗೆ ನಾಗರಿಕ ಸೇವಾ ಟ್ರಸ್ಟ್ ಇವರು
ನಾಂಕ 29-05-2014ರಂದು ಸಲ್ಲಿಸಿರುವ
ಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ
ಳುಹಿಸಿಕೊಡಲಾಗಿದೆ."

ಈ ಮೇಲೆ ಉಲ್ಲೇಖಿಸಿದ ಅಂಶಗಳಲ್ಲದೆ
ುತ್ತೊಂದು ಮಹತ್ವದ ಅಂಶವನ್ನು ಡಿಸಿ ಸಾಹೇಬರು
ಮ್ಮ ಪತ್ರದಲ್ಲಿ ಕಾಣಿಸಿದ್ದಾರೆ. "ಈ ಎಲ್ಲಾ
ಾಖಲೆಗಳನ್ನು ಪರಿಶೀಲಿಸುವಾಗ ಮೇಲ್ನೋಟಕ್ಕೆ
ಲವು ಜಮೀನುಗಳಿಗೆ ವಿನಾಯಿತಿಯನ್ನು
ಡೆದಿರುವುದು ಕಂಡುಬರುತ್ತದೆ. ಹಲವು
ಾಖಲೆಗಳು ಒಂದಕ್ಕಿಂತ ಒಂದು
ದ್ವಿರುದ್ಧವಾಗಿರುತ್ತದೆ."

ಹೌದು! ಈ ಮಾತು ನೂರಕ್ಕೆ ನೂರು ನಿಜ. ಈ
ನ್ನೆಲೆಯಲ್ಲಿ ಜಿಲ್ಲಾಧಿಕಾರಿಯವರ ಸ್ಪಷ್ಟ ನಿರ್ದೇಶನ
ಿಸಿ ಸಾಹೇಬರ ಪಾಲಿಗೆ ಮತ್ತಷ್ಟು 'ಧರ್ಮ'ಸಂಕಟ
ಂದೊಡ್ಡಿದೆ. "... ನೀವು ಈ ಪ್ರಕರಣದಲ್ಲಿ ಸ್ವತಃ
ೂರುದಾರ ಹಾಗೂ ಘೋಷಣೆದಾರರಿಗೆ ಅವಕಾಶ
ೀಡಿ ಅವರ ಹೇಳಿಕೆಗಳನ್ನು ಪಡೆದುಕೊಂಡು
ಂಬಂಧಿಸಿದ ಜಮೀನಿನ ಎಲ್ಲಾ ದಾಖಲೆ ಹಾಗೂ
11-03-1974ರ ಪೂರ್ವದ ಪಹಣಿ ಪತ್ರಗಳೊಂದಿಗೆ
ಳೆ ನೋಡಿ ಸಂಬಂಧಪಟ್ಟ ಹೇಳಿಕೆಗಳ ಸಹಿತ
ಲಾ ವಿವರಗಳನ್ನು ತನಿಖಾ ವರದಿಯಲ್ಲಿ ಉಲ್ಲೇಖಿಸಿ,
ವರವಾದ ವರದಿಯನ್ನು ಸ್ಪಷ್ಟ ಅಭಿಪ್ರಾಯದೊಂದಿಗೆ
ತಿಂಗಳೊಳಗಾಗಿ ಒಪ್ಪಿಸಲು ಕೋರಲಾಗಿದೆ."

ಈಗ ಎಸಿಯವರು ಕಾನೂನು ಪಾಲಿಸುವುದನ್ನು
ಟ್ಟರೆ, ತಪ್ಪಿಸಿಕೊಳ್ಳುವ ಆಯ್ಕೆ ಬಹುಶಃ ಉಳಿದಿಲ್ಲ.
ೂರುದಾರ ಟ್ರಸ್ಟ್‌ನ ಅಧಿಕೃತ ಹೇಳಿಕೆಯನ್ನು ಮತ್ತು
ೀರೇಂದ್ರ ಹೆಗ್ಗಡೆಯವರ ಹೇಳಿಕೆಯನ್ನು ಖುದ್ದಾಗಿ
ಾಖಲಿಸಲೇಬೇಕಾಗಿದೆ. ಜೊತೆಗೆ ಸಂಬಂಧಿಸಿದ ಎಲ್ಲಾ
ಾಖಲೆ ಪತ್ರಗಳನ್ನು ಪರಿಶೀಲಿಸಬೇಕಾಗುತ್ತದೆ. ಅಷ್ಟು
ಾತ್ರವಲ್ಲದೆ 1974ಕ್ಕೆ ಪೂರ್ವದ ಪಹಣಿ
ತ್ರಗಳನ್ನು ತಾಳೆನೋಡಿ ಪರಿಶೀಲಿಸಬೇಕು. ಇದೆಲ್ಲಾ
ದಮೇಲೆ ತಮ್ಮ ಸ್ಪಷ್ಟ ಅಭಿಪ್ರಾಯದೊಂದಿಗೆ ತನಿಖಾ
ರದಿಯನ್ನು ಸಲ್ಲಿಸಬೇಕು. ಅದೂ ಕೂಡ 60
ನಗಳ ಒಳಗಾಗಿ!! ಅಂದರೆ ಮುಂದಿನ ಆಗಸ್ಟ್
ೊದಲ ವಾರದೊಳಗಾಗಿ!!

ಜಿಲ್ಲಾಧಿಕಾರಿ ಸ್ಪಷ್ಟವಾಗಿ ಸೂಚಿಸಿರುವಂತೆ ತನಿಖೆ
ದಿಕ್ಕಿನಲ್ಲಿ ನಡೆದ ಪಕ್ಷದಲ್ಲಿ ಕಾನೂನಿನ ಕುಣಿಕೆ
ೂರ್ದಾರ ಕೊರಳಿಗೆ ಸುತ್ತಿಕೊಳ್ಳುತ್ತದೆ ಎಂಬುದನ್ನು
ೂಹಿಸಿಕೊಳ್ಳು ವುದು ಅಷ್ಟೊಂದು ಕಷ್ಟದ
ಷಯವೆ?


ದೊಡ್ಡಿಪಾಳ್ಯ ನರಸಿಂಹಮೂರ್ತಿ

# ಕುಚೇಲ= ಕೋಟ್ಯಾಧೀಶ ಮಾಣಿ!!

ಉತ್ತರ ಕನ್ನಡದಿಂದ ಐದನೇ ಬಾರಿ ಸಂಸದನಾಗಿರುವ ಸೋಗಲಾಡಿ ಅನಂತ್ಮಾಣಿ ಉರುಫ್ ಅನಂತಕುಮಾರ್ ಹೆಗಡೆ ಬಫೂನ್‌ನಂತೆ ಮಿಮಿಕ್ರಿ ಮಾಡುತ್ತಿದ್ದಾನೆ. ಅನಿರೀಕ್ಷಿತ ಗೆಲುವಿನ ಶಾಕ್‌ನಿಂದ ಈತ ಇನ್ನೂ ಚೇತರಿಸಿಕೊಂಡಿಲ್ಲ. ಈ ಬಾರಿ ಮತದಾರರು ಗೂಸಾ ನೀಡಿ ಮನೆಗಟ್ಟುತ್ತಾರೆಂದು ಖುದ್ದು ಮಾಣಿಯೇ ಕಂಗಾಲಾಗಿದ್ದ. ಆದರೆ ಜನತಂತ್ರದ ದೌರ್ಬಲ್ಯದಿಂದ ದೋಖಾಬಾಜಿ, ಕೋಮು ಕಿತಾಪತಿಗಾರ ಮಾಣಿ ಮತ್ತೆ ಸಂಸದನಾಗಿದ್ದಾನೆ!

ತನ್ನ ಗೆಲುವಿನ ಹಿಂದಡಗಿದ ಸತ್ಯದ ಕುರಿತು ಆತ್ಮವಿಮರ್ಶೆ ಮಾಡಿಕೊಂಡು ವಿನಮ್ರನಾಗಿ ಮತದಾರರಿಗೆ ಮಣಿಯಬೇಕಿದ್ದ ಮಾಣಿ ಮಹಾ ಅಹಂಕಾರದಿಂದ ಮಾತಾಡುತ್ತಿದ್ದಾನೆ; ತಾನೊಬ್ಬ ಪ್ರಶ್ನಾತೀತ ಹಿಂದೂ ಮುಂದಾಳೆಂಬಂತೆ ಪೋಸು ಕೊಡುತ್ತಿದ್ದಾನೆ. ಜನರನ್ನು ಸುಖಾಸುಮ್ಮನೆ ಪ್ರಚೋದಿಸುವ ಭಾಷಣ ಬಿಗಿಯುತ್ತ ಆತ್ಮವಂಚನೆಗೆ ಇಳಿದಿದ್ದಾನೆ. "ಇದು ಹಿಂದೂ ದೇಶ... ಬೇರೆಯವರು ಗೆಟ್‌ಔಟ್...." ಎಂದು ಹರಕುಮುರುಕು ಇಂಗ್ಲಿಷ್‌ನಲ್ಲಿ ಈ ಡ್ರಾಪ್‌ಔಟ್ ದಡ್ಡ ಬಡಬಡಿಸುತ್ತಿದ್ದಾನೆ; ಚುನಾವಣೋತ್ತರ ಪುಕ್ಕಟೆ ಮನರಂಜನೆ ಜನರಿಗೆ ಒದಗಿಸುತ್ತಿದ್ದಾನೆ.

ಸೆಕ್ಯುಲರಿಸಮ್ ಲೇಖನ ಪ್ರಕಟಿಸುವ ಪತ್ರಿಕೆಗಳಿಗೂ ಧಿಕ್ಕಾರ ಕೂಗುತ್ತಿರುವ ಮಾಣಿ ಆರೆಸ್ಸೆಸ್ ಬೈಠಕ್‌ಗಳಲ್ಲಿ ಬಾಯಿಪಾಠ ಮಾಡಿದ ದಗಲುಬಾಜಿ ಪದಪುಂಜಗಳ ಡೈಲಾಗ್ ಪೆದ್ದುಪೆದ್ದಾಗಿ ಡೆಲಿವರಿ ಮಾಡುತ್ತಿರುವುದು ಭರ್ಜರಿ ಕಾಮಿಡಿ ಶೋನಂತಿದೆ! ಈ ಹಿಂದೂ ಪಂಡಿತ ಪುರಾಣ-ಭಾಗವತ-ಮಹಾಭಾರತ-ರಾಮಾಯಣ ಅರೆದು ಕುಡಿದಂತೆ ಕುಟ್ಟುತ್ತಿರುವ ಭಾಷಣಗಳು ಆತನ ಅಲ್ಪ ಜ್ಞಾನದ ಮಹಾ ಗರ್ವವನ್ನು ಸಾಬೀತುಪಡಿಸುತ್ತಿವೆ! ದೇಶಪಾಂಡೆ ಮಗನೆದುರು ಗೆದ್ದಿರುವ ತನ್ನ ವಿಜಯವನ್ನಾತ "ಕುಬೇರನ ಎದುರು ಕುಚೇಲ ಜಯಿಸಿದಂತೆ" ಎಂದು ವಿಚಿತ್ರ ವಿಶ್ಲೇಷಣೆ ನಡೆಸುತ್ತಿದ್ದಾನೆ. ದೇಶಪಾಂಡೆ ಕಪ್ಪು ಕುಬೇರನೆಂಬುದು ಸರ್ವವಿಧಿತ; ಅದಕ್ಕೆ ಅನುಮಾನವೇ ಇಲ್ಲ. ಆತನ ಬಳಿ ಕೊಪ್ಪರಿಗೆಟ್ಟಲೆ ಕಾಲಾ ಪೈಸಾ ಇರುವುದು ಬಹಿರಂಗ ರಹಸ್ಯ.



ಆದರೆ ಅನಂತ್ಮಾಣಿ ಕುಚೇಲನೆಂಬುದು ಹಾಸ್ಯಾಸ್ಪದ. ಮಾಣಿ ಬಡವನೆಂದರೆ ಯಾರೂ ನಂಬುವುದಿಲ್ಲ. ಒಂದು ಕಾಲದಲ್ಲಿ ನಿರ್ಗತಿಕ-ಹವ್ಯಕ ಕುಟುಂಬದ ಮಾಣಿ ವಿದ್ಯೆ ತಲೆಗತ್ತದೆ ಹಿಂದೂತ್ವದ ಅಡ್ಡದಾರಿ ಹಿಡಿದ ಉಂಡಾಡಿ ಗುಂಡಣ್ಣ. ಬ್ಲಾಕ್‌ಬೆಲ್ಟ್ ಕರಾಟೆ ಪಟುವೆಂದು ಒಂದಿಷ್ಟು ಪಡ್ಡೆಗಳ ಅಡ್ಡೆ ಹಾಕಿಕೊಂಡು ಚೆಡ್ಡಿ ಬೈಠಕ್‌ಗಳಿಗೆ ಹೋಗುತ್ತಿದ್ದವನಿಗೆ ಅನಾಹುತಕಾರಿ ಹಿಂದೂ ಪ್ರಚಾರಕ ಜಗದೀಶ ಕಾರಂತ್ ದೀಕ್ಷೆ ನೀಡಿ ಸಾಬಿಗಳ ಮೇಲೆ ಛೂಬಿಟ್ಟಿದ್ದ. ಒಂದೊತ್ತಿನ ಬುತ್ತಿ ಕಟ್ಟಿಕೊಂಡು ಭಟ್ಕಳದ ಸಾಬಿಗಳ ಕೇರಿ-ಕೇರಿಗೆ ಬೆಂಕಿ ಇಕ್ಕಿ ಮೈಕಾಯಿಸಿಕೊಳ್ಳುವ ಕಾರ್ಯಾಚರಣೆಗೆ ಇಳಿದ ಮಾಣಿಗೆ ಈ ಹಿಂದೂತ್ವವೇ ಜೀವನೋಪಾಯ ಕಸುಬಾಗಿದ್ದು ಕಹಿ ವಾಸ್ತವ! ಉತ್ತರ ಕನ್ನಡ ಬಿಜೆಪಿಯ ಉಗ್ರವಾದಿ ನೇತಾರ ಡಾ. ಚಿತ್ತರಂಜನ್‌ಗೆ ಕೋಮು ಹುಲಿ ಸವಾರಿಯೇ ಮುಳುವಾದಾಗ ಅನಂತ್ಮಾಣಿಯ ದೆಸೆ ಬದಲಾಗಿ ಬಿಟ್ಟಿತು! ರಂಜನ್‌ರ ರಕ್ತ ತೋರಿಸಿಯೇ ಪಾರ್ಲಿಮೆಂಟ್ ಮೆಂಬರ್‌ನಾದ ಮಾಣಿ ಒಂದೂವರೆ ದಶಕದಿಂದ ಧರ್ಮಕಾರಣ ನಾಜೂಕಾಗಿ ನಿಭಾಯಿಸಿಕೊಂಡು ಬದುಕುತ್ತಿದ್ದಾನೆ. ಎಂಪಿಯಾಗಿ ಜಿಲ್ಲೆಗೆ ಮೂರು ಬಿಲ್ಲಿ ಉಪಕಾರ ಮಾಡದಿದ್ದರೂ ತನ್ನ ಜೀರ್ಣೋದ್ಧಾರ ಮಾತ್ರ ಪೊಗದಸ್ತಾಗಿ ಸಾಧಿಸಿದ್ದಾನೆ!!

ತಮಾಷೆಯೆಂದರೆ, ತನ್ನನ್ನು 'ಕುಚೇಲ'ನೆಂದು ಪರಿಚಯಿಸಿಕೊಳ್ಳುವ ಈ ಮೋಸಗಾರ ಇವತ್ತು ಕೋಟಿ-ಕೋಟಿಗೆ ತೂಗುತ್ತಾನೆ. ಚುನಾವಣೆ ಹೊತ್ತಲ್ಲಿ ಆತ ಸಲ್ಲಿಸಿದ ಅಫಿಡವಿಟ್‌ನಲ್ಲೇ 1 ಕೋಟಿ 62 ಲಕ್ಷ 90 ಸಾವಿರ ರೂಪಾಯಿಗಳ ಅಧಿಕೃತ ಆಸ್ತಿ ಘೋಷಿಸಿದ್ದಾನೆ; ಮಾಣಿಯ ಧರ್ಮಪತ್ನಿ ಶ್ರೀ ರೂಪಾ ಹೆಸರಲ್ಲಿ 1 ಕೋಟಿ 18 ಲಕ್ಷ 19 ಸಾವಿರದ ಸಿರಿ-ಸಂಪತ್ತಿದೆ. ಹೆಂಡತಿಯನ್ನೇ ಆಪ್ತ ಕಾರ್ಯದರ್ಶಿಯೆಂದು ತೋರಿಸಿ ಪ್ರತಿ ತಿಂಗಳು ರೂ. 30 ಸಾವಿರ ಕಬಳಿಸುತ್ತಿದ್ದ ಲೋಬಿ ಈ ಅನಂತ್ಮಾಣಿ. ಇದೆಲ್ಲ ಅಧಿಕೃತ ದಾಖಲೆಯಾದರೆ ಅನಧಿಕೃತವಾಗಿ ಇದಕ್ಕಿಂತಲೂ ಹೆಚ್ಚಿರುವ ಅನುಮಾನ ಹಿಂದೂತ್ವದ ಹಿರಿ-ಮರಿ ಮುಂದಾಳುಗಳಲ್ಲಿದೆ.

ಈ ಶ್ರೀಮಂತಿಕೆ ಹಿಂದೂ ರಾಜಕಾರಣದ ಉತ್ಪನ್ನ. ಬಿಜೆಪಿ ರಾಜಕಾರಣಿಯಾಗಿ ಆರೆಸ್ಸೆಸ್‌ನ ಬೀದಿ ಬಾಲಕ ಅನಂತ್ಮಾಣಿಯಿಂದ ಇಷ್ಟು ಶ್ರೀಮಂತಿಕೆ ಏಳು ಜನ್ಮವೆತ್ತಿ ಬಂದರೂ ಸಾಧ್ಯವಿರಲಿಲ್ಲ. ಬೇಕಾಬಿಟ್ಟಿಯಾಗಿ ಲೂಟಿ ಹೊಡೆದು ಕೋಟ್ಯಾಂತರ ರೂ. ಸ್ಥಿರ-ಚರ ಸಂಪತ್ತು ಸಂಗ್ರಹಿಸಿರುವ ಈ ದೇಶಭಕ್ತ ತನಗೆ 'ಕುಚೇಲ'ನೆಂದು ನಾಮಕರಣ ಮಾಡಿಕೊಂಡಿರುವುದು ಕೇಳಿ ಉತ್ತರ ಕನ್ನಡಿಗರು ನಗಬಾರದ ಕಡೆಯಿಂದೆಲ್ಲಾ ನಗುವಂತಾಗಿದೆ! ಮಾಣಿಯ 'ಕುಚೇಲ' ಉಪಮೇಯಕ್ಕೇನಾದರೂ ಅರ್ಥ ಇದೆಯಾ? ಕುಚೇಲನೆಂದರೆ ಕೋಟ್ಯಾಧೀಶನೆಂದಾ? ಎಂಥಾ ವಿಕಟ ವ್ಯಂಗ್ಯ ಅಲ್ಲವಾ?

ದೇಶದ ಸಂಪತ್ತಾದ ಸಮೃದ್ಧ ಅರಣ್ಯವನ್ನು ಹೆಕ್ಟೇರ್ ಗಟ್ಟಲೆ ಸ್ವಾಹಾ ಮಾಡಿರುವ ಮಾಣಿ ಬಡತನರೇಖೆಯಿಂದ ಮೇಲೆ ಬಂದ ಕತೆಯೇ ಹಿಂದೂತ್ವ-ಕೇಸರಿಗಳ ದೇಶಭಕ್ತಿಯ ಅಸಲಿಯತ್ತಿನಂತಿದೆ. ಸಂಸದನಾಗಿ ಸಂಸ್ಕೃತದಲ್ಲಿ ಪ್ರಮಾಣವಚನ ಸ್ವೀಕರಿಸಿ ವಿವಾದಕ್ಕೆ ಈಡಾಗಿರುವ ಮಾಣಿಗೆ ತಾಯ್ನೆಲದ ಕನ್ನಡ ಭಾಷೆ ಬಗ್ಗೆಯೇ ಗೌರವ ಇಲ್ಲ. ಇಂತಿರುವಾಗ ಈ ವೈದಿಕಶಾಹಿಗೆ ದೇಶಭಕ್ತಿ ಇರಲು ಸಾಧ್ಯವಾ. ಉದರ ನಿಮಿತ್ತಮ್ ಬಹುಕೃತ ವೇಷಂ- ಅಷ್ಟೇ ಮಾಣಿ ಮಳ್ಳಾಟ!!

• ವರದಿಗಾರ

# ಮೌಖಿಕ ವಿಚ್ಛೇದನ ಮತ್ತು ಬಹುಪತ್ನಿತ್ವ ನಿರ್ಮೂಲನೆಗೆ ಮುಸ್ಲಿಂ ಮಹಿಳೆಯರ ಒತ್ತಾಯ

ದೇಶದಾದ್ಯಂತ ಮುಸ್ಲಿಂ ಮಹಿಳೆಯರ ಸ್ಥಿತಿಗತಿಗಳನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ ಎಂಬ ಮುಂಬೈ ಮೂಲದ ಸಂಘಟನೆ ಮುಸ್ಲಿಮ್ ಸಮುದಾಯದಲ್ಲಿ ಚಾಲ್ತಿಯಲ್ಲಿರುವ ಮೌಖಿಕ ವಿಚ್ಛೇದನ ಮತ್ತು ಬಹುಪತ್ನಿತ್ವವನ್ನು ನಿರ್ಮೂಲನೆ ಮಾಡುವ ನಿಟ್ಟಿನಿಂದ ಒಂದು ಕರಡು ಕಾನೂನನ್ನು ತಯಾರಿಸಿದೆ. ಸತತವಾಗಿ ಮೂರು ಬಾರಿ ತಲಾಖ್ ಹೇಳುವ ಪದ್ಧತಿಯನ್ನು ನಿಲ್ಲಿಸಿ ತಲಾಖ್-ಎ-ಅಹ್ಸನ್‌ನಲ್ಲಿ ನಿಗದಿಪಡಿಸಿರುವ ರೀತಿಯನ್ನು ಅನುಸರಿಸಬೇಕು ಎಂದು ಸಂಘಟನೆ ಒತ್ತಾಯಿಸಿದೆ. ಜೊತೆಗೆ ಮದುವೆಯ ಸಂದರ್ಭದಲ್ಲಿ ಮಹಿಳೆಗೆ ಕೊಡುವ 'ಮೆಹರ್' ಅನ್ನೂ ನಿಗದಿಪಡಿಸಿದೆ.

ಕಳೆದ ಏಳು ವರ್ಷಗಳಿಂದ ಭಾರತೀಯ ಮುಸ್ಲಿಮ್ ಮಹಿಳಾ ಆಂದೋಲನವು ಇಸ್ಲಾಮಿಕ್ ಕಾನೂನುಗಳ ಪ್ರಕಾರವೇ ಮದುವೆ, ವಿಚ್ಛೇದನ ಮತ್ತು ಜೀವನಾಂಶ ಕುರಿತು ಕೆಲಸ ಮಾಡುತ್ತಿದ್ದು ಈಗ ಈ ಕರಡನ್ನು ಸಿದ್ಧಪಡಿಸಿದೆ. ಮುಸಲ್ಮಾನರ ನಡುವೆ ಈಗ ಜಾರಿಯಲ್ಲಿರುವ ಹಲವಾರು ಪದ್ಧತಿಗಳ ಬದಲಾವಣೆಗೆ ಕರೆ ನೀಡಿರುವ ಈ ಕರಡು ಇಸ್ಲಾಮ್ ಧರ್ಮದ ಪ್ರಕಾರವೇ ಹಲವು ನಿಯಮಗಳನ್ನು ಸೂಚಿಸಿದೆ.

ಅವುಗಳಲ್ಲಿ ಪ್ರಮುಖವಾದದ್ದು 18 ವರ್ಷ ವಯಸ್ಸಿನ ಯುವತಿ ಮತ್ತು 21 ವರ್ಷ ವಯಸ್ಸಿನ ಯುವಕ ಮಾತ್ರ ಮದುವೆ ಆಗತಕ್ಕದ್ದು ಮತ್ತು ಅವರಿಬ್ಬರಲ್ಲಿ ಅದಕ್ಕಿಂತ ಮುನ್ನ ಯಾರಾದರು ಮದುವೆಯಾಗಿದ್ದರೆ ಅವರು ಕೈಹಿಡಿದಿದ್ದವರು ಆಗ ಬದುಕಿರಕೂಡದು. ಇದರ ಉದ್ದೇಶ ಬಹುಪತ್ನಿತ್ವವನ್ನು ತಡೆಯುವುದೇ ಆಗಿದೆ. ಮದುವೆಯ ಸಂದರ್ಭದಲ್ಲಿ ಸಾಂಪ್ರದಾಯಿಕವಾಗಿ ಮದುಮಗನ ಕಡೆಯವರು ವಧುವಿಗೆ ಕೊಡುವ ಮೆಹರ್‌ಅನ್ನೂ ನಿಗದಿಪಡಿಸಿರುವ ಸಂಘಟನೆ ಅದು ಮದುಮಗನ ಒಂದು ವರ್ಷದ ವರಮಾನಕ್ಕಿಂತ ಕಡಿಮೆ ಇರಕೂಡದು ಎಂದಿದೆ. ಹಾಗೊಮ್ಮೆ ಮದುವೆಯ ಸಂದರ್ಭದಲ್ಲಿ ಅಷ್ಟು ಮೊತ್ತದ ಮೆಹರ್ ಅನ್ನು ಕೊಡದಿದ್ದರೆ ಮದುವೆಯಾದ ಆರು ತಿಂಗಳೊಳಗೆ ಎರಡು ವರ್ಷಗಳ ವರಮಾನವನ್ನು ಕೊಡಬೇಕು ಎಂದಿದೆ. ಈಗ ಸಾಮಾನ್ಯವಾಗಿ ಮದುಮಗನ ಕಡೆಯವರು ರೂ. 786 ಅನ್ನು ಮೆಹರ್ ಆಗಿ ಕೊಡುವುದು ರೂಢಿಯಲ್ಲಿದೆ.

ಕರಡು ಮೌಖಿಕವಾಗಿ ವಿಚ್ಛೇದನ ಕೊಡುವುದು ಮತ್ತು ಮೂರು ಬಾರಿ ತಲಾಖ್ ಎಂದು ಹೇಳುವ ಮೂಲಕ ಮದುವೆಯಿಂದ ಪುರುಷರು ಹೊರ ನಡೆಯುವುದನ್ನು ತಡೆಯಲು ಹಲವಾರು ಕ್ರಮಗಳನ್ನು ಸೂಚಿಸಿದೆ. ವಾಸ್ತವವಾಗಿ ಇಸ್ಲಾಮ್ ಧರ್ಮದಲ್ಲಿ ಹೀಗೆ ಒಂದೇ ಬಾರಿಗೆ ಮೂರು ಸಲ ತಲಾಖ್ ಹೇಳುವುದನ್ನು ಎಲ್ಲೂ ಅನುಮೋದಿಸಿಲ್ಲ. ಬದಲಾಗಿ ಪುರುಷ ಪ್ರಧಾನ ವ್ಯವಸ್ಥೆ ಅದನ್ನು ಜಾರಿಗೆ ತಂದು ದುರುಪಯೋಗಪಡಿಸಿಕೊಳ್ಳುತ್ತಿದೆ. ಯಾಕೆಂದರೆ ಇಸ್ಲಾಮ್ ಧರ್ಮದಲ್ಲಿ ತಲಾಖ್ ಅನ್ನು ಮೂರು ತಿಂಗಳ ಅವಧಿಯಲ್ಲಿ ಹೇಳುವುದೇ ಸರಿಯಾದ ಕ್ರಮವಾಗಿದೆ. ತಲಾಖ್-ಎ-ಅಹ್ಸನ್‌ನಲ್ಲಿ ತಲಾಖ್ ಎಂದು ಮೂರು ಬಾರಿ ಹೇಳುವ ನಡುವೆ ಮೂರು ತಿಂಗಳ ಕಾಲಾವಕಾಶ ಕೊಟ್ಟಿರುವುದು ದಂಪತಿಗಳ ನಡುವೆ ಸಮಸ್ಯೆ ಬಗೆಹರಿದು ಅವರು ಮತ್ತೆ ಒಂದಾಗುವ ಸಾಧ್ಯತೆಯನ್ನು ಹೆಚ್ಚಿಸಲೆಂದು. ಹಾಗೊಮ್ಮೆ ಆ ಕಾಲಾವಧಿಯಲ್ಲೂ



ಅವರು ಒಂದಾಗದಿದ್ದರೆ ಆಗ ಮಾತ್ರ ವಿಚ್ಛೇದನ ಸರಿಯಾದದ್ದು ಎಂದು.


ಹೊಸದಾಗಿ ತಯಾರಿಸಿರುವ ಈ ಕರಡು ಮದುವೆ ಸಂದರ್ಭದಲ್ಲಿ ಪಾಲಿಸಬೇಕಾದ ನಿಯಮಗಳನ್ನು ಪದೇ ಪದೇ ಉಲ್ಲಂಘಿಸುವ ಖಾಜಿಯ ಪರವಾನಗಿಯನ್ನು ರದ್ದುಪಡಿಸಬೇಕು ಎನ್ನುತ್ತದೆ. ಜೊತೆಗೆ ವಿಚ್ಛೇದನೆಯ ನಂತರ ಜೀವನಾಂಶವನ್ನು ಕಾಲಕಾಲಕ್ಕೆ ನೀಡದವರ ವಿರುದ್ಧ ಕ್ರಿಮಿನಲ್ ಪ್ರೊಸೀಜರ್ ಕೋಡ್ ಅಡಿ ಕ್ರಮ ತೆಗೆದುಕೊಳ್ಳಲು ಅವಕಾಶ ಇರಬೇಕೆಂದು ಶಿಫಾರಸ್ಸು ಮಾಡುತ್ತದೆ.

ಭಾರತದ ಮುಸ್ಲಿಮರು 'ಮುಸ್ಲಿಂ ವೈಯಕ್ತಿಕ ಕಾನೂನು (ಷರಿಯತ್) 1936' ಅಡಿ ಬರುತ್ತಾರೆ. ಇದು ಮುಸಲ್ಮಾನರನ್ನು ಷರಿಯತ್ ಕಾನೂನಿನಡಿ ತರುತ್ತದೆ. ಆದರೆ ಷರಿಯತ್ ಅನ್ನೇ ಇಲ್ಲಿಯತನಕ ಸರಿಯಾಗಿ ಕ್ರೋಢೀಕರಿಸಿಲ್ಲವಾದ್ದರಿಂದ ಅದನ್ನು ಸ್ಥಳೀಯ ಮೌಲ್ವಿಗಳು ತಮಗೆ ಬೇಕಾದಂತೆ ವ್ಯಾಖ್ಯಾನಿಸುತ್ತಾರೆ. ಹಲವಾರು ಮುಸಲ್ಮಾನ ಮಹಿಳಾ ಸಂಘಟನೆಗಳು ಮುಸ್ಲಿಮ್ ವೈಯಕ್ತಿಕ ಕಾನೂನನ್ನು ಸರಿಯಾಗಿ ಕ್ರೋಢೀಕರಿಸಬೇಕೆಂದು ಒತ್ತಾಯ ಮಾಡುತ್ತಲೇ ಬಂದಿವೆ.

ಅಲ್ಪಸಂಖ್ಯಾತ ಮುಸಲ್ಮಾನರ ವೈಯಕ್ತಿಕ ಕಾನೂನಿನ ಬದಲಾವಣೆಗೆ ಆ ಸಮುದಾಯದ ಮಹಿಳೆಯರೇ ಈಗ ಧರ್ಮನಿಷ್ಠ ಪರ್ಯಾಯಗಳನ್ನು ಸೂಚಿಸಿರುವುದು ಸರಿಯಾದದ್ದೇ.

ಆದರೆ ಮುಸಲ್ಮಾನ ಮಹಿಳೆಯರು ತೋರಿರುವ ಈ ಧೈರ್ಯವನ್ನು ಮೆಚ್ಚಿ ಅವರು ಕೊಟ್ಟಿರುವ ಸಲಹೆಗಳಿಗೆ ಸಂಪ್ರದಾಯವಾದಿ ಮುಸಲ್ಮಾನ ಪುರುಷರು ಹೇಗೆ ಸ್ಪಂದಿಸುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

# 'ಕೈ' ಹಿಡಿದ ದುರ್ಗಕ್ಕೆ ಹೊಸ 'ಚಿತ್ತಾರ'?



ಚಿತ್ರದುರ್ಗ ಪಾರ್ಲಿಮೆಂಟ್ ಚುನಾವಣೆಯ ಫಲಿತಾಂಶ ಕೇವಲ ಕಾಂಗ್ರೆಸ್ ಅಭ್ಯರ್ಥಿ ಚಂದ್ರಪ್ಪನವರ ನಸೀಬು ಬದಲಿಸಿಲ್ಲ; ಬದಲಾಗಿ ಇಡೀ ಜಿಲ್ಲೆಯ ಅಭಿವೃದ್ಧಿ ವೇಗವನ್ನೇ ಹೆಚ್ಚಿಸುವ ಲಕ್ಷಣಗಳು ಢಾಳಾಗಿ ಕಾಣಿಸುತ್ತಿವೆ. ದೇಶಾದ್ಯಂತ ಮೋದಿ ಅಲೆಯ ಅಬ್ಬರವಿದ್ದರೂ ಚಿತ್ರದುರ್ಗದಲ್ಲಿ ಅದು ಹಿಂದಿನ ಬಿಜೆಪಿ ಸಂಸದ ಜನಾರ್ದನ ಸ್ವಾಮಿ ಮಾಜಿಯಾಗುವುದನ್ನು ತಪ್ಪಿಸಲು ಸಾಧ್ಯವಾಗಲಿಲ್ಲ. ಕಾಂಗ್ರೆಸ್ ಇಲ್ಲಿ ದಿಗ್ವಿಜಯ ಸಾಧಿಸುವ ಮೂಲಕ ಕಳೆದುಹೋಗಿದ್ದ ತನ್ನ ಅಧಿಪತ್ಯವನ್ನು ಮರುಸ್ಥಾಪಿಸಿದಂತಾಗಿದೆ. ಕಳೆದ ಬಾರಿ ಬಿಜೆಪಿ ಸಂಸದ ಮತ್ತು ಶಾಸಕರಿಂದಲೇ ತುಂಬಿಹೋಗಿದ್ದ ಜಿಲ್ಲೆಯಲ್ಲಿ ಇದೀಗ ಒಬ್ಬರು ಮಂತ್ರಿ, ನಾಲ್ಕು ಜನ ಶಾಸಕರು, ಒಬ್ಬ ಪರಿಷತ್ ಸದಸ್ಯ ಮತ್ತು ಸಂಸದ ಚಂದ್ರಪ್ಪನೂ ಸೇರಿದರೆ ಒಟ್ಟು ಏಳು ಜನ ಕಾಂಗ್ರೆಸ್ ನಾಯಕರದ್ದೇ ಕಾರುಬಾರು. ಈ ಮಟ್ಟಿಗೆ ಪಕ್ಷದ ಕೈ ಹಿಡಿದ ಜಿಲ್ಲೆಯ ಮತದಾರರಿಗೆ ಭರಪೂರ ಯೋಜನೆಗಳನ್ನು ಅರ್ಪಿಸಲು ಸಚಿವ ಆಂಜನೇಯ ನೇತೃತ್ವದ ಟೀಮು ರೆಡಿಯಾಗಿ ನಿಂತಿದೆ.

ಅಸಲಿಗೆ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹುರಿಯಾಳು ಚಂದ್ರಪ್ಪನವರ ಗೆಲುವು ಆರಂಭದಲ್ಲಿ ಅಷ್ಟೇನು ಸಲೀಸಾಗಿರಲಿಲ್ಲ. ಅದಕ್ಕೆ ಮುಖ್ಯ ಕಾರಣ ಪಕ್ಷದೊಳಗಿದ್ದ ಆಂತರಿಕ ಬೇಗುದಿ. ಜಿಲ್ಲಾ ಅಧ್ಯಕ್ಷ ಸೇತೂರಾಂ ಎಂಬ ಜಿಗುಟು ಆಸಾಮಿಯ ವಿತಂಡ ರಾಜಕಾರಣ ಪಕ್ಷದ ವಾತಾವರಣವನ್ನು ಹದಗೆಡಿಸಿತ್ತು. ಸ್ವತಃ ಜಿಲ್ಲಾ ಕಾಂಗ್ರೆಸ್ ಉಪಧ್ಯಾಕ್ಷ ವೆಂಕಟೇಶ್, ಅಧ್ಯಕ್ಷ ಸೇತೂರಾಮನ ಸಮಯಸಾಧಕ ರಾಜಕಾರಣಕ್ಕೆ ಬೇಸತ್ತು ಬಂಡಾಯವೆದ್ದಿದ್ದರು. ಆರ್.ಕೆ.ನಾಯ್ಡು, ಪ್ರಕಾಶ್ ರೆಡ್ಡಿಯಂತಹ ನಾಯಕರೂ ಸೇತೂರಾಮನ ವಿರುದ್ಧ ಮುನಿಸಿಕೊಂಡಿದ್ದರು. ಕಳೆದ ವಿಧಾನ ಪರಿಷತ್ ಚುನಾವಣೆಯಲ್ಲಿ ರಘು ಆಚಾರ್ಯನೆದುರು ಹೀನಾಯಸೋಲು ಕಂಡ ಬೆನ್ನಲ್ಲೆ ಸೇತೂರಾಮನ ವಿರುದ್ಧ ಕಾಂಗ್ರೆಸ್ ನಾಯಕರೆ ಸಿಡಿದು ನಿಂತಿದ್ದರು. ಇಂಥಾ ಪರಿಸ್ಥಿತಿಯಲ್ಲಿದ್ದ ಕಾಂಗ್ರೆಸ್ ಪಕ್ಷವನ್ನು ಗೆಲುವಿನ ದಡ ಸೇರಿಸುವಲ್ಲಿ ಜಿಲ್ಲಾ ಉಸ್ತುವಾರಿ ಕಮ್ ಸಮಾಜ ಕಲ್ಯಾಣ ಸಚಿವ ಎಚ್. ಆಂಜನೇಯ ಹಾಗೂ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಹನುಮಲಿ ಷಣ್ಮುಖಪ್ಪನವರ ಪಾತ್ರ ದೊಡ್ಡದು. ಹನುಮಲಿ ಷಣ್ಮುಖಪ್ಪ ದಿವಂಗತ ರಾಮಕೃಷ್ಣ ಹೆಗಡೆಯ ರಾಜಕಾರಣದಲ್ಲಿ ಕೈಯಾಡಿಸಿ ಬಂದವರು. ಧರ್ಮ ಸಿಂಗ್, ಖರ್ಗೆಯಂಥಾ ದಿಗ್ಗಜರ ರಾಜಕೀಯ ಗರಡಿಯಲ್ಲಿ ಪಟ್ಟುಕಲಿತಂತವರು. ಹಾಗಾಗಿ ಪ್ರಚಾರ ಸಮಿತಿಯ ಉಸ್ತುವಾರಿ ವಹಿಸಿಕೊಳ್ಳುತ್ತಿದ್ದಂತೆಯೇ ಪಾರ್ಟಿಯೊಳಗಿನ ಮುನಿಸುಗಳಿಗೆ ಮಂಗಳಹಾಡಿ ಸಿಡಿದುಹೋಗಿದ್ದ ನಾಯಕರನ್ನೆಲ್ಲ ಪಾರ್ಟಿಯ ಕಟ್ಟೆಗೆ ತಂದು ಸಮನ್ವಯದ ಗಾಳಿಬೀಸಿದ್ದರು. ಇದಕ್ಕೆಲ್ಲಾ ಎಚ್.ಆಂಜನೇಯರ ಸಾಥ್ ಇತ್ತು. ಕಾಂಗ್ರೆಸ್‌ನ ಈ ಸಂಘಟಿತ ಹೋರಾಟ ಕೊನೆಗೂ ಬಿಜೆಪಿಯ ಐಟಿ ಸ್ವಾಮಿಯನ್ನು ಮನೆಗೆ ಕಳುಹಿಸಿ ಚಂದ್ರಪ್ಪನವರ 'ಕೈ' ಎತ್ತಿ ಹಿಡಿಯುವಲ್ಲಿ ಯಶ ಕಂಡಿದೆ. ಇಷ್ಟಾದರೂ ಕಾಂಗ್ರೆಸಿಗೆ ಹೊಸ ಕಾಯಕಲ್ಪದ ಅಗತ್ಯವಂತೂ ಇದ್ದೇ ಇದೆ.

ಆ ಕಾಯಕಲ್ಪದ ಅನಿವಾರ್ಯತೆಯೇ ಇವತ್ತು ಬರದ ನಾಡು ಚಿತ್ರದುರ್ಗದ ದಾಹ ಇಂಗಿಸುವ ಲಕ್ಷಣಗಳಿಗೆ ಸಾಕ್ಷಿಯಾಗುವಂತಿದೆ. ಕಾಂಗ್ರೆಸ್ ಪಕ್ಷ ಜಯಭೇರಿ ಬಾರಿಸಿದ್ದರೂ, ಈ ಜಯಭೇರಿಯ ಹಿಂದಿರುವ ಪ್ರಮುಖ ರೂವಾರಿಗಳಾದ ಸಚಿವ ಎಚ್. ಆಂಜನೇಯ ಮತ್ತು ಹನುಮಲಿ ಷಣ್ಮುಖಪ್ಪನವರ ತವರು ಕ್ಷೇತ್ರ ಹೊಳಲ್ಕೆರೆಯಲ್ಲೇ ಕೈ ಹಿನ್ನಡೆ ಅನುಭವಿಸಿ ಬಿಜೆಪಿಗೆ ಲೀಡ್ ಸಿಕ್ಕಿದ್ದು ಅಚ್ಚರಿಯ ಸಂಗತಿ. ಗೆದ್ದು ಮಂತ್ರಿಯಾದ ಆಂಜನೇಯ ತಮ್ಮ ಇಲಾಖೆಯ ಜವಾಬ್ದಾರಿ ನಿರ್ವಹಿಸಲು ಕೊಂಚ ಹೆಚ್ಚು ಹೊತ್ತು ನೀಡಿದ್ದರಿಂದ ಸ್ವಕ್ಷೇತ್ರದ ಕಡೆ ಅಷ್ಟಾಗಿ ಗಮನ ನೀಡಲು ಸಾಧ್ಯವಾಗಿರಲಿಲ್ಲ. ಆದ್ದರಿಂದ ಮತದಾರ ನಿರಾಶೆಗೊಂಡಿದ್ದು ಸಹಜ. ಮತದಾರರ ಆ ಅಸಮಾಧಾನವೇ ಪಾರ್ಲಿಮೆಂಟ್ ಚುನಾವಣೆಯಲ್ಲಿ ವ್ಯತಿರಿಕ್ತ ಪರಿಣಾಮ ಬೀರಲು ಕಾರಣವಾಗಿತ್ತು. ಇದರ ಸುಳಿವು ಸಿಗುತ್ತಿದ್ದಂತೆಯೇ ಮಂತ್ರಿ ಆಂಜನೇಯ ಚುರುಕಾಗಿದ್ದಾರೆ. ತಮ್ಮ ಖಾತೆ ಕಾರ್ಯದೊತ್ತಡದ ನಡುವೆಯೂ ಹೊಳಲ್ಕೆರೆ ಕ್ಷೇತ್ರಕ್ಕೆ ಬಂಪರ್ ಕೊಡುಗೆ ನೀಡುವ ಉದ್ದೇಶದಿಂದ ಅಜಮಾಸು 500 ಕೋಟಿ ವೆಚ್ಚದ ಕಾಮಗಾರಿಗಳ ನೀಲನಕ್ಷೆ ತಯಾರಿಸಿಟ್ಟುಕೊಂಡಿದ್ದಾರೆ.


ಐವತ್ತು ವರ್ಷಗಳಿಂದಲೂ ಹೊಸದುರ್ಗ ಮತ್ತು ಹೊಳಲ್ಕೆರೆ ಎರಡೂ ತಾಲ್ಲೂಕುಗಳು ನೀರಾವರಿ ಸೌಲಭ್ಯದಿಂದ ವಂಚಿತವಾಗಿವೆ. ಚಿತ್ರದುರ್ಗದವರೇ ಆದ ದಿವಂಗತ ನಿಜಲಿಂಗಪ್ಪ ಮುಖ್ಯಮಂತ್ರಿಯಾಗಿದ್ದಾಗಲೇ ಈ ತಾಲ್ಲೂಕುಗಳು ನೀರಾವರಿ ಭಾಗ್ಯ ಪಡೆಯಬೇಕಿತ್ತು. ಆದರೆ ಇಲ್ಲಿಯವರೆಗೆ ಅದು ಸಾಧ್ಯವಾಗಿಲ್ಲ. ಇದೀಗ ಆಂಜನೇಯ ಈ ಎರಡೂ ತಾಲ್ಲೂಕುಗಳಿಗೆ ನೀರುಣಿಸುವ ಕನಸಿಗೆ ಮರುಜೀವ ತುಂಬಿದ್ದಾರೆ. ಅಪ್ಪರ್ ಭದ್ರಾ ಕೆನಾಲ್ ಚಿತ್ರದುರ್ಗ ಜಿಲ್ಲೆಗೆ ಹರಿದು ಬರುವ ಹೊಂಗನಸು ಮತ್ತೆ ಚಿಗುರತೊಡಗಿದೆ. ಅಂದರೆ ಹೊಸದುರ್ಗ, ಹೊಳಲ್ಕೆರೆ, ಮೊಳಕಾಲ್ಮೂರು, ಚಿತ್ರದುರ್ಗ ಸೇರಿದಂತೆ 2.5ಲಕ್ಷ ಹೆಕ್ಟೇರು ಭೂಮಿಗೆ ನೀರಾವರಿ ಸೌಲಭ್ಯ ಸಿಗಲಿದೆ. ಇದರ ಜೊತೆಗೆ ಹೊಳಲ್ಕೆರೆ ತಾಲ್ಲೂಕಿನ ರಾಮಗಿರಿ, ಕಸಬ, ಮಲ್ಲಾಡಿಹಳ್ಳಿ ಮತ್ತು ಹದೂರು, ಹನುಮಲಿ, ಗುಂಡೇರಿ, ಹೊಳಲ್ಕೆರೆ, ತಾಳಿಕಟ್ಟೆ, ಹುಲೇಮಳಲಿ ಸೇರಿದಂತೆ ಒಟ್ಟು 23 ಕೆರೆಗಳಿಗೆ ಅಪ್ಪರ್ ಭದ್ರಾ ಕೆನಾಲ್‌ನಿಂದ ನೀರು ತುಂಬಿಸುವ ಯೋಜನೆಯೂ ಸಿದ್ಧವಾಗಿದೆ. ಅಲ್ಲದೆ ತಾಲ್ಲೂಕಿನಾದ್ಯಂತ ಚೆಕ್‌ಡ್ಯಾಂ ನಿರ್ಮಿಸಿ ಮಳೆನೀರು ಸಂಗ್ರಹಕ್ಕೂ ಆದ್ಯತೆ ನೀಡಲಾಗಿದೆ. ರಸ್ತೆ ಚೆಕ್ ಡ್ಯಾಂಗಳಿಗೆಂದೇ 177 ಕೋಟಿ ಮಂಜೂರಾಗಿದೆ. ಭದ್ರಾ ಮೇಲ್ದಂಡೆ ಕಾಮಗಾರಿ ಈಗಾಗಲೇ ಚುರುಕು ಪಡೆದುಕೊಂಡಿದ್ದು ಸ್ವತಃ ಮುಖ್ಯಮಂತ್ರಿಗಳೇ ಇದಕ್ಕೆ ಚಾಲನೆ ನೀಡುವ ತಯಾರಿ ಜೋರಾಗಿ ನಡೆಯುತ್ತಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಜಿಲ್ಲೆಯನ್ನು ಮರಳಿ ಕಾಂಗ್ರೆಸ್ ತೆಕ್ಕೆಗೆ ಒಪ್ಪಿಸಿದ ಜನರಿಗೆ ನೀರಾವರಿಯ ಭರ್ಜರಿ ಉಡುಗೊರೆ ಲಭಿಸಲಿದೆ.


ಈ ಹಿಂದೆ ಹೊಳಲ್ಕೆರೆಯ ಶಾಸಕನಾಗಿದ್ದ ಬಿಜೆಪಿಯ ಚಂದ್ರಪ್ಪನ ಅವಧಿಯಲ್ಲಾದ ನಿರುಪಯುಕ್ತ ಕಾಮಗಾರಿಗಳಿಗೆ ಬ್ರೇಕ್ ಹಾಕಿ ಅಭಿವೃದ್ಧಿಗೆ ಹೊಸ ಲುಕ್ ನೀಡಲು ಆಂಜನೇಯ ಅಣಿಯಾಗಿದ್ದಾರೆ. ಮೂರು ವರ್ಷಗಳ ಹಿಂದೆಯೇ ಬರೋಬ್ಬರಿ 1.15 ಕೋಟಿ ವೆಚ್ಚದಲ್ಲಿ ಹೊಳಲ್ಕೆರೆಯಲ್ಲಿ ಎಪಿಎಂಸಿ ಯಾರ್ಡ್ ನಿರ್ಮಿಸಲಾಗಿತ್ತು. ಆದರೆ ಅದು ರೈತರಿಗೆ ನಯಾಪೈಸೆಯ ಉಪಯೋಗಕ್ಕೆ ಬಾರದೆ ಅನೈತಿಕ ಚಟುವಟಿಕೆಗಳ ತಾಣವಾಗಿದೆ. ಯಾಕೆಂದರೆ ದೂರದೃಷ್ಟಿ ಇಲ್ಲದ ಚಂದ್ರಪ್ಪ ಅದನ್ನು ನಿರ್ಮಿಸಿದ್ದೇ ನಗರದಿಂದ ನಾಲ್ಕು ಕಿಮೀ ದೂರದಲ್ಲಿರುವ ಅಪಾಯಕಾರಿ ಹನುಮಂತನ ಕಣಿವೆಯಲ್ಲಿ. ಹೇಳಿಕೇಳಿ ಮಂಗಳೂರು-ಸೊಲ್ಲಾಪುರ ಹೆದ್ದಾರಿಯ ಕಡಿದಾದ ಗುಡ್ಡದ ಮೇಲಿರುವ ಎಪಿಎಂಸಿ ರೈತರ ಪಾಲಿಗೆ ಒಂಥರಾ ಗಗನಕುಸುಮ ದಂತಾಗಿದೆ. ಇದು ಅಪಘಾತಗಳಿಗೆ ಫೇವರಿಟ್ ಸ್ಪಾಟ್. ಈ ಯೋಜನೆಗೆ ಅಡಿಗಲ್ಲಾಕಿದಾಗಲೇ ರೈತರು ವಿರೋಧಿಸಿದ್ದರು. ಆದರೂ ಚಂದ್ರಪ್ಪ ಕ್ಯಾರೇ ಎನ್ನದೆ ದುಡ್ಡು ಸುರಿದಿದ್ದ. ಚಂದ್ರಪ್ಪನ ಯಡವಟ್ಟುಗಳು ಇದೊಂದೇ ಅಲ್ಲ. ಇದೇ ಹನುಮಂತನ ಕಣಿವೆಯಲ್ಲಿ ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ನಿರ್ಮಿಸಿದ ವಿವಿಐಪಿ ಬಂಗಲೆ ಇವತ್ತು ಅನಾಥವಾಗಿ ಬಿದ್ದಿದೆ. ನಗರದ ನಟ್ಟನಡುವೆ ತಲೆಯೆತ್ತಿ ನಿಂತಿದ್ದ ಗಾಂಧಿ ವ್ಯಾಪಾರಿ ಮಳಿಗೆಯೂ ಕಳಪೆ ಕಾಮಗಾರಿಯಿಂದ ಶಿಥಿಲಾವಸ್ಥೆಗೆ ಬಂದು ತಲುಪಿದೆ. ಆದರೀಗ ಆಂಜನೇಯ ಬೆಳೆ ಮಾರಾಟ ಕೇಂದ್ರವನ್ನು ಪಟ್ಟಣದ ಸಮೀಪದಲ್ಲೇ ನಿರ್ಮಿಸಲು ಯೋಜನೆ ರೂಪಿಸಿದ್ದಾರೆ. ಹೊಸದುರ್ಗ, ಚನ್ನಗಿರಿ, ಚಿತ್ರದುರ್ಗ ಗ್ರಾಮಾಂತರ, ಹೊಳಲ್ಕೆರೆ ರೈತರಿಗೆ ಇದು ಅನುಕೂಲವಾಗಲಿದೆ.

ಇನ್ನು ಸಂಸದ ಚಂದ್ರಪ್ಪನವರು ನೆನೆಗುದಿಗೆ ಬಿದ್ದಿದ್ದ ಚಿತ್ರದುರ್ಗ-ತುಮಕೂರು ನೇರ ರೈಲು ಸಂಪರ್ಕ ಯೋಜನೆಯನ್ನು ಚುರುಕುಗೊಳಿಸಿದ್ದಾರೆ. ಬಿಜೆಪಿಯ ಮಾಜಿ ಸಂಸದ ಜನಾರ್ದನ ಸ್ವಾಮಿ ಕಾಲದಲ್ಲೇ ಭದ್ರಮೇಲ್ದಂಡೆ ಮತ್ತು ಚಿತ್ರದುರ್ಗ-ತುಮಕೂರು ರೈಲ್ವೆ ಮಾರ್ಗಗಳಿಗೆ ಚಾಲನೆ ನೀಡಲಾಗಿತ್ತಾದರು ಐ.ಟಿ ಬಿ.ಟಿ. ಮಂತ್ರ ಜಪಿಸುವ ಭರಾಟೆಯಲ್ಲಿ ಅವುಗಳನ್ನು ನಿರ್ಲಕ್ಷಿಸಿದ್ದರು. ಚಂದ್ರಪ್ಪ ಸಂಸದರಾದ ತಿಂಗಳೊಪ್ಪತ್ತಿನಲ್ಲೆ ರೈಲು ಮಾರ್ಗ ಕಾಮಗಾರಿಯ ಭೂಸ್ವಾಧೀನ ಪ್ರಕ್ರಿಯೆ ಚಾಲನೆ ಪಡೆದುಕೊಳ್ಳುತ್ತಿದೆ.

ಅಂತೂಇಂತೂ ಮಂತ್ರಿ, ಶಾಸಕರು, ಸಂಸದ, ಪರಿಷತ್ ಸದಸ್ಯ ಹೀಗೆ ಸಂಪೂರ್ಣ ಕಾಂಗ್ರೆಸ್ ಆಡಳಿತವನ್ನು ಜಿಲ್ಲೆಯಲ್ಲಿ ನೆಲೆಗೊಳಿಸಿರುವ ಮತದಾರ ಈಗಲಾದರು ದುರ್ಗದ ಬವಣೆಗೆ ಅಂತ್ಯಕಾಣುವುದೇ ಎಂಬ ನಿರೀಕ್ಷೆಯಲ್ಲಿದ್ದಾನೆ.

● ಟಿ.ಎನ್.ಷಣ್ಮು






# ಅಜ್ಜಂಪುರದಲ್ಲಿ 'ಲಂಕೇಶ್'!

ಕನ್ನಡದ ಖ್ಯಾತ ಸಾಹಿತಿ, ಕಾದಂಬರಿಕಾರ, ನಾಟಕಕಾರ, ನಿರ್ದೇಶಕ, ಕವಿ, ವಿಮರ್ಶಕ, ಮೇಸ್ಟ್ರು-ಹೀಗೆ ತರಹೇವಾರಿ ಅವತಾರಗಳನ್ನೆತ್ತಿದ್ದ ಪಿ.ಲಂಕೇಶ್ ಅದೆಷ್ಟೋ ಜನರಿಗೆ ಚಿಂತನೆಗಳ ದಾರಿ ತೋರಿದ್ದಾರೆ. ಕೆಲವೆಡೆ ಹಲವಾರು ಚಿಂತನೆಗಳಿಗೆ ಅವರೇ ದಾರಿಯಾಗಿ ಮೈಚೆಲ್ಲಿಕೊಂಡಿದ್ದಾರೆ. ಈಗ ಅಜ್ಜಂಪುರ ಗ್ರಾಮ ಪಂಚಾಯತಿ 'ಲಂಕೇಶ್'ಗೆ ಹೊಸದೊಂದು ಜವಾಬ್ದಾರಿ ವಹಿಸಿದೆ. ಅದೇನೆಂದರೆ ತಮ್ಮೂರಿನ ದಾರಿಯೊಂದರಲ್ಲಿ ನಿಜಕ್ಕೂ 'ಮಾರ್ಗ'ದರ್ಶನ ಮಾಡಿಸುವ ಕೆಲಸ. ಅಚ್ಚರಿಯಾಯಿತೆ?

ವಿಷಯ ಏನೆಂದರೆ ಅವರ ಹೆಸರನ್ನು ಚಿರಸ್ಥಾಯಿಗೊಳಿಸುವುದಕ್ಕೋಸ್ಕರ ಅಜ್ಜಂಪುರ ಗ್ರಾಮ ಪಂಚಾಯತಿ ರಸ್ತೆಯೊಂದಕ್ಕೆ 'ಪಿ.ಲಂಕೇಶ್ ರಸ್ತೆ' ಎಂಬುದಾಗಿ ನಾಮಕರಣ ಮಾಡಿದೆ.

ಅಜ್ಜಂಪುರ ಗ್ರಾ.ಪಂ. ಅಧ್ಯಕ್ಷರಾಗಿರುವ ದಾನಿ ಜೋಗಿ ತಿಮ್ಮಯ್ಯ ಅವರ ಮೊಮ್ಮಗ ಜೋಗಿ ಪ್ರಕಾಶ್ ಪಟ್ಟಣಕ್ಕೆ ಏನಾದರೊಂದು ಹೊಸತು ಮಾಡಬೇಕೆಂಬ ಹಂಬಲದೊಂದಿಗೆ ಸಮಾನ ಮನಸ್ಕರೊಂದಿಗೆ ಚರ್ಚಿಸಿ ಎಲ್ಲಾ ರಸ್ತೆಗಳಿಗೆ ಹೊಸದಾಗಿ ಮತ್ತು ಅರ್ಥಪೂರ್ಣವಾಗಿ ಮರುನಾಮಕರಣ ಮಾಡುವ ನಿರ್ಧಾರ ತೆಗೆದುಕೊಂಡಿದ್ದರು.

ಈ ಕುರಿತು ಪತ್ರಕರ್ತ ವೆಂಕಟೇಶ್ ಅವರೊಂದಿಗೆ ಚರ್ಚಿಸಿದಾಗ ಅವರು ಕೆಲವೊಂದು ಹೆಸರುಗಳನ್ನು ಶಿಫಾರಸ್ಸು ಮಾಡಿದ್ದರು. ಆ ಪಟ್ಟಿಯಲ್ಲಿ ನಾಡಿನ ಸಾಹಿತಿಗಳು, ಕವಿಗಳು, ವಿಮರ್ಶಕರು, ದಾನಿಗಳು, ಪ್ರಜ್ಞಾವಂತರು, ಸಮಾಜ





ಸುಧಾರಕರ ಹೆಸರುಗಳಿದ್ದವು. ಈ ಹೆಸರುಗಳನ್ನು ಶಿಫಾರಸ್ಸು ಮಾಡಿದ ಪತ್ರಕರ್ತ ವೆಂಕಟೇಶ್‌ರು ಲಂಕೇಶ್ ಮೇಷ್ಟ್ರ ಅಪ್ಪಟ ಅಭಿಮಾನಿ ಎಂಬುದನ್ನು ಅರಿತಿದ್ದ ಗ್ರಾಮ ಪಂಚಾಯ್ತಿಯವರು ವೆಂಕಟೇಶ್‌ರ 'ಪವಿತ್ರಾ ಪ್ರೆಸ್' ಇರುವ ರಸ್ತೆಗೆ 'ಪಿ.ಲಂಕೇಶ್ ರಸ್ತೆ' ಅಂತ ನಾಮಕರಣ ಮಾಡಿ ಅಧಿಕೃತಗೊಳಿಸಿದ್ದಾರೆ.


ಲಂಕೇಶ್ ಎಂಬುದು ಕೇವಲ ಒಂದು ಹೆಸರಲ್ಲ ಅಥವಾ ಒಬ್ಬ ವ್ಯಕ್ತಿಯ ಅಸ್ತಿತ್ವವಲ್ಲ; ಅದೊಂದು ಚಿಂತನೆ ಮತ್ತು ಪ್ರಜ್ಞಾವಂತಿಕೆಯ ದೊಡ್ಡ ಆಲದ ಮರ. ಹಾಗಾಗಿ ಈ ರಸ್ತೆಗೆ ಸೂಕ್ತವಾದ ಹೆಸರನ್ನೆ ಇಟ್ಟಿದ್ದೀರಿ ಎಂದು ಹಲವರು ಸಂತಸ ವ್ಯಕ್ತಪಡಿಸಿದ್ದಾರೆ. ಗ್ರಾಮ ಪಂಚಾಯ್ತಿಯ ಇಂತಹ ಅರ್ಥಪೂರ್ಣ ನಿರ್ಧಾರದಿಂದಾಗಿ ಅಜ್ಜಂಪುರದ ಬೀದಿಗಳೆಲ್ಲ ಸಾಧಕರ ಸ್ಮರಣೆಗೆ ಸಾಕ್ಷಿಯಾಗಿವೆ.

ಹಾಗೆ ನೋಡಿದರೆ ಲಂಕೇಶ್‌ಗೂ ಅಜ್ಜಂಪುರಕ್ಕೂ ತುಂಬಾ ಹಳೆಯ ನಂಟು. ಅವರು ಪ್ರಗತಿರಂಗ ಹುಟ್ಟು ಹಾಕಿದಾಗ ತಾಳಿಕಟ್ಟೆಯಲ್ಲಿ ಪ್ರಥಮ ಸಭೆ ನಡೆಸಿದ ತರುವಾಯ ಎರಡನೇ ಸಭೆ ನಡೆಸಿದ್ದೇ ಅಜ್ಜಂಪುರದಲ್ಲಿ. ಅವತ್ತು ಇಲ್ಲಿಯೇ ತಂಗಿದ್ದ ಲಂಕೇಶ್‌ರು ಸಂಜೆ ಅಮೃತ್‌ಮಹಲ್ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ದೈತ್ಯ ರಾಸುಗಳನ್ನು ನೋಡಿ ಮೂಕವಿಸ್ಮಿತರಾಗಿದ್ದರು. ರಾತ್ರಿ ಕೇಂದ್ರದ ಮುಖ್ಯಸ್ಥ ಡಾ.ಕೃಷ್ಣಮೂರ್ತಿಯವರ ಆತಿಥ್ಯ ಸ್ವೀಕರಿಸಿ, ಪಟ್ಟಣದ ದರಿದ್ರ ಪ್ರವಾಸಿ ಮಂದಿರದಲ್ಲಿ ಸೊಳ್ಳೆ, ತಿಗಣೆಗಳಿಂದ ಕಡಿಸಿಕೊಂಡು ಮಲಗಿ ಬೆಳಗ್ಗೆ ಯಾರಿಗೂ ಹೇಳದೆ-ಕೇಳದೆ ಬೆಂಗಳೂರಿಗೆ ವಾಪಸ್ಸಾಗಿದ್ದರು.


ಆದರೆ ಇನ್ಮುಂದೆ ರಸ್ತೆಯ ಹೆಸರಿನ ಮೂಲಕ 'ಲಂಕೇಶ್' ಅಜ್ಜಂಪುರದಲ್ಲಿ ಕಾಯಂ ಆಗಿ ಉಳಿದುಕೊಳ್ಳಲಿದ್ದಾರೆ ಎಂಬುದೇ ಅಲ್ಲಿನ ಅವರ ಅಭಿಮಾನಿಗಳಿಗೆ ಸಂತಸ ತಂದಿದೆ!!

...ದ್ಯಸ್ವಾಮಿ





ಅಮರಾವತಿ ಚಂದ್ರಶೇಖರ್



# ಕಲಿಯುಗ ಕರ್ಣನ ಸೈಟು ಮೋಹ

...ಂಬಿದ್ರೆ ನಂಬಿ, ಬಿಟ್ರೆ ಬಿಡಿ ವಸತಿ ಸಚಿವ ರೆಬೆಲ್ ... ಅಂಬರೀಷ್‌ಗೆ ಎಲ್ಲೂ ಮನೆಯಾಗಲಿ, ನಿವೇಶನ ... ಇಲ್ಲವಂತೆ. ಹಾಗಂತ ಹೇಳಿ ಒಂದಲ್ಲ, ಎರಡಲ್ಲ ...ಬ್ಬರಿ ಮೂರು ಸರ್ಕಾರಿ ನಿವೇಶನಗಳನ್ನು ಪಡೆದು ...ದ್ದಾರೆ. ಸೂರಿಲ್ಲದ ಅಸಂಖ್ಯಾತ ಜನ ನೆತ್ತಿಯ ಮೇಲೆ ...ಷ್ಟು ನೆರಳು ಬಿದ್ದರೆ ಸಾಕು ಅಂತ ನಗರಾಭಿವೃದ್ಧಿ ...ಕಾರಗಳಿಗೆ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿ ವರ್ಷಾನು ...ೀ ಬಕಪಕ್ಷಿಗಳಂತೆ ಕಾಯುತ್ತಲೇ ಇದ್ದಾರೆ. ಅವರಿಗೆ ... ಸಿಗದಿದ್ದರೂ ಸಚಿವರಿಗೆ ಮೂರ್ಮೂರು ನಿವೇಶನಗಳ ... ಹೊಡೆದಿದೆ.


...ೂದಲೇ ಅಂಬರೀಶ್‌ರ ಸೋಮಾರಿತನ, ಉಡಾಫೆತನ ...ರೋಸಿಹೋಗಿದ್ದ ಜಿಲ್ಲೆಯ ಜನರು ಸೈಟು ಪ್ರಕರಣ ...ಬಾದ ನಂತರವಂತೂ ಜಿಲ್ಲಾ ಉಸ್ತುವಾರಿ ಮಂತ್ರಿಗೆ ...ಾಪ ಹಾಕುತ್ತಿದ್ದಾರೆ. ಜನ ಈ ಪರಿ ಆಕ್ರೋಶಗೊಳ್ಳ ... ಅಂಬಿ ಸೈಟು ಹೊಡೆದದ್ದಕ್ಕಿಂತ 'ನನ್ನ ಯೋಗ್ಯತೆಗೆ ...ು ಸೈಟು ಕಡಿಮೆಯೇ' ಎಂಬ ನಾಚಿಕೆಯಿಲ್ಲದ ...ಗು ಹೊಡೆದದ್ದು ಮತ್ತೊಂದು ಕಾರಣ. ಬೆಳ್ಳಿತೆರೆಯ ...ುಗ ಕರ್ಣನ ಸೈಟು ನುಂಗುವಿಕೆ ಕಂಡ ಜನ ... ಸೈಟು ಹೊಡೆಯುವ ಅಂಬಿ ಯಾವ ಕರ್ಣನೋ ... ಉಗಿಯುತ್ತಿದ್ದಾರೆ.


### ನಂಗೆ ಸೈಟಿಲ್ಲ ಸೈಟು ಕೊಡಿ


ನನಗೆ ಸ್ವಂತದ್ದೊಂದು ಮನೆ-ನಿವೇಶನ ಇಲ್ಲ, ನಾನು ಕಲಾವಿದನಾಗಿ ಕನ್ನಡ ಚಿತ್ರರಂಗಕ್ಕೆ ಸಲ್ಲಿಸಿರುವ ಸೇವೆ ಪರಿಗಣಿಸಿ ನನಗೊಂದು ಸೈಟು ಕೊಡಿ ಎಂದ ಅಂಬಿಗೆ 16-01-1986ರಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಮೈಸೂರಿನ ಕುವೆಂಪುನಗರದಲ್ಲಿ 50x80 ಅಡಿ ಅಳತೆಯ ನಿವೇಶನವನ್ನು ಮಂಜೂರು ಮಾಡಿತ್ತು, ಆದಾದ ಒಂದೇ ವರ್ಷಕ್ಕೆ ಇದನ್ನು ಮುಚ್ಚಿಟ್ಟ ಅಂಬಿ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ (ಬಿಡಿಎ)ಕ್ಕೆ ನನಗೆ ಎಲ್ಲೂ ಸೈಟಿಲ್ಲ ಒಂದು ಸೈಟು ಕೊಡಿ ಎಂದು ಬೆಂಗಳೂರಿನ ವುಡ್‌ಲ್ಯಾಂಡ್ಸ್ ಹೋಟೆಲ್‌ನ ವಿಳಾಸದ ಅರ್ಜಿ ಸಲ್ಲಿಸಿ 28.07.1987ರಲ್ಲಿ ಬೆಂಗಳೂರಿನ ಸಾರಕ್ಕಿ 2ನೇ ಹಂತದಲ್ಲಿ (ಈಗಿನ ಜೆ.ಪಿ.ನಗರ) 120x80 ಅಳತೆಯ 172/ಎ ನಿವೇಶನ ಸಂಖ್ಯೆಯನ್ನು ಕೇವಲ 93,639 ರೂಗಳಿಗೆ ಶುದ್ಧ ಕ್ರಯವಾಗಿ ಪಡೆದಿದ್ದರು. ಅಂದಿನ ಬೆಲೆಗೆ ಹೋಲಿಸಿದರೆ ಇದು ಜುಜುಬಿ ಮೊತ್ತ, ಇಂದು ಜೆಪಿ ನಗರದಲ್ಲಿ ಚದರ ಅಡಿಗೆ 8 ರಿಂದ 10 ಸಾವಿರ ರೂಪಾಯಿ ಬಿಕರಿಯಾಗುತ್ತಿದೆ. 9600 ಚ. ಅಡಿಯ ಅಂಬಿಯ ಬಿಡಿಎ ನಿವೇಶನ ಇಂದಿನ ಬೆಲೆಗೆ 7 ರಿಂದ 8 ಕೋಟಿಗೆ ತೂಗುತ್ತದೆ.


ಮುಡಾ ಸೈಟಿನ ಪುರಾಣ ಅಷ್ಟಕ್ಕೇ ಮುಗಿಯುವುದಿಲ್ಲ. ಮುಡಾ ಕಾನೂನಿನ ಪ್ರಕಾರ ಯಾವುದೇ ಸೈಟನ್ನು ಅಲಾಟ್ ಮಾಡಿದ 30 ದಿನಗಳೊಳಗೆ ಹಣ ಕ್ರಯ ಮಾಡಿಸಿಕೊಳ್ಳಬೇಕು. ಇಲ್ಲದಿದ್ದರೆ 18% ಬಡ್ಡಿ ಸೇರಿಸಿ 60 ದಿನಗಳ ಒಳಗೆ ಕ್ರಯ ಮಾಡಿಸಿಕೊಳ್ಳಬೇಕು. ಆದರೆ 16-01-1986ರಂದು ಸೈಟು ಅಲಾಟ್ ಮಾಡಿಸಿಕೊಂಡ ಅಂಬಿ ಮೂವತ್ತೂ ಇಲ್ಲ, ಅರವತ್ತೂ ಇಲ್ಲ ಬರೋಬ್ಬರಿ 22 ವರ್ಷಗಳ ತರುವಾಯ ಅಂದರೆ 2008ರಲ್ಲಿ ಕೇವಲ 36,444 ರೂ. ಕೊಟ್ಟು ಕ್ರಯ ಮಾಡಿಸಿಕೊಂಡಿದ್ದಾರೆ. ರಿಯಲ್ ಎಸ್ಟೇಟ್ ಹಾವಳಿ ಮುಗಿಲುಮುಟ್ಟಿದ್ದ 2008ರಲ್ಲಿ 1986ರ ಹಳೇ ರೇಟಿಗೇ ಕ್ರಯ ಮಾಡಿಸಿಕೊಂಡದ್ದು

*12ನೇ ಪುಟಕ್ಕೆ...*









# ...ಂಬಿ ವರ್ತನೆ ಬದಲಿಸಿಕೊಳ್ಳಲಿ

...ಂಬರೀಶ್ ವಸತಿ ಸಚಿವರಾಗಿ ಒಂದು ವರ್ಷ ಕಳೆದಿದೆ. ಒಂದು ವರ್ಷದಲ್ಲಿ ಜಿಲ್ಲೆಯ ಅಭಿವೃದ್ಧಿಯಲ್ಲಿ ...ೊಳ್ಳುವಂತಹ ಸಾಧನೆಯೇನೂ ಆಗಿಲ್ಲ, ಸಚಿವರಾಗಿ ಒಂದು ವರ್ಷದಲ್ಲಿ ಕಾಟಾಚಾರಕ್ಕೆಂಬಂತೆ ಕೇವಲ 2 ಜಿಲ್ಲಾ ... ಪರಿಶೀಲನಾ ಸಭೆ (ಕೆಡಿಪಿ) ನಡೆಸಿದ್ದಾರೆ. ನಿಗದಿತ ವೇಳೆಗೆ ಕೆಡಿಪಿ ಸಭೆಗೆ ಬರದ ಅಂಬಿ ತೀರಾ ತಡವಾಗಿ ...ತ್ತಾರೆ. ಮೊದಲ ಸಭೆಯಲ್ಲಿ ಒಂದಷ್ಟು ಅಧಿಕಾರಿಗಳಿಗೆ ಹಾಗೆ ಮಾಡಿ ಹೀಗೆ ಮಾಡಿ ಎಂದು ಹೇಳಿ ಕಾಲ್ಕಿತ್ತರೆ, ... ಬಂದದ್ದು 6 ತಿಂಗಳ ನಂತರ. ಆಗಲೂ ಕಾಟಾಚಾರಕ್ಕೆಂಬಂತೆ ಸಭೆ ಮಾಡಿ ನಿರ್ಗಮಿಸಿದ ಅಂಬಿಯ ...ವೈಖರಿಯಿಂದ ಅಧಿಕಾರಿಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ, ಬರ, ಕುಡಿಯುವ ನೀರಿನ ಸಮಸ್ಯೆ ...ಬಾಕಿ ಪಾವತಿ, ರಸ್ತೆಗಳ ದುಸ್ಥಿತಿ ಸೇರಿದಂತೆ ಹಲವು ಸಮಸ್ಯೆಗಳು ಜಿಲ್ಲೆಯಲ್ಲಿದ್ದರೂ ಜಿಲ್ಲಾ ಉಸ್ತುವಾರಿ ಸಚಿವ ...ೀಶ್ ಇವುಗಳ ನಿವಾರಣೆಗೆ ಪ್ರಯತ್ನಿಸಿಲ್ಲ, ಜಿಲ್ಲೆಯ ಅಭಿವೃದ್ಧಿ ಬಗ್ಗೆ ಕಾಳಜಿ ವಹಿಸುತ್ತಿಲ್ಲ. ಅಂಬಿಯ ಈ ...ಕ್ತ ದೋಷಗಳ ಜೊತೆಗೆ ಅಂಬಿ ಬೆಂಬಲಿಗರ ಯಡವಟ್ಟುಗಳೂ ಅವರಿಗೆ ದುಬಾರಿಯಾದರೆ ಅಚ್ಚರಿಯಿಲ್ಲ, ...ಾಗೆ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ರಮ್ಯಾ ಸೋಲಿಗೆ ಅಂಬಿ ಬೆಂಬಲಿಗರೇ ಕಾರಣವೆನ್ನುವುದು ...ಹಸ್ಯ!

...ಲ್ಲಾ ಕಾಂಗ್ರೆಸ್‌ನಲ್ಲಿರುವ ಬಣ ರಾಜಕಾರಣವನ್ನು ನಿಯಂತ್ರಿಸುವ ಕೆಲಸವನ್ನೂ ಅಂಬಿ ಮಾಡಿಲ್ಲ, ಬದಲಾಗಿ ... ಮುಂದೆ ನಿಂತು ಗುಂಪುಗಾರಿಕೆಯನ್ನು ಪ್ರೋತ್ಸಾಹಿಸುತ್ತಿದ್ದಾರೆ. ಹಾಗಂತ ಸ್ವತಃ ಮಳವಳ್ಳಿಯ ಕಾಂಗ್ರೆಸ್ ಶಾಸಕ ...ನರೇಂದ್ರಸ್ವಾಮಿ ಶಾಸಕಾಂಗ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಮುಂದೆಯೇ ...ದ್ದಾರೆ.

...ೊತೆಗೆ ಅಂಬರೀಶ್‌ರ ಬಲಗೈ ಭಂಟ ಅಮರಾವತಿ ಚಂದ್ರಶೇಖರ್‌ನಿಂದ ಅಂಬಿಯ ಹೆಸರು ಸಾಕಷ್ಟು ಹಳ್ಳ ...ಿದೆ. ಎಲ್ಲಾ ಗೊತ್ತಿದ್ದೂ ಅಂಬಿ ಅಂತಹವರಿಗೇ ಮಣೆ ಹಾಕುತ್ತಿರುವುದು ಜನರಲ್ಲಿ ಅಸಹನೆ ಮೂಡಿಸುತ್ತಿದೆ. ಜಿಲ್ಲಾಧಿಕಾರಿಗಳ ಕಟ್ಟಡದಲ್ಲಿರುವ ತನ್ನ ಕಚೇರಿಗೆ ಒಂದು ದಿನವೂ ಬರದ ಅಂಬಿ ಅಮರಾವತಿ ಚಂದ್ರನ ಮನೆಯಲ್ಲೇ ಅಧಿಕಾರಿಗಳ ಸಭೆ ನಡೆಸುತ್ತಾರೆ. ಹಾಗಾಗಿ ಅಧಿಕಾರಿಗಳ ಪಾಲಿಗೆ ಅಂಬಿಗಿಂತ ಅಮರಾವತಿ ಚಂದ್ರನೇ ಡಿಫ್ಯಾಕ್ಟೋ ಮಿನಿಸ್ಟರ್ ಆಗಿ ಕಾಣುತ್ತಿದ್ದಾನೆ. ವರ್ಗಾವಣೆ ದಂಧೆ, ಕಾಮಗಾರಿಯಲ್ಲಿ ಬರುವ ಪರ್ಸೆಂಟೇಜ್ ಎಲ್ಲವೂ ತೀರ್ಮಾನವಾಗುವುದು ಅಮರಾವತಿ ಚಂದ್ರನ ಅಡ್ಡೆಯಲ್ಲೇ. ಮನೆಗೇ ಅಧಿಕಾರಿಗಳನ್ನು ಕರೆಸಿಕೊಳ್ಳುವ ಅಮರಾವತಿ ಚಂದ್ರನ ಕಾರುಬಾರು ಎಗ್ಗಿಲ್ಲದೆ ನಡೆಯುತ್ತಿದೆ. ಈತನಿಂದಾಗೇ ಅಂಬಿ ಹೆಸರು ಕೆಡುತ್ತಿದೆ ಅಂತ ಅಂಬಿ ಬೆಂಬಲಿಗರೇ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಆದರೆ ಅಂಬಿಗಿದು ಅರ್ಥವಾಗುತ್ತಿಲ್ಲ, ಅಮರಾವತಿ ಚಂದ್ರಶೇಖರ್ ತನ್ನ ರಿಯಲ್ ಎಸ್ಟೇಟ್ ದಂಧೆಗೆ ಮುಡಾ ಆಯುಕ್ತ ಕೆ. ಮಥಾಯ್ ಸಹಕಾರ ಕೊಡುತ್ತಿಲ್ಲವೆಂಬ ಒಂದೇ ಕಾರಣಕ್ಕೆ ಒಬ್ಬ ದಕ್ಷ ಅಧಿಕಾರಿಯನ್ನು ವರ್ಗಾವಣೆ ಮಾಡಲು ಅಂಬಿ ನಗರ ಅಭಿವೃದ್ಧಿ ಮಂತ್ರಿ ವಿನಯ್ ಕುಮಾರ್ ಸೊರಕೆಗೆ ತಮ್ಮ ಸ್ವಂತ ಲೆಟರ್ ಹೆಡ್‌ನಲ್ಲಿ ವರ್ಗಾಯಿಸಲು ಸೂಚಿಸುತ್ತಾರೆ. ಅಂಬಿ ಅವರ ಹೆಸರು ಕೆಡುವುದಕ್ಕೆ ಇದು ಒಂದು ಕಾರಣವಾಗಿದೆ.

ವರ್ಗಾವಣೆ ದಂಧೆಗಿಳಿದಿರುವ ಅಮರಾವತಿ ಚಂದ್ರ ಅಂಬಿಯ ಲೆಟರ್‌ಹೆಡ್ ಪಡೆದುಕೊಂಡು ವಿಧಾನಸೌಧದಲ್ಲಿ ವರ್ಗಾವಣೆಗೆ ಸಂಬಂಧಿಸಿದ ಮಂತ್ರಿಗಳ ಕಚೇರಿಯಲ್ಲಿ ಕೂತು ಯಾರಿಗೂ ಪಾಲು ಕೊಡದೆ ಸಾಕಷ್ಟು ಗೆಬರುತ್ತಿದ್ದಾನೆ. ಅಂಬಿ ಪಾಳಯದಲ್ಲೇ ಮುನಿಸು ಭುಗಿಲೇಳುತ್ತಿರುವುದಕ್ಕೆ ಇದೇ ಮುಖ್ಯ ಕಾರಣ. ಮಂಡ್ಯ ನಗರಸಭೆಯಲ್ಲಿ ಪೇಮೆಂಟ್ ಕೋಟಾದಡಿ ಬಂದಿರುವ ಅಂಬಿ ಶಿಷ್ಯ ಸಿದ್ದರಾಜು ಕೂಡ ನಗರದ ಅಭಿವೃದ್ಧಿ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಜಿಲ್ಲೆಯಲ್ಲಿ ಅಧಿಕಾರಿಗಳ ಭ್ರಷ್ಟಾಚಾರ ಮಿತಿಮೀರಿದೆ. ಇವೆಲ್ಲವನ್ನು ಕೇಳಬೇಕಾದ ಉಸ್ತುವಾರಿ ಸಚಿವರೇ ಉಸಾಬರಿಗೆ ಸಿದ್ಧವಿಲ್ಲ.

ಜಿಲ್ಲೆಯ ಅಭಿವೃದ್ಧಿ ಕುಂಠಿತವಾಗಿದ್ದರೂ ವಿರೋಧ ಪಕ್ಷವಾದ ಜೆಡಿಎಸ್ ನಾಯಕರು ಭರ್ಜರಿ ನಿದ್ದೆಯಲ್ಲಿದ್ದಾರೆ. ಜೆಡಿಎಸ್‌ನ 4 ಮಂದಿ ಶಾಸಕರು, ಒಬ್ಬ ಎಂಪಿ ಇದ್ದರೂ ಅಂಬಿ ಸೈಟು ಪ್ರಕರಣವನ್ನು ಪ್ರಶ್ನಿಸುವ ಗೋಜಿಗೇ ಅವರ್ಯಾರೂ ಹೋಗಿಲ್ಲ, ಏಕೆಂದರೆ ಜೆಡಿಎಸ್‌ನ ಶಾಸಕರಾದ ರಮೇಶ್‌ಬಾಬು ಬಂಡಿಸಿದ್ದೇಗೌಡ, ಚಲುವರಾಯಸ್ವಾಮಿ, ಹಾಲಿ ಸಂಸದ ಸಿ.ಎಸ್.ಪುಟ್ಟರಾಜು, ಮಾಜಿ ಶಾಸಕ ಎಂ.ಶ್ರೀನಿವಾಸ್ ಕೂಡ ಮುಡಾದಲ್ಲಿ ಅಕ್ರಮವಾಗಿ ನಿವೇಶನ ಪಡೆದಂತವರು. ಹಾಗಾಗಿ ಜೆಡಿಎಸ್ ನಾಯಕರ್‍ಯಾರು ಅಂಬಿಯ ವಿರುದ್ಧ ಚಕಾರ ಎತ್ತದೆ ಪಕ್ಷ ಸಂಘಟನೆ ನೆಪದಲ್ಲಿ ರಾಜ್ಯಸಭಾ ಸದಸ್ಯ ಕುಪೇಂದ್ರ ರೆಡ್ಡಿ ಕಾಸಿನಲ್ಲಿ ಶ್ರೀಲಂಕಾದ ಕೊಲಂಬೋದಲ್ಲಿ ಮೋಜು-ಮಸ್ತಿ ಮಾಡುತ್ತಿದ್ದಾರೆ. ಇಂತಹ ಜನಪ್ರತಿನಿಧಿಗಳಿದ್ದರೆ ಅಭಿವೃದ್ಧಿ ಹೇಗೆ ತಾನೆ ಆದೀತು?

# ಲಿಂಗವಂತರ ಹುಸಿ ಕ್ಯಾತೆ

ಚೆನ್ನಯ್ಯನ ಮನೆಯ ದಾಸನ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ.
ಸಂಗವ ಮಾಡಿದರು
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲಸಂಗಮದೇವ ಸಾಕ್ಷಿಯಾಗಿ...!

ಇದು ತನ್ನ ಜಾತಿಮದದ ವಿರುದ್ಧ ಕ್ರಾಂತಿಯೋಗಿ ಬಸವಣ್ಣನವರು ಮಾಡಿಕೊಂಡ ಆತ್ಮನಿವೇದನೆಯೂ ಹೌದು, ಆತ್ಮ ಶುದ್ಧೀಕರಣ ಕೂಡ. ಸಧ್ಯ ಸಿದ್ದರಾಮಯ್ಯ ಸರ್ಕಾರದಲ್ಲಿ ಲಿಂಗಾಯತರಿಗೆ ಅನ್ಯಾಯವಾಗುತ್ತಿದೆ, ಕಾಂಗ್ರೆಸ್ ಸರ್ಕಾರ ಲಿಂಗಾಯತರನ್ನು ಕಡೆಗಣಿಸುತ್ತಿದೆ ಕೇವಲ ಮುಸ್ಲಿಮರು, ಕೆಳಜಾತಿಗಳು ದಲಿತರನ್ನಷ್ಟೇ ಓಲೈಸುತ್ತಿರುವ ಸಿದ್ದು "ಅಹಿಂದ ನೀತಿಯಿಂದಾಗಿ ಲಿಂಗಾಯತರಿಗೆ ಉಳಿಗಾಲವಿಲ್ಲ ದಂತಾಗಿದೆ..." ಎಂದೆಲ್ಲ ಬೊಬ್ಬೆ ಹಾಕುತ್ತಿರುವ ಲಿಂಗವಂತರ ಹಿಂದೇ ಶಕ್ತಿಸೌಧದ ಹಿತ್ತಲಲ್ಲಿ ಜಮೆಗೊಂಡಿದೆ.

ವೀರಶೈವ ಮಹಾಸಭಾದ ರಾಷ್ಟ್ರೀಯ ಕಾರ್ಯದರ್ಶಿ ಜಯಲಿಂಗಪ್ಪ, ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಎಸ್. ವಾಗೀಶ್ ಪ್ರಸಾದ್, ಮಹಾಸಭಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಡಾ. ಚಂದ್ರಶೇಖರ್ ಸಾಂಬ್ರಾಣಿ; ಇತ್ಯಾದಿ ಶಾಮನೂರು, ಭೀಮಣ್ಣ ಖಂಡ್ರೆ ನೇತೃತ್ವದ ವೀರಶೈವ ಮಹಾಸಭಾದ ಪದಾಧಿಕಾರಿಗಳು. ಭೀಮಣ್ಣ ಖಂಡ್ರೆಯ ಮಗ ಹಾಲಿ ಕಾಂಗ್ರೆಸ್ ಶಾಸಕ ಈಶ್ವರ್ ಖಂಡ್ರೆಯೇ ಈ ವೀರಶೈವ ಮಹಾಸಭಾದ ರಾಜ್ಯ ಮಹಾ ಪ್ರಧಾನ ಕಾರ್ಯದರ್ಶಿ ಯಾದರೆ, ಸಿದ್ದು ಸಂಪುಟದ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಮಂತ್ರಿ ಶಾಮನೂರು ಶಿವಶಂಕರಪ್ಪನವರೇ ಸಧ್ಯ ವೀರಶೈವ ಮಹಾಸಭಾದ ಏಕಾಧಿಪತಿ ಮತ್ತು ರಾಷ್ಟ್ರೀಯ ಅಧ್ಯಕ್ಷರು!

ಮೊನ್ನೆ ನಡೆದ ರಾಜ್ಯಸಭೆಯ ಚುನಾವಣೆಯಲ್ಲಿ ಒಕ್ಕಲಿಗರ ಪ್ರತಿನಿಧಿಯಾಗಿ ರಾಜೀವ್ ಗೌಡ, ಜಾತಿಯಿಂದ ಈಡಿಗರಾದ ಬಿ.ಕೆ. ಹರಿಪ್ರಸಾದ್ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಆಯ್ಕೆಯಾದದ್ದು ನಿಜವಾದರೂ ಈ ಬಗ್ಗೆ ಲಿಂಗಾಯತ ರಾರಿಗೂ ತಕರಾರಿರಲಿಲ್ಲ, ಹಾಗೆಯೇ ವಿಧಾನ ಪರಿಷತ್ತಿಗೆ ಕಾಂಗ್ರೆಸ್ ಪಟ್ಟು ಹಿಡಿದು ಆಯ್ಕೆಯಾದ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್, ಕಾಂಗ್ರೆಸ್ ನಾಯಕ ಮತ್ತು ಜಾತಿಯಲ್ಲಿ ಕುರುಬರಾದ ಹೆಚ್.ಎಂ. ರೇವಣ್ಣ ಕ್ಷತ್ರಿಯ ಸಮೂಹದ ಬೋಸರಾಜು, ಗೊಲ್ಲರ ಸಮೂಹದ ಜಯಮ್ಮ ಬಾಲರಾಜ್ ಹೇಳಿಕೇಳಿ 'ಅಹಿಂದ' ಮೂಲದವರೆ. ಇಲ್ಲೂ ಲಿಂಗಾಯ ತರಿಗೆ ಅನ್ಯಾಯವಾಯಿತೆಂದು ಯಾರೂ ಬೊಬ್ಬೆ ಹಾಕಲಿಲ್ಲ, ಯಾವತ್ತು ಮೇಲ್ಮನೆಗೆ ನೇಮಕಾತಿ ಪಟ್ಟಿ ತಯಾರು ಮಾಡಿದ ಮುಖ್ಯಮಂತ್ರಿಗಳು ಅದನ್ನು ರಾಜ್ಯಪಾಲರ ಅನುಮೋದನೆಗೆಂದು ರವಾನಿಸಿದರೋ; ಆಗ ಶುರುವಾದದ್ದೇ ಈ ಲಿಂಗಾಯತ ದಮನದ ಹುಸಿ ಬೊಬ್ಬೆ.

## ಅಹಿಂದ ಪಟ್ಟಿ

ಮುಖ್ಯಮಂತ್ರಿಗಳ ಕಚೇರಿಯಿಂದ ರಾಜ್ಯಪಾಲರಿಗೆ ರವಾನೆಯಾದ ಹೆಸರುಗಳ ಪೈಕಿ ವಿ.ಎಸ್. ಉಗ್ರಪ್ಪ ಜಾತಿಯಿಂದ ಅತೀ ಹಿಂದುಳಿದ ವಾಲ್ಮೀಕಿ. ಕೇವಲ ರಾಜಕಾರಣಿಯಷ್ಟೇ ಅಲ್ಲ ಉಗ್ರಪ್ಪ ಹಿಂದುಳಿದ ವರ್ಗಗಳಿಗಾಗಿ ನಡೆಸಿದ ಹೋರಾಟ, ಗಣಿಲೂಟಿ ಮತ್ತು ಭ್ರಷ್ಟಾಚಾರದ ವಿರುದ್ಧ ನಡೆಸಿದ ಬೀದಿ ಚಳವಳಿಗಳದ್ದೇ ದೊಡ್ಡ ಪಟ್ಟಿಯಿದೆ. ಶೋಷಿತರ ದನಿಯಾಗಿಯೂ ಉಗ್ರಪ್ಪ ಮೇಲ್ಮನೆಗೆ ನೇಮಕಗೊಳ್ಳಬೇಕಾದವರೆ. ಜಯಮಾಲ ಜಾತಿಯಿಂದ ಈಡಿಗರಾದರೂ ಓರ್ವ ನಟಿಯಾಗಿ ಕನ್ನಡ ಜನಮಾನಸದಲ್ಲಿ ತನ್ನದೇ ಸ್ಥಾನ ಗಳಿಸಿರುವಾಕೆ. ಹಾಗೇ ಇಕ್ಬಾಲ್ ಅಹ್ಮದ್ ಸಾರಡಗಿ ಕೇವಲ ಮುಸ್ಲಿಂ ಎಂಬ ಕಾರಣಕ್ಕಷ್ಟೇ ಅಲ್ಲ, ಬಡ ಮುಸ್ಲಿಮರ ಶಿಕ್ಷಣ ಮತ್ತು ಏಳಿಗೆಗಾಗಿ ಶ್ರಮಿಸಿಕೊಂಡೇ ಬಂದವರು. ಅದೇ ರೀತಿ ದಾವಣಗೆರೆಯ ಅಬ್ದುಲ್ ಜಬ್ಬಾರ್ ಹೇಳಿಕೇಳಿ ಶಾಮನೂರರ ಮಾನಸ ಪುತ್ರ ಮತ್ತು ತನ್ನದೇ ಶಿಕ್ಷಣ ಸಾಮ್ರಾಜ್ಯ ಸ್ಥಾಪಿಸಿ ಮುಸ್ಲಿಮರ ಪರ ದನಿಯೆತ್ತುತ್ತಲೇ ಬಂದವರು.



ಉಳಿದಂತೆ ಕಾರ್ಮಿಕ ನಾಯಕ ಶಾಂತಕುಮಾರ್ ಜಾತಿಯಲ್ಲಿ ತಮಿಳು ಕ್ರಿಶ್ಚಿಯನ್ ಮತ್ತು ಆ ಕಾಲದಿಂದಲೂ ಕಾರ್ಮಿಕರ ಸಂಘಟನೆಯಲ್ಲಿ ಸಕ್ರಿಯವಾಗಿದ್ದವರು. ಎತ್ತಿಂದೆತ್ತ ನೋಡಿದರೂ ಮೇಲ್ಮನೆಗೆ ಸಾಂಸ್ಕೃತಿಕ ಮತ್ತು ಸಾಮಾಜಿಕ ವಲಯದಿಂದ ನೇಮಕಗೊಳ್ಳಬೇಕಾದ ಮಾನದಂಡಕ್ಕೆ ನೂರಕ್ಕೆ ನೂರಲ್ಲದೆ ಹೋದರೂ ಹೆಚ್ಚೂ ಕಮ್ಮಿ ಸರಿಹೊಂದು ವಂಥವರೆ. ವಿಕಟವೆಂದರೆ ಮಂತ್ರಿ ಶಾಮನೂರು ಧಣಿಯೇ ಸಿನಿಮಾ ನಟಿ ಭಾವನಾರನ್ನು ನೇಮಕ ಮಾಡುವಂತೆ ಮುಖ್ಯಮಂತ್ರಿಗಳಿಗೆ ಒತ್ತಡ ಹಾಕಿದ್ದೂ ಅಲ್ಲದೆ ಅವರ ಮಗ ಮಲ್ಲಿಕಾರ್ಜುನ್ ಕೂಡ ನಟಿ ಭಾವನಾಳನ್ನು ಎಮ್ಮೆಲ್ಸಿ ಮಾಡಹೊರಟಿದ್ದರು.

ಭಾವನಾ ಪ್ರಜ್ಞಾವಂತೆ ನಿಜ. ಸಾಮಾಜಿಕ ಕಳಕಳಿಯೂ ಇದೆಯೆಂಬುದೂ ಸತ್ಯವೆ. ಆದರೆ ಜಯಮಾಲಾರ ಸೀನಿಯಾರಿಟಿ ಮತ್ತು ವಯಸ್ಸಿಗೆ ಹೋಲಿಸಿದರೆ ಭಾವನಾ ಇನ್ನೂ ಚಿಕ್ಕವಳು, ವಯಸ್ಸಿದೆ, ಇವತ್ತಲ್ಲ ನಾಳೆ ಅವಕಾಶ ಇದ್ದೇ ಇದೆ.

## ರಾಣಿ ಸತೀಶ್, ಕೊಂಡಜ್ಜಿ

ಶಾಮನೂರು ಧಣಿಗಳಿಗಾದ ಮುಖಭಂಗಕ್ಕೆ ಕಾರಣವೇ ಇರಲಿಲ್ಲ, ಏಕೆಂದರೆ ಮುಸ್ಲಿಂ ಕೋಟಾದಡಿ ಮೇಲ್ಮನೆಯ ಪಟ್ಟಿಗೆ ಸೇರಿದ ಅಬ್ದುಲ್ ಜಬ್ಬಾರ್ ಅಕ್ಷರಶಃ ಶಾಮನೂರರ ಮನೆ ಮಗನೆ. ಹೆಸರಿಗಷ್ಟೇ ಜಬ್ಬಾರ್ ಮುಸ್ಲಿಂ ಕೋಟಾದಡಿ ಆಯ್ಕೆಯಾಗಿದ್ದರೂ ವಾಸ್ತವವಾಗಿ ಅದು ಲಿಂಗಾಯತರ ಲೆಕ್ಕಕ್ಕೇ ಸೇರಬೇಕಾದ ಪಾಲಾಗಿತ್ತು, ಅಷ್ಟಾಗ್ಯೂ ಶಾಮನೂರು ಪಾಳೆಯ ಲಿಂಗಾಯತ ದಮನಕಾಂಡದ ಬೊಬ್ಬೆ ಹಾಕಲು ಇದಕ್ಕಿಂತಲೂ ಮುಖ್ಯ ಮತ್ತು ಅನಿವಾರ್ಯ ಕಾರಣವೊಂದಿತ್ತು.

ಅದು ಹಿರಿಯ ಕಾಂಗ್ರೆಸ್ ನಾಯಕಿ ರಾಣಿ ಸತೀಶ್ ಮತ್ತು ಕೃಷ್ಣರ ಪರಮಾಪ್ತ ಮೋಹನ್ ಕೊಂಡಜ್ಜಿ!

ರಾಣಿ ಸತೀಶ್ ಲಿಂಗಾಯತ ಕೋಟಾದಡಿ ಒಂದೇ ಎರಡು ಬಾರಿ ಮಂತ್ರಿಯಾಗಿದ್ದವರು. ಜೇಷ್ಠತೆ ಮತ್ತು ಸೇವೆಯನ್ನೇ ಆಧಾರವಾಗಿಟ್ಟುಕೊಂಡರೆ ಮೋಹನ್ ಕೊಂಡಜ್ಜಿ

12ನೇ ಪುಟಕ್ಕೆ



## ಚಿಂತಕ ಮರುಳಸಿದ್ದಪ್ಪ ಬದಲಿಗೆ ದಾವಣಗೆರೆಯ ಜಬ್ಬಾರ್ ತಂದಿದ್ದು ಯಾರು?

ವಿಧಾನ ಪರಿಷತ್‌ಗೆ ಲಿಂಗಾಯತರ ನಾಮಕರಣದ ಪ್ರಶ್ನೆ ಬಂದಾಗಲೆಲ್ಲ ಮುಖ್ಯಮಂತ್ರಿ ಸಿದ್ದು ಪಟ್ಟು ಹಿಡಿದದ್ದು ಚಿಂತಕ ಕೆ. ಮರುಳಸಿದ್ದಪ್ಪನವರಿಗಾಗಿ. "ರಂಗಭೂಮಿ ಕಲಾವಿದೆ ಮತ್ತು ಗುಬ್ಬಿ ವೀರಣ್ಣನವರ ಪುತ್ರಿ ಬಿ. ಜಯಶ್ರೀ ಈಗಾಗಲೇ ರಾಜ್ಯಸಭಾ ಸದಸ್ಯೆಯಾಗಿದ್ದು ಮತ್ತೇಕೆ ಲಿಂಗಾಯತರಿಗೆ?" ಎಂದು ಅಪಸ್ವರವೆದ್ದಾಗಲೂ ಸಿದ್ದರಾಮಯ್ಯ ಪ್ರಗತಿಪರ ಚಿಂತಕ ಮರುಳಸಿದ್ದಪ್ಪನವರ ಪರವಾಗೇ ಹಠಕ್ಕೆ ಬಿದ್ದಿದ್ದರು. ಆದರೆ ಸೋಕಾಲ್ಡ್ ಲಿಂಗಾಯತರ ಕುಲಪುರೋಹಿತ ಶಾಮನೂರು ಪಟ್ಟು ಹಿಡಿದದ್ದು ತಮ್ಮ ದತ್ತು ಪುತ್ರ, ದಾವಣಗೆರೆ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಜಬ್ಬಾರ್‌ಗಾಗಿ!

ಈಗಾಗಲೇ ಇಕ್ಬಾಲ್ ಅಹ್ಮದ್ ಸಾರಡಗಿಗೆ ಅವಕಾಶ ಕಲ್ಪಿಸಿಯೂ ಮತ್ತೊಬ್ಬ ಮುಸ್ಲಿಂ ಅಭ್ಯರ್ಥಿಯನ್ನು ತಂದಲ್ಲಿ ಇತರೇ ಜಾತಿಗಳಿಗದು ತಪ್ಪು ಸಂದೇಶ ರವಾನಿಸುವ ಸಾಧ್ಯತೆ ಇದೆಯೆಂದು ಯಾರೆಷ್ಟೇ ದಬಾಯಿಸಿದರೂ ಶಾಮನೂರು ಜಬ್ಬಾರ್ ಪರ ಪಟ್ಟು ಸಡಿಲಿಸಲೇ ಇಲ್ಲ. ಇಬ್ಬರು ಮುಸ್ಲಿಂ ಆಗಿ ಲಿಂಗಾಯತರೊಬ್ಬರ ಅವಕಾಶ ತಪ್ಪಿದ್ದಕ್ಕೆ ಸಿದ್ದು ಕಾರಣವಾ ಅಥವಾ ಶಾಮನೂರರಾ?

# ಮಹಾಸಭಾ ಹೆಸರಿನ ಮೊಬೈಲ್ ಮೆಸೇಜ್ ಮತ್ತು ಮಣ್ಣು ಮುಕ್ಕಿದ ಕಾಂಗ್ರೆಸ್!

ಮೊನ್ನೆ ಮುಗಿದ ಲೋಕಸಭಾ ಚುನಾವಣೆಗೂ ವಾರದ ಮೊದಲೇ ರಾಜ್ಯದ ಪ್ರಮುಖ ಲಿಂಗಾಯತ ಅಧಿಕಾರಿಗಳು, ಗಣ್ಯರ ಮೊಬೈಲುಗಳಿಗೆ ವಿಲಕ್ಷಣ 'ಮೆಸೇಜ್' ಒಂದು ರವಾನೆಗೊಂಡಿತ್ತು, ಸಿದ್ದು ನೇತೃತ್ವದ ಕಾಂಗ್ರೆಸ್ ಸರ್ಕಾರ ಲಿಂಗಾಯತ ಜಾತಿಗೆ ಸೇರಿದ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ನಿಷ್ಪ್ರಯೋಜಕ ಹುದ್ದೆಗಳಲ್ಲಿ ಕೊಳೆ ಹಾಕಿ ಹಿಂಸಿಸುತ್ತಿದೆ ಎಂದೂ, ಕಾಂಗ್ರೆಸ್ ಆಳ್ವಿಕೆಯಲ್ಲಿ ಲಿಂಗಾಯತ ನೌಕರರು, ಅಧಿಕಾರಿಗಳಿಗೆ ನೆಮ್ಮದಿಯಿಲ್ಲದಂತಾಗಿದೆ ಎಂದೂ ಆದ್ದರಿಂದ ಪ್ರತಿಯೊಬ್ಬ ಲಿಂಗಾಯತ ನೌಕರನೂ ಬಿಜೆಪಿಗೇ ಓಟು ನೀಡುವ ಮೂಲಕ ಲಿಂಗಾಯತ ವಿರೋಧಿ ಸರ್ಕಾರಕ್ಕೆ ಪಾಠ ಕಲಿಸಬೇಕೆಂಬುದು ಈ 'ಮೆಸೇಜ್'ನ ತಿರುಳಾಗಿತ್ತು,

ವಿಶೇಷವೆಂದರೆ ಸದರಿ ಮೆಸೇಜ್ ವೀರಶೈವ ಮಹಾಸಭಾ ಹೆಸರಲ್ಲೇ ರವಾನೆಯಾಗಿತ್ತು, ಯಾವ್ಯಾವ ಲಿಂಗಾಯತ ಅಧಿಕಾರಿ- ನೌಕರರಿಗೆ ಈ ಥರದ ಮೆಸೇಜ್ ಬಂತೋ ಅವರೆಲ್ಲರಿಗೂ ಅದೇ ಮೆಸೇಜನ್ನು ತಮ್ಮದೇ ಜಾತಿಯ ಪರಿಚಿತ, ಸಂಬಂಧಿಕರೆಲ್ಲರಿಗೂ **forward** ಮಾಡಿದ್ದೇ ಮಾಡಿದ್ದು.

ಈ ಬಗ್ಗೆ ಸ್ಪಷ್ಟೀಕರಣ ನೀಡುವಂತೆ, ವೀರಶೈವ ಮಹಾಸಭಾವತಿಯಿಂದ ಇಂಥ ಸಂದೇಶ ರವಾನಿಸಿಲ್ಲ ಎಂದು ಹೇಳಿಕೆ ನೀಡುವಂತೆ ಕಾಂಗ್ರೆಸ್ಸಿನ ಅನೇಕರು ಶಾಮನೂರರನ್ನು ಒತ್ತಾಯಿಸಿದ್ದರು. ಜೆಡಿಎಸ್‌ನ ಕೆಲ ಕಾರ್ಯಕರ್ತರು ಕೂಡ ನೇರವಾಗಿ ಶಾಮನೂರು, ಖಂಡ್ರೆಗೆ ಫೋನಾಯಿಸಿ ಈ ಬಗ್ಗೆ ನಿಷ್ಕ್ರಿಯರಾಗಿರುವುದೇ ಆತ್ಮಘಾತುಕತನ ಎಂದು ರೇಗಾಡಿದ್ದರು. ವಿಪರ್ಯಾಸವೆಂದರೆ ತಾವೊಬ್ಬ ಕಾಂಗ್ರೆಸ್ ನಾಯಕರಾಗಿ ತಮ್ಮ ಪುತ್ರ ಮಲ್ಲಿಯನ್ನೇ ದಾವಣಗೆರೆಯಿಂದ ಲೋಕಸಭೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ನಿಲ್ಲಿಸಿಯೂ ಶಾಮನೂರು ಈ ಬಗ್ಗೆ ಸ್ಪಷ್ಟೀಕರಣ ನೀಡಲೇ ಇಲ್ಲ,




ಭೀಮಣ್ಣ ಖಂಡ್ರೆ



ಮಲ್ಲಿಕಾರ್ಜುನ

ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಶಾಮನೂರರ ಮೇಲೆ ಅಂಥಾದ್ದೊಂದು ಹೊಣೆಗಾರಿಕೆ ಇದ್ದೇ ಇತ್ತು, ತಾವಲ್ಲದಿದ್ದರೆ ಕನಿಷ್ಠ ಖಂಡ್ರೆ ಮೂಲಕ ಅಥವಾ ಮಹಾಸಭಾದ ಯಾವುದೇ ಪದಾಧಿಕಾರಿಯ ಮೂಲಕವಾದರೂ ತಮ್ಮದು 'ರಾಜಕೀಯೇತರ ಸಂಘಟನೆ' ಎಂದು ಹೇಳಿಕೆ ನೀಡಿಸಬಹುದಿತ್ತು, ಕಾಂಗ್ರೆಸ್ಸಿನಲ್ಲೇ ಇದ್ದ ಇತರೇ ಲಿಂಗಾಯತ ನಾಯಕರು ಕೂಡ ಈ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ, ಏನಾಗಬೇಕಾಯಿತೋ ಅದೇ ಆಯಿತು. ಖುದ್ದು ಶಾಮನೂರು ಪುತ್ರನೇ ಬಿಜೆಪಿ ವಿರುದ್ಧ ಮಣ್ಣು ಮುಕ್ಕಿದರೂ ಶಾಮನೂರರಿಗೆ ಅರ್ಥವಾಗಿಲ್ಲವೆಂದರೆ ಏನೆನ್ನಬೇಕು?

# ಕೆಪಿಸಿಸಿ ಗದ್ದುಗೆಗಾಗಿ ಒಕ್ಕಲಿಗ-ಲಿಂಗಾಯತ ಗುದುಮುರಿಗೆ!


ಪರಮೇಶ್ವರ್


ಸಿದ್ದರಾಮಯ್ಯ

ಲೋಕಸಭೆ ಚುನಾವಣೆಯ ಫಲಿತಾಂಶದ ಅಡ್ಡ ...ತ್ತ ನೇರ ಪರಿಣಾಮ ಒಂದೊಂದಾಗಿ ರಾಜ್ಯದ ...ಾರಾರೂಢ ಕಾಂಗ್ರೆಸ್‌ನ ಮೇಲಾಗುತ್ತಿದೆ. ಸಿಎಂ ಸಿದ್ದು ...ತ್ತ ಕೆಪಿಸಿಸಿ ಅಧ್ಯಕ್ಷ ಪರಮ್ ನಡುವಿನ ಶೀತಲಸಮರ ...ತೇಕ ಕ್ಲೈಮಾಕ್ಸ್ ತಲುಪಿದೆ. ಡೆಪ್ಯೂಟಿಯಾಗಿ ಸರ್ಕಾರದ ...ರೆ ಹಿಡಿತ ಸಾಧಿಸಲು ದಡಬಡಾಯಿಸುತ್ತಿರುವ ಪರಮ್ ...ರಾಳಿ ಸಿದ್ದುಗೆ ಎಲ್ಲೆಲ್ಲಿ ಬತ್ತಿ ಇಡಬಹುದೆಂದು ಸಮಯ ...ಸುತ್ತಿದ್ದಾರೆ. ಇಂದಲ್ಲ ನಾಳೆಯಾದರೂ ತನಗೆ ಕಂಟಕ ...ವ ಭಾವಿಸಿದ್ದ ಹಿರಿಯ ದಲಿತ ನಾಯಕ ಮಲ್ಲಿಕಾರ್ಜುನ ... ದಿಲ್ಲಿಯಲ್ಲಿ ಕಾಂಗ್ರೆಸ್ 'ಪಾಂಡವರ' ಮುಂದಾಳಾಗು...ತ್ತಯೇ ನಿಟ್ಟುಸಿರು ಬಿಟ್ಟಿದ್ದ ಸಿದ್ದುಗೆ ಪರಮ್ ಮಾತ್ರ ...ರಿಯಾಗಿ ಪೀಡಿಸುತ್ತಲೇ ಇದ್ದಾರೆ.

...ಹೆಜ್ಜೆ-ಹೆಜ್ಜೆಗೆ ತೊಡರುಗಾಲಾಗುವ ಪರಮ್‌ಗೆ ...ಸಭೆಗೆ ಕಳಿಸಲು ಸಿದ್ದು ಹಾಕಿದ್ದ ಸ್ಕೆಚ್ ...ಲವಾಗಿದೆ. ರಾಜ್ಯ ಕಾಂಗ್ರೆಸ್ ಉಸ್ತುವಾರಿ ...ಜಯಸಿಂಗ್ ಕೃಪಾಶೀರ್ವಾದದಿಂದ ಪರಮ್ ... ಸಾಧಿಸಿ ವಿಧಾನ ಪರಿಷತ್ ಪ್ರವೇಶಿಸಿದ್ದಾರೆ. ... ಮುಖ್ಯಮಂತ್ರಿಯಾಗುವ ಒಂದೇ ...ಯಲ್ಲಿರುವ ಪರಮ್ ಕೊಡುಕೊಳ್ಳುವ ಚೌಕಾಸಿ ...ಗಾರಿಕೆಗೆ ಇಳಿದಿದ್ದಾರೆ. ತಾನು ಡಿಸಿಎಂ ...ಬೇಕೆಂದರೆ ಸಿಎಂ ತನ್ನ ಹಿಂಬಾಲಕರಿಗೆ ...ಕಟ್ಟಿನ ಸ್ಥಾನದಲ್ಲಿ ಕೂರಿಸುವಾಗ ತೊಂದರೆ ...ತಬಾರದೆಂಬ ನಿರ್ಧಾರಕ್ಕಾತ ಬಂದಿದ್ದಾರೆ. ...ಾಗಿ ಸಿಎಂ ನಿಷ್ಠ ಸಿ.ಎಸ್. ನಾಡಗೌಡ ಉರುಫ್ ...ಜಿ ನಾಡಗೌಡ, ಸಿ.ಎಂ. ಇಬ್ರಾಹಿಂ, ಎಚ್.ಎಂ. ...ಣ್ಣ ಮುಂತಾದವರು ಸಾಲಾಗಿ ಮಹತ್ವದ ...ಕ್ಕೇರುತ್ತಿದ್ದಾರೆ. ಎಸ್‌ಎಸ್‌ಎಲ್‌ಸಿಯೂ ನೆಟ್ಟಗೆ ...ಾಗದ ಇಬ್ರಾಹಿಂ ಸಾಹೇಬರಿಗೆ ತೂಕದ ...ಜನಾ ಆಯೋಗದ ಉಪಾಧ್ಯಕ್ಷ ಸ್ಥಾನ ...ತಕೂಡದೆಂದು ಬೊಬ್ಬೆ ಹಾಕಿಸಿದ್ದೇ ಪರಮ್ ...ಸ್ತಿ. ಹೀಗೆ ತೆರೆಮರೆಯಲ್ಲಿ ನಿಂತು ಸಿಎಂ ...ರನ್ನು ಸತಾಯಿಸಿದರೆ ತನ್ನ ಡಿಸಿಎಂ ಪಟ್ಟ ...ಾಣ ನಿರಾಯಾಸ ಎಂಬುದು ಆತನ ಲೆಕ್ಕಾಚಾರ ...ಸ್ತಿ. ಆದರದು ಉಲ್ಟಾ ಹೊಡೆದಾಗ ವರಸೆ ...ಲಿಸಿ ಡಿಫೆನ್ಸ್ ಆಟ ಆಡುತ್ತಿದ್ದಾರೆ.


ಈಗದು ಬಹುತೇಕ ವರ್ಕ್‌ಔಟ್ ಆದಂತಿದೆ. ...ಗೆ ಸಂಪುಟದಲ್ಲಿ ಜಾಗ ಕೊಡಲು ಒಪ್ಪಿರುವ ... ತನ್ನ ಪರಮಾಪ್ತ ಸಿ.ಎಂ. ಇಬ್ರಾಹಿಂನನ್ನು ...ಜನಾ ಆಯೋಗದ ಉಪಾಧ್ಯಕ್ಷ ಸ್ಥಾನಕ್ಕೆ ...ದ್ದಾರೆ. ಹಾಗೆಯೇ ವೀರಶೈವ ಕುಲದ ತನ್ನ ...ಲಿಗ ಅಪ್ಪಾಜಿ ನಾಡಗೌಡರಿಗೆ ರಾಜ್ಯ ಸರ್ಕಾರದ ...ರಾಯಭಾರಿಯಾಗಿ ದೀಕ್ಷೆ ನೀಡಿದ್ದಾರೆ. ಸ್ವಜಾತಿ ...ಸಿ ರೇವಣ್ಣಗೆ ವಿಧಾನ ಪರಿಷತ್ ಮೆಂಬರಿಕೆ ...ವಳಿಯಾಗಿ ಕೊಟ್ಟಿದ್ದಾರೆ. ಕೆಲ ತಿಂಗಳ ಹಿಂದೆ ...ಹಿಂನನ್ನು ದಿಲ್ಲಿ ಪ್ರತಿನಿಧಿ ಮಾಡಲು ಮುಂದಾದಾಗ ...ಟಿಸಿದ್ದ ಪರಮ್ ಈಗ ಇದ್ಯಾವುದಕ್ಕೂ ತಕರಾರು ...ಿ. ವಿಧಾನ ಪರಿಷತ್ ಸದಸ್ಯತ್ವ ಪಡೆಯಲು ಪರಮ್‌ಗೆ ...ಾಜಿ ಅನಿವಾರ್ಯವಾಗಿತ್ತು.

...ಹಾಗಂತ ಪರಮ್‌ಗೆ ಡಿಸಿಎಂ ಸ್ಥಾನ-ಮಾನ ಕೊಡಲು ... ಸುತಾರಾಮ್ ಸಿದ್ಧರಿಲ್ಲ. ಬೇಕಿದ್ದರೆ ಕ್ಯಾಬಿನೆಟ್ ...ರ್ ಮಾತ್ರ ಮಾಡ್ತೇನೆಂಬುದು ಆತನ ಖಂಡತುಂಡ ...ು. ಡಿಸಿಎಂ ಆಗುವ ಮುಹೂರ್ತಕ್ಕಾಗಿ ಪರಮ್ ...ಸುತ್ತಿದ್ದರೆ ಇದಕ್ಕೆ ಸಮಾನಾಂತರವಾಗಿ ಆತ ಖಾಲಿ ...ವ ಕೆಪಿಸಿಸಿ ಗದ್ದುಗೆಯಲ್ಲಿ ಯಾರನ್ನು ಕೂರಿಸಬೇಕೆಂದು ... ಸಿದ್ದುಗಷ್ಟೇ ಅಲ್ಲ, ಹೈಕಮಾಂಡ್‌ಗೂ ಶುರುವಾಗಿದೆ. ... ಕೂಡ ತನ್ನ ನಿಷ್ಠನೇ ಕೆಪಿಸಿಸಿ ಕಿಂಗ್ ಆಗಲೆಂಬ ...ಆಸೆಯಿಂದ ದಾಳ ಉರುಳಿಸುತ್ತಿದ್ದಾರೆ. ಪ್ರಬಲ ...ಯತ ಮತ್ತು ಒಕ್ಕಲಿಗ ಸಮುದಾಯದ ಸರದಾರರು ...ಾರಿ ಸೆಟೆದು ನಿಂತಿದ್ದಾರೆ. ಬಹಳ ವರ್ಷದಿಂದ

ತಮ್ಮನ್ನು ಕೆಪಿಸಿಸಿ ಗದ್ದುಗೆಯಿಂದ ವಂಚಿಸಲಾಗುತ್ತಿದೆ ಎಂಬ ಕೊರಗು ಈ ಬಲಿಷ್ಠರದು. ಈ ಬಾರಿಯಾದರೂ ಚಾನ್ಸ್ ಹೊಡೆಯಲೇಬೇಕೆಂದು ಬೆಂಗಳೂರು -ದಿಲ್ಲಿ ಒಂದು ಮಾಡಿ ತಿಪ್ಪರಲಾಗ ಹಾಕುತ್ತಿದ್ದಾರೆ. ಮತ್ತೊಂದೆಡೆ ದಲಿತರಿಗೆ ಅಥವಾ ಮುಸ್ಲಿಮರಿಗೇಕೆ ಪೀಠ ಕೊಡಬಾರದೆಂಬ ಜಿಜ್ಞಾಸೆಯೂ ಶುರು ಹತ್ತಿಕೊಂಡಿದೆ.

ಪಕ್ಷಕ್ಕೆ ಹಿತವಾಗಬಲ್ಲವರ ಒಂದು ಲಿಸ್ಟ್ ತಯಾರಿಸಿರುವ ಹೈಕಮಾಂಡ್ ಇದರಲ್ಲಿ ಯಾರಿಗೆ ಕಿರೀಟ ಕಟ್ಟಿದರೆ ಪ್ರಯೋಜನ ಹೆಚ್ಚಾಗಬಹುದೆಂಬ ಲೆಕ್ಕ ತೆಗೆಯುತ್ತಿದೆ. ಜಾತಿ ಅನುಕೂಲತೆ, ಮಾತುಗಾರಿಕೆ, ಸರ್ಕಾರಕ್ಕೆ ಮುಜುಗರ ಮಾಡದ ಸಾತ್ವಿಕತೆ, ಪ್ರತಿಪಕ್ಷಗಳನ್ನು ಎದುರಿಸುವ ಎದೆಗಾರಿಕೆ, ಮೆರಿಟ್ ಪರಿಗಣಿಸಿ ಈ ಪಟ್ಟಿ ಮಾಡಲಾಗಿದೆ. ಇದರಲ್ಲಿ ಒಕ್ಕಲಿಗ ಕುಲತಿಲಕರಾದ ಮಾಜಿ ಸಂಸದ ಬಿ.ಎಲ್. ಶಂಕರ್, ಮಂತ್ರಿ ಕೃಷ್ಣ ಭೈರೇಗೌಡ, ಲಿಂಗಾಯತ ಮಂತ್ರಿ ಶಾಮನೂರರ ಮಗ ಎಸ್.ಎಸ್. ಮಲ್ಲಿಕಾರ್ಜುನ, ಶಾಸಕ ಸಿ.ಎಸ್. ನಾಡಗೌಡ, ದಲಿತ ವರ್ಗದ ಮಂತ್ರಿ ಆಂಜನೇಯ ಮತ್ತು ಮುಸ್ಲಿಮ್ ಖಾನ್‌ದಾನ್‌ನ ಸಿ.ಎಂ. ಇಬ್ರಾಹಿಂ ಹಾಗು ಎಮ್ಮೆಲ್ಸಿ ನಿಸಾರ್ ಅಹ್ಮದ್ ಇದ್ದಾರೆ.


ಶಾಮನೂರು ಶಿವಶಂಕರಪ್ಪ


ಸಿ.ಎಂ. ಇಬ್ರಾಹಿಂ


ಸಿ.ಎಸ್. ನಾಡಗೌಡ


ಕೃಷ್ಣ ಭೈರೇಗೌಡ


ಬಿ.ಎಲ್. ಶಂಕರ್


ಎಸ್.ಎಸ್.ಮಲ್ಲಿಕಾರ್ಜುನ್

ಇಬ್ರಾಹಿಂ ಮತ್ತು ನಾಡಗೌಡ ಈಗ ಕೆಪಿಸಿಸಿ ಕಿಂಗ್ ರೇಸ್‌ನಿಂದ ನಿವೃತ್ತಿಯಾಗಿದ್ದಾರೆ. ಏಕೆಂದರೆ ಇವರಿಬ್ಬರಿಗೂ ಒಂದೊಂದು ಗೂಟದ ಕಾರು ಕೊಟ್ಟು ಪುನರ್ವಸತಿ ಕಲ್ಪಿಸಲಾಗಿದೆ. ದಲಿತ ವರ್ಗದ ಆಂಜನೇಯಗೆ ಮಂತ್ರಿಗಿರಿ ಭಾಗ್ಯ ಬಿಡುವ ಮನಸ್ಸಿಲ್ಲ. ನಿಸಾರ್‌ಗೆ ಕೆಪಿಸಿಸಿ ಅಧ್ಯಕ್ಷತೆಯಲ್ಲಿ ಕೂರುವ 'ಸಾರ' ಇಲ್ಲವೆಂದು ಬಗೆಯಲಾಗಿದೆ. ಮಂತ್ರಿ ಕೃಷ್ಣ ಭೈರೇಗೌಡರಿನ್ನೂ ಜೂನಿಯರ್ ಎಂಬ ಆಕ್ಷೇಪ ಎದ್ದಿದೆ. ಹೀಗಾಗಿ ಅಂತಿಮ ಹಣಾಹಣಿ ಒಕ್ಕಲಿಗರ ಶಂಕರ್ ಮತ್ತು ಲಿಂಗಾಯತರ ಮಲ್ಲಿಕಾರ್ಜುನ್ ನಡುವೆ ನಡೆಯುತ್ತಿದೆ. ಒಂದಂತೂ ನಿಕ್ಕಿಯಾಗಿದೆ. ಈ ಬಾರಿ ಒಕ್ಕಲಿಗ ಅಥವಾ ಲಿಂಗಾಯತರಿಗೆ ಕೆಪಿಸಿಸಿ ನಾಯಕತ್ವ ವಹಿಸಲು ಸಿಎಂ ಸಿದ್ದು, ಪರಮ್ ಮತ್ತು ಹೈಕಮಾಂಡ್ ನಿರ್ಧರಿಸಿದ್ದಾರೆ.

ಒಂದು ಹಂತದಲ್ಲಿ ತನ್ನ ನಂಬಿಗಸ್ಥ ಅಪ್ಪಾಜಿ ನಾಡಗೌಡರಿಗೆ ಪಟ್ಟ ಕಟ್ಟಲು ಸಿದ್ದು ಹೈಕಮಾಂಡ್ ಮಟ್ಟದಲ್ಲಿ ಬಿರುಸಿನ ಕಟಿಪಿಟಿ ನಡೆಸಿದ್ದರು. ಇದು ಪರಮ್‌ಗೆ ಸಹ್ಯವಾಗಲಿಲ್ಲ. ಆಗ ಕಷ್ಟ-ಸುಖದ ಗೆಣೆಗಾರ ಇಬ್ರಾಹಿಂ ಪರ ಲಾಬಿ ಮಾಡಿದ್ದರು. ಆಕ್ರಮಣಕಾರಿ ಸ್ಟೈಲಿನ, ಬಿಜೆಪಿ ಹುನ್ನಾರಗಳನ್ನು ಅಷ್ಟೇ ಬಿರುಸಾಗಿ ಕೌಂಟರ್ ಮಾಡಬಲ್ಲ ಇಬ್ರಾಹಿಂ ಅರ್ಹ ಕ್ಯಾಂಡಿಡೇಟೆಂಬುದು ಸಿದ್ದು ವಾದವಾಗಿತ್ತು. ಇದಕ್ಕೆ ಆತ ಜನತಾ ಪರಿವಾರದ ಹೊಸ ವಲಸಿಗ, ಅಸೆಂಬ್ಲಿ ಚುನಾವಣೆಯಲ್ಲಿ ಹೀನಾಯವಾಗಿ ಸೋತವ ಎಂಬ ಆಕ್ಷೇಪ ವ್ಯಕ್ತವಾಯ್ತು. ದಿಲ್ಲಿ ಪ್ರತಿನಿಧಿಯಾಗಿ ಇಬ್ರಾಹಿಂರ ನೇಮಿಸಲು ಮುಂದಾದಾಗ ಯಾರ್‍ಯಾರು ತಿರುಗಿಬಿದ್ದಿದ್ದರೋ ಅವರೆಲ್ಲರೂ ಸಿದ್ದುಗೆ ಸೆಡ್ಡು ಹೊಡೆದು ನಿಂತುಬಿಟ್ಟರು.

ಇದು ಹಳೆಕತೆಯಾದರೆ ಹೊಸ ಹಿಕಮತ್ತು ಕುತೂಹಲಕರವಾಗಿದೆ. ಈಗ ಎರಡನೇ ಸುತ್ತಿನ ಕುಸ್ತಿ-ಮಸ್ತಿ ಸಿದ್ದು-ಪರಮ್ ಬಣದ ಮಧ್ಯೆ ನಡೆದಿದೆ. ಕೆಪಿಸಿಸಿ ಅಧ್ಯಕ್ಷತೆಗೆ ಒಕ್ಕಲಿಗರ ಲಾಬಿ ಬಿ.ಎಲ್. ಶಂಕರ್ ಹೆಸರು ಮುಂದೆ ಮಾಡಿದೆ. ಇದಕ್ಕೆ ಹಿರಿಯ ಒಕ್ಕಲಿಗರ ಮುಂದಾಳು ಎಸ್.ಎಂ. ಕೃಷ್ಣರ ಬೆಂಬಲವಿದೆ. ಇದು ಪರಮ್ ಗ್ಯಾಂಗಿನ ಕಣ್ಣು ಕೆಂಪಾಗಿಸಿದೆ. ಕೃಷಿ ಮಂತ್ರಿ ರಾಹುಲ್ ಬ್ರಿಗೇಡ್‌ನ ಕೃಷ್ಣ ಭೈರೇಗೌಡರನ್ನು ಅಖಾಡಕ್ಕೆ ಇಳಿಸಿ ಸಿದ್ದುಗೆ ಟಾಂಗ್ ಕೊಡಲು ಪರಮ್ ಪಟಾಲಮ್ ಅಣಿಯಾಗಿದೆ. ನಾಲ್ಕು ತಿಂಗಳ ಹಿಂದೆಯೇ ರಾಜಸ್ಥಾನದ ಕಾಂಗ್ರೆಸ್ ನೇತೃತ್ವ ರಾಹುಲ್ ಪಡೆಯ ಸಚಿನ್ ಪೈಲೆಟ್‌ಗೆ ಕೊಟ್ಟಾಗಲೇ ಕೃಷ್ಣ ಭೈರೇಗೌಡರನ್ನು ಕೆಪಿಸಿಸಿಗೆ ತರಲಾಗುತ್ತದೆಂಬ ಸುದ್ದಿ ಎದ್ದಿತ್ತು. ಆದರೆ ಗೌಡರಿಗೆ ಮಂತ್ರಿಗಿರಿಯಂಥ ತೂಕದ ಸ್ಥಾನ ಬಿಟ್ಟು ಪಾರ್ಟಿ ಪ್ರೆಸಿಡೆಂಟ್‌ನಂಥ ರಿಸ್ಕಿಗಿರಿಗೆ ಹೋಗಿ ಸಮಸ್ಯೆಗೆ ಸಿಲುಕುವ ಮನಸ್ಸಿಲ್ಲ!

ಲಿಂಗಾಯತರು ಕೆಪಿಸಿಸಿ ಅಧ್ಯಕ್ಷ ಪೀಠದ ಮೇಲೆ ಕಣ್ಣಿಟ್ಟು ಮಾಡುತ್ತಿರುವ ಕಸರತ್ತು ಇಂದು ನಿನ್ನೆಯದಲ್ಲ. ಕೆಪಿಸಿಸಿ ಯಜಮಾನಿಕೆ ಲಿಂಗಾಯತರ ಮುಖಂಡನ ಕೈಗೊಪ್ಪಿಸಿದರೆ ಬಿಜೆಪಿಗಿರುವ ಆ ಸಮುದಾಯದ ಹೋಲ್‌ಸೇಲ್ ಬೆಂಬಲಕ್ಕೆ ಬ್ರೇಕ್ ಹಾಕಬಹುದೆಂಬ ತರ್ಕ ಜೋರಾಗಿದೆ; ಕಾಂಗ್ರೆಸ್ ವೀರಶೈವರ ಕಡೆಗಣಿಸುತ್ತಿದೆ. ಎಂಬ ಬ್ಲ್ಯಾಕ್‌ಮೇಲ್ ಬೊಬ್ಬೆಗೂ ಕಾವು ಬಂದಿದೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ಬಿಜೆಪಿಯ ಲಿಂಗಾಯತ ನಾಯಕರನ್ನು ಎದುರಿಸುವ ಸಾಮರ್ಥ್ಯದ ಆ ವರ್ಗದ ನೇತಾರ ಕಾಂಗ್ರೆಸ್‌ನಲ್ಲಿ ಯಾರೂ ಇಲ್ಲ. ಅಷ್ಟೇ ಅಲ್ಲ, ಕೆಪಿಸಿಸಿ ಲೀಡರಿಕೆ ನಿಭಾಯಿಸುವ ಕ್ಯಾಲಿಬರ್‌ನವರೂ ಇದ್ದಂತಿಲ್ಲ.

ಆದರೂ ತೋಟಗಾರಿಕಾ ಮಂತ್ರಿ ಶಾಮನೂರು ಶಿವಶಂಕರಪ್ಪ ತಮ್ಮ ಪುತ್ರ ಮಲ್ಲಿಕಾರ್ಜುನ್‌ಗಾಗಿ ಶತಾಯಗತಾಯ ಸಾಹಸ ಮಾಡುತ್ತಿದ್ದಾರೆ. ಬಿಜೆಪಿ ಅಧಿಕಾರದಲ್ಲಿದ್ದಾಗಲೇ ಕೆಪಿಸಿಸಿ ದೊರೆಯಾಗುವ ಕನಸು ಕಂಡಿದ್ದ ಶಾಮನೂರು ತನ್ನ ಮಗನಿಗಾದರೂ ಆ ಯೋಗ ಬರಲೆಂದು ಬಯಸಿದ್ದಾರೆ. ಆದರೆ ಮಲ್ಲಿಕಾರ್ಜುನ್‌ಗೆ ಕೆಪಿಸಿಸಿ ಭಾರ ಹೊರುವ ಶಕ್ತಿಯಿಲ್ಲವೆಂಬುದು ಅವರ ವಿರೋಧಿಗಳ ಅಭಿಪ್ರಾಯ.

ಅಷ್ಟೂ ನಮೂನೆಯ ಚೆಕ್-ಕ್ರಾಸ್ ಚೆಕ್ ಮಾಡಿ ನೋಡಿರುವ ಎಐಸಿಸಿ-ಕೆಪಿಸಿಸಿ ಮಾಂಡಲೀಕರಿಗೆ ಒಕ್ಕಲಿಗ ಬಿ.ಎಲ್. ಶಂಕರ್ ಸದ್ಯದ ಪರಿಸ್ಥಿತಿಯಲ್ಲಿ ಸಮರ್ಥರಾಗಿ ಕಂಡಿದ್ದಾರೆ! ಎಸ್ಸೆಂಕೆಗೆ ಮತ್ತೊಂದು ಅವಕಾಶ ನಿರಾಕರಿಸಿ ರಾಜೀವ್ ಗೌಡರನ್ನು ರಾಜ್ಯಸಭೆಗೆ ಆಯ್ಕೆ ಮಾಡಿರುವ 'ರಾಜಕಾರಣ' ಶಂಕರ್ ಪರವಾಗೇ ಅಖಾಡ ಹದಗೊಳಿಸಿದೆ. ಶಂಕರ್ ಎಸ್ಸೆಂಕೆ ಶಿಷ್ಯ, ದೂರದ ಸಂಬಂಧಿ. ಕೃಷ್ಣರ ನಂಬಿಗಸ್ಥನೂ ಹೌದು. ಇಂಥ ಶಂಕರ್‌ರನ್ನು ಕೆಪಿಸಿಸಿ ಪೀಠದಲ್ಲಿ ಪ್ರತಿಷ್ಠಾಪಿಸಿದರೆ ಬೇಸರದಲ್ಲಿರುವ ಎಸ್ಸೆಂಕೆಯನ್ನು ಸಂಪ್ರೀತಗೊಳಿಸಬಹುದೆಂಬುದು ಕಾಂಗ್ರೆಸ್‌ನ ದೊಡ್ಡವರ ಲೆಕ್ಕಾಚಾರ. ಸಿಎಂ ಸಿದ್ದು ಜತೆಗೂ ಸೌಹಾರ್ದ ಸಂಬಂಧ ಹೊಂದಿರುವ ಶಂಕರ್ ತನ್ನ ಚಾಲಾಕಿತನ-ಮಾತುಗಾರಿಕೆಯಿಂದ ಅಧ್ಯಕ್ಷ ಪದವಿ ಪರಿಣಾಮಕಾರಿಯಾಗಿ ನಿರ್ವಹಿಸಬಲ್ಲರೆಂದು ಬಹುತೇಕ ಕಾಂಗ್ರೆಸಿಗರು ಹೇಳುತ್ತಾರೆ.

ಈಗಂತೂ ಯುದ್ಧ (ಎಲೆಕ್ಷನ್)ದ ಕಾಲವೇನಲ್ಲ. ಪೀಸ್ ಟೈಮ್ ಕ್ಯಾಪ್ಟನ್‌ಶಿಪ್‌ಗೆ ಶಂಕರ್ ಸಾಕು. ಸರ್ಕಾರ ಮತ್ತು ಪಕ್ಷ ಒಟ್ಟಿಗೆ ಕರೆದೊಯ್ಯುವ ಸಂಯಮ ಆತನಲ್ಲಿದೆ. ಸಮಯೋಚಿತ ದಾಳಿಯಿಂದ ಕೇಂದ್ರದ ಎನ್‌ಡಿಎ ಸರ್ಕಾರ, ಸ್ಥಳೀಯ ಬಿಜೆಪಿ ಸೋಗಲಾಡಿಗಳ ನ್ಯೂನತೆ ಜನರ ಮನಮುಟ್ಟುವಂತೆ ಶಂಕರ್ ವಿಷಯ ಮಂಡಿಸಬಲ್ಲರು. ಜೆಡಿಎಸ್‌ನ ಒಕ್ಕಲಿಗ ತಳಹದಿಗೂ ಶಂಕರ್ ಮಾರಕ. ಏನಿಲ್ಲದಿದ್ದರೂ ಸರ್ಕಾರದ ಸಾಧನೆ ಸರಿಯಾಗಿ ಪ್ರತಿಬಿಂಬಿಸಿ ತನಗೆ ನೆರವಾಗುತ್ತಾರೆಂಬುದು ಸಿಎಂ ಸಿದ್ದು ನಂಬಿಕೆ. ಉಳಿದವರಿಗೆ ಆತನ 'ನಾಜೂಕಯ್ಯತನ' ಇಷ್ಟ.

ಹಾಗಂತ ಶಂಕರ್ ಸಿದ್ದು ಕ್ಯಾಂಡಿಡೇಟೇನೂ ಅಲ್ಲ. ಕಾಂಗ್ರೆಸ್‌ನ ಒಳಸುಳಿಗಳಲ್ಲಿ ಸುತ್ತಿ ಸುಳಿದು ತಂತಾನೆ ಮುಂಚೂಣಿಗೆ ಬಂದಿರುವ ಶಂಕರ್ ತನ್ನೊಂದಿಗೆ ಕಾಲು ಕೆರೆದು ಜಗಳಕ್ಕೆ ನಿಲ್ಲುವ ಪೈಕಿಯೇನಲ್ಲ ಎಂಬುದೇ ಸಿಎಂಗೆ ಸಮಾಧಾನ. ತನ್ನ ವಲಸೆ ಟೀಮಿನ ಅನುಯಾಯಿಗಳಿಗೆ ಒಳ್ಳೊಳ್ಳೆ ಅಧಿಕಾರ ಕೊಡಿಸುತ್ತ ಸಿದ್ದು ಮೂಲ ನಿವಾಸಿಗಳಿಗೆ ಮಗ್ಗಲು ಮುಳ್ಳಾಗಿದ್ದಾರೆಂಬ ಆಕ್ರೋಶ ಮಡುಗಟ್ಟುತ್ತಿರುವ ಈ 'ಗಂಡ ಕಾಲ'ದಲ್ಲಿ ಶಂಕರ್‌ಗೆ ವಿರೋಧ ವ್ಯಕ್ತಪಡಿಸದೇ ಸಿಎಂ ಆತ್ಮ ರಕ್ಷಣಾತ್ಮಕ ಹೆಜ್ಜೆ ಹಾಕುತ್ತಿದ್ದಾರೆ. ಒಟ್ಟಿನಲ್ಲಿ ಪರಮ್ ಸಚಿವ ಸಂಪುಟ ಪ್ರವೇಶ ಮತ್ತು ಶಂಕರ್ ಪಟ್ಟಾಭಿಷೇಕ ಜತೆಜತೆಗೇ ಆಗುವ ಸೂಚನೆ ಗೋಚರಿಸುತ್ತಿದೆ!

● ದುರ್ಯೋಧನ

# ಸೈಟು ಮೋಹ

9ನೇ ಪುಟದಿಂದ

ದೊಡ್ಡ ಅಪರಾ-ತಪರಾವೇ ಹೌದು. ಸರಿಯಾದ ತನಿಖೆ ನಡೆದರೆ ಅಂದಿನ ಮುಡಾ ಆಯುಕ್ತ ಹಾಗೂ ಅಂಬಿ ಜೈಲಿನಲ್ಲಿ ಜಂಟಿ ಖಾತೆ ತೆರೆಯಬೇಕಾಗುತ್ತದೆ.

ಅಷ್ಟಾದರೂ ಅಂಬಿಗೆ ಸೈಟಿನ ದಾಹ ಹಿಂಗಲಿಲ್ಲ. ನಂತರ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ಕ್ಕೆ ಅರ್ಜಿ ಸಲ್ಲಿಸಿದ ಅಂಬಿ 3ನೇ ಸೈಟಿಗೆ ಹೊಂಚು ಹಾಕಿದ್ದರು. ಆ ಅರ್ಜಿಯಲ್ಲಿ 'ನನ್ನ ವಾರ್ಷಿಕ ಆದಾಯ ಕೇವಲ 80 ಸಾವಿರ ಮಾತ್ರ' ಎಂದು ತೋರಿಸಿದ ಅಂಬಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಕೊಟ್ಟಿದ್ದ ನಿಬಂಧನೆಗಳ ಪತ್ರದಲ್ಲಿ 'ತಾವು ಯಾವುದೇ ಮಂಡಳಿ, ಸಂಘದಿಂದ ನಮ್ಮ ರಾಜ್ಯದ ಅಥವಾ ದೇಶದ ಯಾವುದೇ ಭಾಗದಲ್ಲಿ ಮನೆ, ನಿವೇಶನ ಪಡೆದಿರುವಿರಾ?' ಎಂಬ ಕಾಲಂನಲ್ಲಿ 'ಇಲ್ಲ' ಎಂದು ನಮೂದಿಸಿದ್ದರು.

'ಕಲೆ, ವಿಜ್ಞಾನ, ಕ್ರೀಡೆ ಇನ್ನಾವುದೇ ಕ್ಷೇತ್ರದಲ್ಲಿ ಪ್ರಶಸ್ತಿ ಪಡೆದಿರುವಿರಾ?' ಎನ್ನುವ ಮತ್ತೊಂದು ಕಾಲಮ್‌ಗೂ 'ಇಲ್ಲ' ಲೇಬಲ್ ಅಂಟಿಸಿರುವ ಅಂಬಿ 'ನಾನು ನೀಡಿರುವ ಮಾಹಿತಿಗಳೆಲ್ಲವೂ ನನಗೆ ತಿಳಿದ ಮಟ್ಟಿಗೆ ಸತ್ಯವೆಂದೂ, ಯಾವುದನ್ನು ಮುಚ್ಚಿಟ್ಟಿಲ್ಲವೆಂದು' ಘಂಟಾಘೋಷವಾಗಿ ಪ್ರಮಾಣೀಕರಿಸಿದ್ದರು. ಒಂದುವೇಳೆ ಮೇಲೆ ತಿಳಿಸಿದ ಮಾಹಿತಿ ಸುಳ್ಳು, ದೋಷಪೂರಿತ ಎಂದು ಕಂಡು ಬಂದರೆ ಸೈಟು ಹಂಚಿಕೆಗಾಗಿ ಸಲ್ಲಿಸಿರುವ ನನ್ನ ಅರ್ಜಿಯನ್ನು ರದ್ದುಪಡಿಸಿ ನಿಯಮಾನುಸಾರ ತೆಗೆದುಕೊಳ್ಳುವ ಕ್ರಮಕ್ಕೆ ಬದ್ಧನಾಗಿರುತ್ತೇನೆಂದು ಅಂಬಿ ಸಹಿ ಮಾಡಿ 8.01.1999ರಂದು ಮುಡಾಗೆ ಅರ್ಜಿ ಸಲ್ಲಿಸಿದ್ದರು.


ಹತ್ತಾರು ಕೋಟಿಗೂ ಮಿಗಿಲಾಗಿ ಆಸ್ತಿ-ಪಾಸ್ತಿ ಹೊಂದಿದ್ದ ಅಂಬಿ ಯಃಕಶ್ಚಿತ್ ಒಂದು ಸೈಟಿಗಾಗಿ ವಾರ್ಷಿಕ ಆದಾಯ 80 ಸಾವಿರ ಎಂದು ನಮೂದಿಸಿ ಅರ್ಜಿ ಸಲ್ಲಿಸುತ್ತಾರೆಂದರೆ ಅವರ ಕರ್ಣನ ಗುಣ ಇನ್ನೆಂಥದ್ದಿರಬೇಡ?

## ಖರೀದಿಸಿದ 18 ದಿನಕ್ಕೇ ಮಾರಾಟ

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅಂಬಿ ಸೈಟಿಗಾಗಿ ಅರ್ಜಿ ಸಲ್ಲಿಸಿದ್ದೇ ಮಹಾಪ್ರಸಾದವೆಂಬಂತೆ ಅಂದಿನ ಮುಡಾ ಅಧಿಕಾರಿಗಳು 6.3.99ರಲ್ಲಿ ಮಂಡ್ಯ ಕೆರೆ ಅಂಗಳದ ಸರ್ವೆ ನಂ. 507ರ ವಿವೇಕಾನಂದ ಬಡಾವಣೆಯಲ್ಲಿ 50x80 ಅಳತೆಯ 917ನೇ ನಂಬರಿನ ನಿವೇಶನವನ್ನು ಅಂಬಿಗೆ ದಯಪಾಲಿಸಿದ್ದರು. ಈ ಸೈಟಿನ ಕ್ರಯ ಮಾಡಿಸಿಕೊಳ್ಳುವಲ್ಲೂ ಅಂಬಿ ನಿಯಮಗಳನ್ನೆಲ್ಲ ಧಿಕ್ಕರಿಸಿದ್ದರು. 30 ದಿನ ಅಥವಾ ಬಡ್ಡಿ ಸಮೇತ 60 ದಿನಗಳ ಗಡುವನ್ನೂ ಮೀರಿ 1999 ರಿಂದ 2003ವರೆಗೆ ಸುಮಾರು 4 ಕಂತುಗಳಲ್ಲಿ 3 ಲಕ್ಷ ರೂ. ಕಟ್ಟಿದ್ದರು.. ಕ್ರಯಪತ್ರ ಮಾಡಿಸಿಕೊಂಡದ್ದು ಅದಾದ 2 ವರ್ಷಗಳ ತರುವಾಯ 6.1.2004ರಲ್ಲಿ. ಮುಡಾ ನಿಯಮಾವಳಿ ಪ್ರಕಾರ ಸೈಟು ಪಡೆದ 10 ವರ್ಷಗಳವರೆಗೆ ಅದನ್ನು ಯಾರಿಗೂ ಮಾರುವಂತಿಲ್ಲ. ಆದರೆ ಮುಡಾದಿಂದ ಖರೀದಿ ಮಾಡಿದ 18 ದಿನಕ್ಕೇ 50x80 ಅಳತೆಯ ಸೈಟನ್ನು 25x40 ಎರಡು ಭಾಗವಾಗಿ ಮಾಡಿ ಒಂದನ್ನು ಮೈಸೂರಿನ ಕೆ.ಗೋವಿಂದರಾಜು ಮತ್ತವನ 5 ಮಂದಿ ಸಹೋದರರ ಹೆಸರಿಗೆ 1.75 ಲಕ್ಷ ರೂ.ಗಳಿಗೆ ಮಾರಿಕೊಂಡಿದ್ದರು. ಉಳಿದ ಮತ್ತರ್ಧ ಸೈಟನ್ನು ತನ್ನ ಶಿಷ್ಯ ಇಂಡವಾಳು ಸಚ್ಚಿದಾನಂದನ ತಮ್ಮ ಅಜಿತ್ ಎಂಬುವನಿಗೆ 5.8.2011ರಲ್ಲಿ ಕೇವಲ 3 ಲಕ್ಷ ಚಿಲ್ಲರೆ ಮೊತ್ತಕ್ಕೆ ಮಾರಿದ್ದರು. ಅಸಲಿಗೆ ಮುಡಾ ನಿಯಮದ ಪ್ರಕಾರ ಒಂದು ಸೈಟನ್ನು 2 ಭಾಗವಾಗಿ ಮಾಡುವಂತಿಲ್ಲ. ಆದರೆ ಪಾಳೇಗಾರ ಅಂಬಿಗೆ ಮುಡಾ ನಿಯಮಗಳೆಲ್ಲ ಯಾವ ಲೆಕ್ಕ? ಎಲ್ಲವನ್ನೂ ಮುರಿದು ಅಗ್ಗದ ದರಕ್ಕೆ ಪಡೆದ ಸೈಟನ್ನು 2 ಭಾಗವಾಗಿ ಮಾಡಿ ಮಾರಿಕೊಂಡಿದ್ದರು.

## ಉಡಾಫೆ ಉತ್ತರ

ವಸತಿ ಸಚಿವ ಅಂಬರೀಶ್ ಸುಳ್ಳು ಹೇಳಿ, ಕಾನೂನು ಉಲ್ಲಂಘಿಸಿ ಮಂಡ್ಯ, ಮೈಸೂರು, ಬೆಂಗಳೂರಿನಲ್ಲಿ ಮಾಡಿಕೊಂಡ ಕೋಟ್ಯಾಂತರ ಮೌಲ್ಯದ ಸೈಟುಗಳ ಬಗ್ಗೆ



ವಿಚಾರಿಸಿದಾಗ ಬಂದ ಪ್ರತ್ಯುತ್ತರ ಆಘಾತಕಾರಿಯಾದದ್ದು. ತಾನೊಬ್ಬ ಜವಾಬ್ದಾರಿಯುತ ಸಚಿವ ಎನ್ನುವುದನ್ನೂ ಮರೆತು 'ನಾನು ಸಿನಿಮಾ, ಕ್ರೀಡೆ ಅಂತೆಲ್ಲಾ ಇನ್ನೂ ಮೂರು ಸೈಟು ಪಡೆಯಬಹುದು' ಎಂಬುದಾಗಿ ತಮ್ಮ ಬೆನ್ನು ತಟ್ಟಿಕೊಂಡಿದ್ದಾರೆ. ಮತ್ತೊಂದು ಸಂದರ್ಭದಲ್ಲಿ ಪತ್ರಕರ್ತರು ಈ ವಿಷಯ ಕೆದಕಿದಾಗ 'ನಾನೇನು ಐನೂರು ಎಕರೆ ಮಾಡಿಕೊಂಡಿದ್ದೇನಾ?' ಎಂಬ ಉಡಾಫೆಯ ಉತ್ತರ ಬಿಸಾಕಿದ್ದಾರೆ. ತಾನು ಪಡೆದ ಸೈಟನ್ನು ಉಚಿತವಾಗಿ ನೀಡಿದ್ದೇನೆ ಅಂತ ಅಂಬಿ ಸಮರ್ಥಿಸಿಕೊಳ್ಳಲು ಯತ್ನಿಸಿದರೂ ಮಂಡ್ಯದ ಆರ್‌ಟಿಐ ಕಾರ್ಯಕರ್ತ ಕಲ್ಲಹಳ್ಳಿ ರವೀಂದ್ರ ಬಹಿರಂಗಪಡಿಸುವ ದಾಖಲೆಪತ್ರಗಳು ಹಣ ಪಡೆದು ಬಿಕರಿ ಮಾಡಿರೋದನ್ನು ಸಾಬೀತುಪಡಿಸುತ್ತಿವೆ.

ರಾಜ್ಯದ ವಸತಿ ಸಚಿವನಾಗಿ ಸೂರಿಲ್ಲದವರಿಗೆ ಸೂರು ನೀಡಬೇಕಾದ ಕರ್ತವ್ಯ ಹೊಂದಿರುವ ಅಂಬಿಗೆ ಈ ರೀತಿ ಉಡಾಫೆ ಉತ್ತರ ನೀಡಬಾರದೆನ್ನುವ ಕನಿಷ್ಠ ಕಾಮನ್‌ಸೆನ್ಸೂ ಇದ್ದಂತಿಲ್ಲ. ಸುಳ್ಳು ಹೇಳಿ ಒಂದು ಸೈಟು ಹೊಡೆದರೂ ಅಕ್ರಮವೇ, 3 ಸೈಟು ಹೊಡೆದರೂ ಅಕ್ರಮವೇ ಎನ್ನುವುದು ತಿಳಿಯದ ಇಂತಹ ಅಜ್ಞಾನಿ ವಸತಿ ಸಚಿವರ ಬಳಿ ಸೂರಿಲ್ಲದವರಿಗೆ ಸೂರು ಕೊಡಿಸಿ ಎನ್ನುವುದು, ಕೋಣದ ಮುಂದೆ ಕಿಂದರಿ ಬಾರಿಸುವುದು ಒಂದೇ ಎಂಬುದು ಜನರ ಅಭಿಪ್ರಾಯವಾಗಿದೆ.

ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರೂ, ವಸತಿ ಸಚಿವರೂ ಆದ ಅಂಬರೀಷ್ ಮೇಲೆ ಜಿಲ್ಲೆಯ ಜನ ಅಪಾರ ನಿರೀಕ್ಷೆ ಇಟ್ಟಿದ್ದರು. ಗೆದ್ದು ವಸತಿ ಸಚಿವರಾಗಿ ಜಿಲ್ಲೆಯ ಅಭಿವೃದ್ಧಿಗೆ ಮುಂದಾಗದ ಅಂಬರೀಶ್ ಉಡಾಫೆತನ, ಸೋಮಾರಿತನ ಹಾಗೂ ಅಭಿವೃದ್ಧಿ ಹೀನತನ ಕಂಡು ಬೇಸರದಿಂದ ಬೈಯುವಂತಾಗಿದೆ.

● ನಾಗೇಶ್

# ಲಿಂಗವಂತರ ಹುಸಿ ಕ್ಯಾತೆ

10ನೇ ಪುಟದಿಂದ

ಯಾವುದೋ ಕಾಲಕ್ಕೆ ಎಮ್ಮೆಲ್ಸಿಯಾಗಬೇಕಿತ್ತು. ಕನಿಷ್ಠ ನಿಗಮ ಮಂಡಳಿಯ ಅಧ್ಯಕ್ಷ ಸ್ಥಾನವಾದರೂ ದಕ್ಕಬೇಕಿತ್ತು. ಕಾಂಗ್ರೆಸ್ ವಲಯದಲ್ಲಿ ಮಹಿಳಾ ರಾಜಕಾರಣ ಮತ್ತು ಲಿಂಗಾಯತ ವರ್ಗದ ಮಟ್ಟಿಗೆ ರಾಣಿ ಸತೀಶ್ ಹೆಸರೇ ಮುಂಚೂಣಿಯಲ್ಲಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಹಾಲೀ ಮೇಲ್ಮನೆ ನೇಮಕಾತಿಗೆ ಅರ್ಜಿ ಹಾಕಿದ್ದ ಇವರಿಬ್ಬರ ಒತ್ತಡಕ್ಕೊಂದು ನ್ಯಾಯಸಮ್ಮತ ಸಮರ್ಥನೆಯಂತೂ ಇದ್ದೇ ಇದೆ.

ಆದರೆ ರಾಜಕೀಯ ಪಕ್ಷವೊಂದಕ್ಕೆ ಸ್ಥಾನಮಾನದ ವಿಷಯದಲ್ಲಿ ಲಾಭ ನಷ್ಟದ ಲೆಕ್ಕಾಚಾರವೇ ಮುಖ್ಯವಾಗುತ್ತದೆ. ವ್ಯಕ್ತಿ ಎಷ್ಟೇ ದೊಡ್ಡವನಾದರೂ ಆತನಿಂದ ರಾಜಕೀಯವಾಗಿ ಏನು ಪ್ರಯೋಜನವಾಗುತ್ತದೆ ಎಂಬುದಷ್ಟೇ ಪಕ್ಷಕ್ಕೆ ಆದ್ಯತೆಯಾಗುತ್ತದೆ. ರಾಣಿ ಸತೀಶ್ ಈಗಾಗಲೇ ಲಿಂಗಾಯತ ಕೋಟಾದಡಿ ಮಂತ್ರಿಗಿರಿ, ಎಮ್ಮೆಲ್ಸಿಗಿರಿ ಎಲ್ಲವನ್ನೂ ಅನುಭವಿಸಿ ಇನ್ನೇನು ನಿವೃತ್ತಿಯ ಅಂಚಿನಲ್ಲಿರುವವರು. ಮಹಿಳಾ ಕಾಂಗ್ರೆಸ್ ಅಧ್ಯಕ್ಷೆಯಾಗಿಯಾಗಲಿ, ಜಾತಿಯಲ್ಲಿ ಲಿಂಗಾಯತರಾದ್ದರಿಂದ ವಿಶೇಷವಾಗಿ ವೀರಶೈವ ಸಂಘಟನೆಯಲ್ಲಾಗಲಿ ತೊಡಗಿಸಿಕೊಳ್ಳಲೇ ಇಲ್ಲ.

ಹೀಗಾಗಿ ಜಾತಿಕೋಟಾದಲ್ಲಿ ಮೇಲ್ಮನೆ ನೇಮಕಾತಿಗೆ ಲಾಬಿ ಶುರು ಹಚ್ಚಿಕೊಂಡ ರಾಣಿ ಸತೀಶ್ ಕಾಂಗ್ರೆಸ್ ಕಣ್ಣಿಗೆ ಪ್ರಯೋಜನಕ್ಕೆ ಬಾರದ ಚಲಾವಣೆಯಲ್ಲಿಲ್ಲದ ನಾಣ್ಯ ಹೊರತು ಲಾಭದಾಯಕವಾಗಿರಲಿಲ್ಲ. ಏಕೆಂದರೆ ಲಿಂಗಾಯತ ಓಟ್‌ಬ್ಯಾಂಕ್ ಬಿಜೆಪಿಯ ಕೈವಶವಾಗಿ ಯಾವುದೋ ಕಾಲವಾಗಿತ್ತು. ಕಳೆದ ನಾಲ್ಕೈದು ಚುನಾವಣೆಗಳಿಂದ ರಾಜ್ಯದ ಲಿಂಗಾಯತ ಸಮೂಹ ವಿಶೇಷವಾಗಿ ಬೆಂಬಲಿಸಿದ್ದು ಬಿಜೆಪಿಯನ್ನೇ ಹೊರತು ಕಾಂಗ್ರೆಸ್ ಅಥವಾ ಜೆಡಿಎಸ್ ಅಲ್ಲ. ಇಂಥಾ ಸ್ಥಿತಿಯಲ್ಲಿ ಕಾಂಗ್ರೆಸ್ ಕೈಹಿಡಿದದ್ದು ಮುಸ್ಲಿಂ, ದಲಿತ, ಹಿಂದುಳಿದ ವರ್ಗಗಳ ಮತದಾರರೇ ಹೊರತು ಮೇಲ್ಜಾತಿಯವರಲ್ಲ.

## ಮೊದಲ ಮಣೆ ಲಿಂಗಾಯತರಿಗೇ

ಈ ಎಲ್ಲಾ ಲೆಕ್ಕ ಹಾಕಿಯೇ ಅಹಿಂದ ರಾಜಕಾರಣಕ್ಕಿಳಿದ ಸಿದ್ದರಾಮಯ್ಯ ಥೇಟು ದೇವರಾಜ ಅರಸರ ಶೈಲಿಯದ್ದೇ ಜಾತಿ ಸಮೀಕರಣಕ್ಕೆ ಕೈಯಿಟ್ಟ ಫಲವೇ ಉಗ್ರಪ್ಪ ಜಯಮ್ಮ ಬಾಲರಾಜ್ ಥರದ ಶೋಷಿತ ವರ್ಗದ ನಾಯಕರಿಗೆ ಅವಕಾಶ ಸಿಕ್ಕಿದ್ದು. ಅಷ್ಟಾಗ್ಯೂ ಬಿಜೆಪಿಗೆ ಹೋಲಿಸಿದರೆ ಕಾಂಗ್ರೆಸ್ ವೀರಶೈವ ಸಮೂಹಕ್ಕೆ ಅದರಿಂದಾದ ಲಾಭಕ್ಕಿಂತಲೂ ಅಧಿಕ ಮಟ್ಟದ ಅನುಕೂಲ ಕಲ್ಪಿಸಿತ್ತು. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿದ 44 ಮಂದಿ ಲಿಂಗಾಯತರ ಪೈಕಿ 29 ಮಂದಿ ಗೆದ್ದು ಶಾಸಕರಾಗಿದ್ದೇ ಕಾಂಗ್ರೆಸ್ ಲಿಂಗಾಯತರಿಗೆ ಎಂಥಾ ಮಣೆ ಹಾಕಿತ್ತೆಂಬುದಕ್ಕೆ ಸಾಕ್ಷಿಯಂತಿತ್ತು.

44 ಮಂದಿ ಒಕ್ಕಲಿಗರಿಗೆ ಟಿಕೆಟ್ ನೀಡಿ 19 ಮಂದಿಯನ್ನು ಗೆಲ್ಲಿಸಿಕೊಂಡ ಕಾಂಗ್ರೆಸ್ ರಾಜ್ಯದ ಮೂರನೇ ಜಾತಿಯಾದ ಕುರುಬ ಸಮೂಹಕ್ಕೆಂದು ನೀಡಿದ್ದು ಕೇವಲ 16 ಟಿಕೆಟ್ಟು ಮಾತ್ರ. ಆ ಪೈಕಿ 11 ಮಂದಿ ಗೆದ್ದರು. ನಾಲ್ವರು ಮರಾಠಾ ಅಭ್ಯರ್ಥಿಗಳ ಪೈಕಿ ಇಬ್ಬರು ಗೆದ್ದದ್ದು, ಎಂಟು ಮಂದಿ ಈಡಿಗ ಅಭ್ಯರ್ಥಿಗಳಲ್ಲಿ ಐವರು ಆಯ್ಕೆಯಾಗಿದ್ದು, 19 ಮಂದಿ ಮುಸ್ಲಿಂ ಅಭ್ಯರ್ಥಿಗಳಲ್ಲಿ 9 ಮಂದಿ ಗೆದ್ದಿದ್ದು, ಎರಡಕ್ಕೆ ಎರಡೂ ಕ್ರಿಶ್ಚಿಯನ್ ಅಭ್ಯರ್ಥಿಗಳು ಗೆದ್ದು ಬಂದದ್ದು ಕಾಂಗ್ರೆಸ್‌ನ ಸರ್ವಜಾತಿ ಪ್ರಿಯತೆಗೆ ಸಾಕ್ಷಿಯಾಗಿತ್ತು.

ಅಷ್ಟೇ ಏಕೆ, ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿ ಕಣಕ್ಕಿಳಿದಿದ್ದ ಏಳು ಬ್ರಾಹ್ಮಣರಲ್ಲಿ ಐವರು ಗೆದ್ದಿದ್ದೇ ಅಚ್ಚರಿ ಮೂಡಿಸಿತ್ತು. ಟಿಕೆಟ್ ಗಿಟ್ಟಿಸಿದ್ದ ಮೂವರು ಜೈನರಲ್ಲಿ ಇಬ್ಬರು ನಿರಾಯಾಸವಾಗಿ ಗೆದ್ದಾಗಿತ್ತು. ರಾಜ್ಯದ 36 ಮಂದಿ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳ ಪೈಕಿ ಕಾಂಗ್ರೆಸ್ 17 ಮಂದಿಯನ್ನು ಗೆಲ್ಲಿಸಿಕೊಂಡಿದ್ದು, 17 ಮಂದಿ ಪರಿಶಿಷ್ಟ ಬುಡಕಟ್ಟಿನ ಅಭ್ಯರ್ಥಿಗಳಲ್ಲಿ 11 ಮಂದಿ ಗೆದ್ದಿದ್ದು ಕಾಂಗ್ರೆಸ್ಸಿನ 'ಅಹಿಂದ' ರಾಜಕಾರಣಕ್ಕೆ ಹಿಡಿದ ಕನ್ನಡಿಯಂತಿತ್ತು.

ಇದರರ್ಥ ದಲಿತ, ಮುಸ್ಲಿಂ, ಹಿಂದುಳಿದ ವರ್ಗಗಳಷ್ಟೇ ಅಲ್ಲದೆ ಬ್ರಾಹ್ಮಣ, ಜೈನ, ಲಿಂಗಾಯತರಿಗೂ ಕಾಂಗ್ರೆಸ್ ತನ್ನ ಶಕ್ತ್ಯಾನುಸಾರ ನ್ಯಾಯ ಕಲ್ಪಿಸಿತ್ತು. ಮುಸ್ಲಿಂ ಮತ್ತು ಒಕ್ಕಲಿಗರಲ್ಲಿ ತಲಾ 19 ಮಂದಿ ಗೆದ್ದಿದ್ದಕ್ಕಿಂತಲೂ 29 ಮಂದಿ ಲಿಂಗಾಯತರನ್ನು ಗೆಲ್ಲಿಸಿಕೊಂಡ ಕಾಂಗ್ರೆಸ್ ಲಿಂಗಾಯತರ ಪಾಲಿಗೆ ಬೇರೆಲ್ಲ ಜಾತಿಗಳಿಗಿಂತಲೂ ದೊಡ್ಡ ಪ್ರಾಶಸ್ತ್ಯವನ್ನೇ ನೀಡಿತ್ತು. ಹಾಗೆ ನೋಡಿದರೆ ರಾಜ್ಯದ ಲಿಂಗಾಯತರ ಒಟ್ಟು ಮತಗಳ ಪೈಕಿ ಶೇ. 95ರಷ್ಟು ಲಿಂಗಾಯತ ಮತಗಳು ಬಿದ್ದಿದ್ದು ಬಿಜೆಪಿಗೇ ಹೊರತು ಕಾಂಗ್ರೆಸ್ಸಿಗಲ್ಲ. ಬಿಜೆಪಿ ಹೇಳಿಕೇಳಿ ಲಿಂಗಾಯತರ ಪಕ್ಷವೆಂದೇ ಚಾಲ್ತಿಗೆ ಬಂದ ಮೇಲೆ ಕಳೆದ ಲೋಕಸಭಾ ಚುನಾವಣೆಯಲ್ಲೂ ಮೀಸಲು ಕ್ಷೇತ್ರಗಳ ಹೊರತಾಗಿ ಲಿಂಗಾಯತ ಅಭ್ಯರ್ಥಿಗಳಿಗೆ ಹೆಚ್ಚು ಟಿಕೆಟ್ಟು ವಿತರಿಸಿತ್ತು.

## ಷಡ್ಯಂತ್ರದ ಹಿಂದೆ

ಹಾಗಿದ್ದೂ ಕಾಂಗ್ರೆಸ್ ಲಿಂಗಾಯತರ ಸಂಖ್ಯೆಗನುಗುಣವಾಗಿಯೇ ಸ್ಥಾನಮಾನಗಳನ್ನು ನೀಡಿತ್ತಲ್ಲವೆ? ಶಾಮನೂರು, ಎಂ.ಬಿ. ಪಾಟೀಲ್, ಹುಕ್ಕೇರಿ, ಎಸ್.ಆರ್. ಪಾಟೀಲ್, ಹೆಚ್.ಕೆ. ಪಾಟೀಲ್, ಮಹದೇವ ಪ್ರಸಾದ್ ಹೀಗೆ ಆರು ಮಂದಿ ಲಿಂಗಾಯತರನ್ನು ಮಂತ್ರಿ ಮಾಡಿದರೂ, ಅಪ್ಪಾಜಿ ನಾಡಗೌಡರಂಥ ಯುವ ಲಿಂಗವಂತ ನಾಯಕನಿಗೆ ಕರ್ನಾಟಕದ ದೆಹಲಿ ಪ್ರತಿನಿಧಿ ಸ್ಥಾನಮಾನ ಕೊಟ್ಟದ್ದೂ ಅಲ್ಲದೆ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಪರ್ಯಾಯವಾದ ರಾಜ್ಯ ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷ ಸ್ಥಾನ ಕೊಟ್ಟ ನಂತರವೂ ಕಾಂಗ್ರೆಸ್ ಲಿಂಗಾಯತರನ್ನು ಕಡೆಗಣಿಸುತ್ತಿದೆ, ಲಿಂಗಾಯತರಿಗೆ ಅನ್ಯಾಯವೆಸಗಿದೆ ಎಂದು ಆರೋಪಿಸುವ ವೀರಶೈವ ಮಹಾಸಭಾದ ನಾಯಕರಿಗೆ ಯಾರು ತಾನೇ ವಿವೇಕ ಹೇಳಲು ಸಾಧ್ಯ?

ಅಷ್ಟಕ್ಕೂ 'ಲಿಂಗಾಯತರಿಗೆ ಅನ್ಯಾಯ' ಎಂದು ಬೊಬ್ಬೆ ಹಾಕಿದ ವೀರಶೈವ ಮಹಾಸಭಾದ ಪದಾಧಿಕಾರಿಗಳೆಲ್ಲ ಶಾಮನೂರು ಬೆಂಬಲಿಗರೆ. ಕೊಂಡಜ್ಜಿ ಮೋಹನ್ ಮತ್ತು ರಾಣಿ ಸತೀಶ್ ತಮ್ಮನ್ನು ಮೇಲ್ಮನೆಗೆ ಆಯ್ಕೆ ಮಾಡಲಿಲ್ಲ ಎಂಬ ಸಿಟ್ಟಿಗೆ ಬಿದ್ದು ವೀರಶೈವ ಮಹಾಸಭಾದ ಪದಾಧಿಕಾರಿಗಳನ್ನು ಛೂ ಬಿಟ್ಟಿದ್ದಕ್ಕೂ ಕಾರಣವಿದೆ. ಅವರನ್ನು ಎಮ್ಮೆಲ್ಸಿಗಳಾಗಿಸಿದ ತಕ್ಷಣ ಲಿಂಗಾಯತರೆಲ್ಲ ಮುಗಿಬಿದ್ದು ಕಾಂಗ್ರೆಸ್ಸಿಗೆ ಓಟು ಹಾಕುತ್ತಾರೆಂಬ ಭ್ರಮೆ ಕೂಡ ಯಾರಿಗೂ ಇಲ್ಲ. ಹಾಗಿದ್ದೂ ಈಗ ಅನ್ಯಾಯದ ಬೊಬ್ಬೆ ಹೊಡೆದರೆ ಮುಂದೆ ನಿಗಮ ಮಂಡಳಿಗಳ ನೇಮಕಾತಿಯಲ್ಲಾದರೂ ತಮ್ಮನ್ನು ಪರಿಗಣಿಸಬಹುದೆಂಬ ಕ್ಷೀಣ ಆಸೆ.

ಲಾಬಿ ಎಂದ್ಮೇಲೆ ಇವೆಲ್ಲ ಇದ್ದಿದ್ದೇ ನಿಜ. ಹಾಗಂತ ವೀರಶೈವ ಮಹಾಸಭಾ ಮಕ್ಕಳ ಸಂಘಟನೆಯೇನಲ್ಲ. ಅದಕ್ಕೊಂದು ಜವಾಬ್ದಾರಿಯಿದೆ. ಭೀಮಣ್ಣ ಖಂಡ್ರೆ, ಶಾಮನೂರು, ಶಿವರಾಜ್ ಪಾಟೀಲ್, ಹೆಚ್.ಕೆ. ಪಾಟೀಲ್ ಇವರ‍್ಯಾರೂ ಗೋಲಿ ಆಡುವ ಹುಡುಗರಲ್ಲ. ಕನಿಷ್ಠ ಶಾಮನೂರು ಶಿವಶಂಕರಪ್ಪ ಆದರೂ ಮಹಾಸಭಾದ ಓರ್ವ ಜವಾಬ್ದಾರಿಯುತ ಅಧ್ಯಕ್ಷರಾಗಿ ತನ್ನದೇ ಅಧೀನ ಪದಾಧಿಕಾರಿಗಳು ಮಾಡುವ ಆರೋಪವನ್ನು ಖಂಡಿಸಬಹುದಿತ್ತು. ಬೇಡ; ಕಾಂಗ್ರೆಸ್‌ನಿಂದ ಲಿಂಗಾಯತರಿಗೆ ಆ ಮಟ್ಟದ ಅನ್ಯಾಯವಾಗಿಲ್ಲ ಎಂದಾದರೂ ಹೇಳಿಕೆ ನೀಡಬಹುದಿತ್ತು. ತನ್ನದೇ ಸಂಘಟನೆಯ ಪದಾಧಿಕಾರಿಗಳನ್ನು ಈ ರೀತಿ ಬೇಜವಾಬ್ದಾರಿಗೆ ಕೈಹಾಕದಂತೆ ತಡೆಯಬಹುದಿತ್ತು.

ಒಂದೆಡೆ ವೀರಶೈವ ಮಹಾಸಭಾದ ರಾಷ್ಟ್ರೀಯ ಪದಾಧಿಕಾರಿಗಳು ಲಿಂಗಾಯತರಿಗೆ ಅನ್ಯಾಯವೆಂದು ಹೇಳಿಕೆ, ಟೀವಿ ಶೋಗಳಲ್ಲಿ ಮುಳುಗಿದ್ದರೆ ಶಾಮನೂರು ಈ ಬಗ್ಗೆ ಕಾಟಾಚಾರಕ್ಕೂ ಸೊಲ್ಲೆತ್ತುವುದಿಲ್ಲ. ಓರ್ವ ಜವಾಬ್ದಾರಿಯುತ ಮಂತ್ರಿಯಾಗಿ ತನ್ನದೇ ಸರ್ಕಾರವನ್ನು ಸಮರ್ಥಿಸಿಕೊಳ್ಳಬೇಕೆಂಬ ಜರೂರೂ ಕೂಡ ಇದ್ದಂತಿಲ್ಲ. ಇನ್ನು ಹೆಚ್.ಕೆ. ಪಾಟೀಲ್ ಓರ್ವ ಹಿರೀಕರಾಗಿ ವಿವೇಕಿಗಳಾಗಿ ತನ್ನದೇ ಸಮೂಹದ ಹುಡುಗಾಟಕೆಗೆ ಪ್ರತಿಕ್ರಿಯಿಸಬಹುದಿತ್ತು. ಇರಲಿ, ಹೆಚ್.ಕೆ. ಪಾಟೀಲರಿಗೆ ಅವರದ್ದೇ ಆದ ಮಿತಿಯಿದೆ, ತಾಪತ್ರಯಗಳಿವೆ. ಆದರೆ ಎಂ.ಬಿ. ಪಾಟೀಲ್, ಎಸ್.ಆರ್. ಪಾಟೀಲ್, ವೀರಣ್ಣ ಮತ್ತಿಕಟ್ಟಿ, ಮಹದೇವ ಪ್ರಸಾದ್, ಹುಕ್ಕೇರಿಯಂಥವರು ಕಂಡೂಕಾಣದಂತೆ ಏಕೆ ಬಾಯ್ಮುಚ್ಚಿ ಕೂತಿದ್ದಾರೆ.

ಇದು ಜನಾಂಗವೊಂದರ ಹುಡುಗಾಟಕೆಯಾ ಅಥವಾ ಆತ್ಮವಂಚನೆಯಾ?

ದೀನದಲಿತರ ಉನ್ನತಿಗಾಗಿ ಕೀಳುಜಾತಿ, ಹೀನಜಾತಿ, ಶಾಪಗ್ರಸ್ತರೆಲ್ಲರ ಉದ್ಧಾರಕ್ಕಾಗಿಯೇ ಜನ್ಮ ತಳೆದ ಲಿಂಗಾಯತ ಸಮೂಹ ಅಹಿಂದದ ವಿರುದ್ಧ ಇಂಥದೊಂದು ಕುಚೇಷ್ಟೆಗಿಳಿಯುತ್ತದೆಯೆಂದರೆ ಬಸವಣ್ಣನವರ ಸಮಾಧಿಯ ಮೇಲೆ ಕೂತು ಉಣ್ಣುತ್ತಿರುವವರು ಯಾರು? ಆತ್ಮಾವಲೋಕನ ಮಾಡಿಕೊಳ್ಳಬೇಕಾದವರ‍್ಯಾರು?

ರಾ. ಸೋಮನಾಥ್

# ...ಬೆಂಗಳೂರಾಸ್ತಿ ಮಾರಿ ಡೆಲ್ಲಿಲಿ ತಗೊಳ್ಳಿ ಸಾರ್'

## ಥೂತ್ತೇರಿ

▸ ಯಾಹೂ

...ಜೆಡಿಎಸ್ ಹುಡುಗರ ಭುಜದ ಮೇಲೊ, ಚೆನ್ನಿನ ...ೊ, ಕೈಯೂರಿಕೊಂಡು "ಮುಂದಿನ ಚುನಾವಣೆಯಲ್ಲಿ ...ನ್ನು ಗೆಲ್ಲಿಸಿಕೊಂಡು ಅಧಿಕಾರಕ್ಕೆ ಬಂದೇಬರುತ್ತೇವೆ" ...ಿ ಆತ್ಮವಿಶ್ವಾಸದಿಂದ ಹೇಳುತ್ತಿದ್ದ ದೇವೇಗೌಡರ ...ುಗಳನ್ನು ಕೇಳಿಸಿಕೊಂಡ ಸಿದ್ದು ಮತ್ತು ಯಡ್ಡಿ ಕಡೆ ...ರು ಒಳಗೊಳಗೇ ನಗುತ್ತಿದ್ದರಂತಲ್ಲಾ, ಹೀಗೆ ಗೇಲಿ ...ುತ್ತಿದ್ದವರಿಗೆ ಅಚ್ಚರಿಯಾಗುವಂತೆ ದೇವೇಗೌಡರು ...ಊ ಮಾಡಲು ಹೆದರುವ ಆಸನಗಳನ್ನು ಹಾಕಿ ...ಿ ಇಡೀ ಕರ್ನಾಟಕದ ವಯೋವೃದ್ಧರು ಹೋಗಲಿ, ...ಾರಸ್ವಾಮಿ ಯೋಜಿನವರೇ ಕಂಗಾಲಾಗುವಂತೆ ...ಿದ್ದಾರಲ್ಲಾ, ತಮ್ಮ ಬದುಕಿನುದ್ದಕ್ಕೂ ಸ್ವಜಾತಿ ...ುಗಳು ಹಾಗು ವಿಜಾತಿ ನಾಯಕರುಗಳ ಮೇಲೆ ...ಾಂತಿಕವಾದ ಆಸನಗಳನ್ನು ಹಾಕಿ, ಆಸಾಮಿ ...ಾದ ಮೇಲೆ ಸುತ್ತಲೂ ನೋಡಿಕೊಂಡು ಮುಂದೆ ... ಗೌಡರು, ಉಳಿದಿರುವ ಕಾಲದಲ್ಲಿ ಆರೋಗ್ಯ ...ಡಿಕೊಂಡು ಮತ್ತೆ ತಮ್ಮ ಹುಡುಗರು ವಿಧಾನಸೌಧದ ...ರು ಪ್ರಮಾಣವಚನ ತೆಗೆದುಕೊಂಡು ಕಾಲಿಗೆಬಿದ್ದು ...ಾರ ಮಾಡಿಸಿಕೊಳ್ಳುವ ಹಠಕ್ಕೆ ಬಿದ್ದಿದ್ದಾರಂತಲ್ಲಾ, ...ರ ಯೋಗಾಸನ ಚಟಕ್ಕೆ ಹೆದರಿದ ಕುಮಾರಸ್ವಾಮಿ ...ಲಾಯುಮಾನದಲ್ಲಿದ್ದ ಜೆಡಿಎಸ್ ಶಾಸಕರನ್ನು ...ೊಂಡು ಲಂಕೆಗೆ ಹಾರಿಹೋದರಂತಲ್ಲಾ, ಥೂತ್ತೇರಿ!

****

...ೊಪ್ಪು ಸಾರು ಮುದ್ದೆಯಿಂದಲೇ ಹುರಿಗೊಂಡು ...ಿದ್ದ ಗೌಡರ ಶರೀರ ಮುಟ್ಟಿ ನೋಡಿದ ಯೋಗ ...ಗಳಿಗೆ ಹಳೆ ಎಮ್ಮೆ ಮೈಮುಟ್ಟಿದಂತಾಗಿ "ಯಾವ ... ಇಷ್ಟು ತಮಗೆ?" ಎಂದು ಕೇಳಿದರಂತಲ್ಲಾ, ಅದಕ್ಕೆ ...ರು "ನನಗೆ ಕುಕ್ಕುಟಾಸನ, ಕಿರುಕುಳಾಸನ ಮತ್ತು ...ದ್ರಾಸನ ತುಂಬ ಇಷ್ಟ" ಎಂದರಂತಲ್ಲ, ತಾವು ...ರಿಗೆ ಕೇಳರಿಯದ ಸದರಿ ಆಸನಗಳ ಬಗ್ಗೆ ಮತ್ತೊಮ್ಮೆ ...ಾಗ ಗೌಡರು "ಧ್ವಂಸಾಸನ ತುಂಬ ಇಷ್ಟ. ಅದನ್ನು ...ಕೊಡಿ" ಎಂದರಂತಲ್ಲ. "ವೀರ್ಯನಾಶಾಸನ ಬೇಡವೆ?" ...ಾಗ "ಅದನ್ನು ನಾಶ ಮಾಡಿಕೊಂಡು ಬಹಳ ...ಗಳೇ ಆಗಿವೆ. ನನಗೆ ಇಡೀ ಕರ್ನಾಟಕ ಸುತ್ತಿ ...ಬೇಕೆಂಬ ಹಂಬಲ. ಅದಕ್ಕಾಗಿ ಕೈಕಾಲು ...ುಾಗಿರುವಂತೆ ಏನಾದರೂ ಮಾಡಿ" ಎಂದರಂತಲ್ಲ, ...ಲ್ ಆಡುತ್ತೀರಾ?" ಎಂದಾಗ "ಬೇಡಿ, ಗೆಳೆಯ ...ರಪ್ಪ ಅದನ್ನೇ ಆಡಿ ಆಡೀ ಕಾಲುಗಳ ಸ್ವಾಧೀನವನ್ನೇ ...ಕೊಂಡರು. ನನಗೆ ಕುಳಿತಲ್ಲೇ ಮಾಡುವ ಆಸನ ..." ಎಂದರಂತಲ್ಲಾ, "ಹಾಗಾದರೆ ಸುಖಾಸನ ಮತ್ತು ...ಸಂಗಾಸನ ಬೆಸ್ಟ್" ಎಂದ ಯೋಗ ಗುರು ಗೌಡರ ...ುರಿಯಲು ಹೊರಟಾಗ "ನನಗೆ ಸರ್ವಸಂಗಾಸನದ ...ಿಲ್ಲ, ನನಗೆ ಇಷ್ಟವಾದ ಅಂಗಾಸ್ಥನ ಸಾಕು. ಅದು ...ರ್ಘಾಯುಷ್ಯಕ್ಕೆ ಪೂರಕವಾಗಿರಬೇಕು" ಎಂದು ಗೌಡರು ...ಯಾಸನ ಮಾಡೇಬಿಟ್ಟರಂತಲ್ಲಾ, ಥೂತ್ತೇರಿ!!

****


...ಗೌಡರು ಇತ್ತ ಯಯಾತಿಯ ತೀರ್ಮಾನದಲ್ಲಿದ್ದರೆ, ...ಕುಮಾರಣ್ಣ ಸುಗ್ರೀವನ ಸ್ಟೈಲಿನಲ್ಲಿ ಜೆಡಿಎಸ್‌ನ ರೆಸಾರ್ಟ್ ... ಮೋಜುಗಾರರನ್ನು ಕರೆದುಕೊಂಡು ಲಂಕೆಗೆ ...ದರಂತಲ್ಲಾ, ಇದನ್ನು ನೋಡಿದ ಮಾಜಿಗಳು "ನಮ್ಮ ...ಾರಣ್ಣ ಜೆಡಿಎಸ್ ಶಾಸಕರಿಗೆ ಗುಜರಾತನ್ನು ತೋರಿಸಬಹುದಿತ್ತು, ಇಲ್ಲ ಕಾವೇರಿ ನದೀ ತಟದಲ್ಲೇ ನಡೆದುಹೋಗಿ ತಮಿಳುನಾಡಿನ ಸಮುದ್ರ ತಲುಪಿ ವಾಪಸ್ಸು ಬರಬಹುದಿತ್ತು. ಅದೂ ಬೇಡ, ಹೊಸ ರಾಜ್ಯವಾದ ತೆಲಂಗಾಣ ನೋಡಿ ಬಂದಿದ್ದರೆ ಹೇಳಲು ಏನಾದರೂ ಸಿಗುತ್ತಿತ್ತು, ಅದು ಬಿಟ್ಟು ಆ ಲಂಕಾಪಟ್ಟಣ ನೋಡಿಬಂದು ಇವರು ಮಾಡುವುದೇನು?'' ಎಂದು ಕೊಂಕುನುಡಿದರಂತಲ್ಲಾ, ಆದರೇನು ಕುಮಾರಣ್ಣನ ಜೊತೆ ಹೋಗಿರುವವರು ಸಾಂಸ್ಕೃತಿಕವಾಗಿ ಅವಿದ್ಯಾವಂತರು, ಪವರ್ ಇಲ್ಲದೆ ಇರಲಾರದವರು, ಅದಕ್ಕಾಗಿಯೇ ಅವರು ಯಾವುಯಾವುದೋ ನೆಪದಿಂದ ಸಿದ್ದು ಛೇಂಬರಿಗೆ ನುಗ್ಗಿ ಗಂಟೆಗಟ್ಟಲೆ ಮಾತನಾಡಿ ಬರುವವರಾಗಿದ್ದರು. ಇದನ್ನೆಲ್ಲ ಗ್ರಹಿಸಿದ ಕುಮಾರಣ್ಣ ಜೆಡಿಎಸ್ ಶಾಸಕರಿಗೆ ಹಗ್ಗ ಮೂಗುದಾರ ಮತ್ತು ಕೊಳ್ಳುರಿ ಹೊಸೆದು, ನಿಗದಿಯಾದ ಗೊಂತಿಗೆ ಬಿಗಿದು, ಹಿಡಿತದಲ್ಲಿ ಇಟ್ಟುಕೊಳ್ಳಬೇಕಾದರೆ ಒಳ್ಳೆಯ ಮೆಹನತ್ತು ಮಾಡಬೇಕು, ಅದಕ್ಕೆ ಸೂಕ್ತ ಜಾಗವೆಂದರೆ ಯಾರೂ ಇಣುಕಿ ನೋಡದ ಶ್ರೀಲಂಕಾವೇ ಸರಿ ಎಂದು ಹಾರಿಸಿಕೊಂಡು ಹೋಗಿದ್ದರಂತಲ್ಲಾ, ಅಲ್ಲಿಂದ ಬಂದನಂತರ ಚಲುವರಾಯಸ್ವಾಮಿ ತರದವರು "ಮುಂದಿನ ಸಾರಿ ದುಬೈಗೆ ಹೋಗೋಣ. ಅಲ್ಲಿನ ಮಸಾಜನ್ನು ಮರೆಯುವಂತಿಲ್ಲ" ಎಂದವಂತಲ್ಲಾ, ಥೂತ್ತೇರಿ!!

****

ನಮ್ಮ ಕರ್ನಾಟಕದ ಭಾಗ್ಯವನ್ನು ಏನೆಂದು ಹೇಳಲಿ, ಅದರಲ್ಲೂ ರೈಲ್ವೆ ವಿಷಯದಲ್ಲಿ ನಾವಂತೂ ಪುಣ್ಯವಂತರು. ಒಂದು ಕಾಲದಲ್ಲಿ ಕೆಂಗಲ್ ಹನುಮಂತಯ್ಯ ರೈಲ್ವೆ ಮಂತ್ರಿಯಾಗಿ ತಮ್ಮ ಸ್ವಂತ ರೈಲಿನಂತೆ ಓಡಿಸಿದರು. ಆನಂತರ ಟಿ.ಎ. ಪೈ. ಅದಾದ ಮೇಲೆ ಜಾರ್ಜ್ ಫರ್ನಾಂಡಿಸ್. ಬಹುದೀರ್ಘ ಅವಧಿಗೆ ಜಾಫರ್ ಷರೀಫ್. ಮಧ್ಯೆ ಕೆಲವು ಕಾಲ ಮತೀಯ ಗಲಭೆ ಮಂಚೂಣಿ ನಾಯಕ ಬಸನಗೌಡ ಯತ್ನಾಳ್. ಮೊನ್ನೆಮೊನ್ನೆಯವರೆಗೂ ಮಲ್ಲಿಕಾರ್ಜುನ ಖರ್ಗೆ ಈಗ ಸದಾನಂದ ಗೌಡರು. ಹೀಗೆ ರೈಲ್ವೆ ವಿಷಯದಲ್ಲಿ ಕಡಿಮೆ ರೈಲಿನ ಸೇವೆ ಕರ್ನಾಟಕಕ್ಕೂ ಅವಿನಾಭಾವ ಸಂಬಂಧ ಇದೆಯಲ್ಲಾ, ಇದೀಗ ತಾನೆ ದೆಹಲಿ ಗದ್ದುಗೆ ಏರಿದ ಸುಲ್ತಾನರು ಹಲ್ಲಿನಲ್ಲೇ ನಗುವ ಸದಾನಂದ ಗೌಡರನ್ನು ಕರೆದು ಘನಗಂಭೀರವಾದ ರೈಲ್ವೆ ಇಲಾಖೆಗೆ ಒಂದಿಷ್ಟು ನಗು ತುಂಬಲು ಆಜ್ಞಾಪಿಸಿರುವಾಗ, ನಾವೂ ಕೂಡ ಗೌಡರನ್ನು ಅಭಿನಂದಿಸದಿದ್ದರೆ ಹೇಗೆ ಅನ್ನಿಸಿ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ಭಲೆ ಛಾನ್ಸಿದೆ, ಲಕ್ಕಿ ಛಾನ್ಸಿದೆ, ಲಲ್ಲಲಾವ್ ಲಲ್ಲಲಾವ್ ಲಲ್ಲಲಾವ್...."

"ಹಲೋ ಯಾರೂ?"




"ನಾನು ಸಾರ್ ಯಾಹು. ತಮಗೆ ಅಭಿನಂದನೆ ಹೇಳಕ್ಕೆ ಫೋನ್ ಮಾಡಿದೆ ಸಾರ್."

"ಥ್ಯಾಂಕ್ಸ್, ಬನ್ನಿ ಮಾತನಾಡುವ."

"ಇನ್ನೊಮ್ಮೆ ಬರ್ತಿನಿ ಸಾರ್. ಅಂತೂ ಪುನಃ ರೈಲ್ವೆ ಇಲಾಖೆ ಕರ್ನಾಟಕಕ್ಕೇ ಸಿಕ್ತಲ್ಲ ಸಾರ್."

"ಹೌದು, ನಾನು ಕೂಡ ನಿರೀಕ್ಷೆ ಮಾಡಿರಲಿಲ್ಲ."

"ಈ ರೈಲ್ವೆ ಇಲಾಖೆ ತಮಿಳುಮಯ ಆಗಿದೆ ಸಾರ್. ಏನಾದ್ರು ಮಾಡಿ ತುಳುಮಯ ಮಾಡಕ್ಕಾಗಲ್ವ ಸಾರ್."

"ಅದಾಗುವುದಿಲ್ಲ, ರೈಲ್ವೆ ಕೆಲಸ ತುಂಬ ಕಷ್ಟಕರವಾದದ್ದು. ಆದರೆ ನಮ್ಮವರ ಕೈಲಿ ಈ ಕೆಲಸ ಆಗುವುದಿಲ್ಲ."

"ಆಫೀಸರ್ ಕೆಲಸನೆ ಕೊಡಿಸಿ ಸಾರ್."

"ರೈಲ್ವೆ ನೇಮಕಾತಿ ಅಷ್ಟು ಸುಲಭವಿಲ್ಲ, ನೋಡುವ."

"ಇನ್ನೊಂದು ವಿಷಯ ಸಾರ್, ಈ ರೈಲ್ವೆ ಮಂತ್ರಿಯಾದವರು ಮನಸ್ಸು ಮಾಡಿದ್ರೆ ಭಾರಿ ಹಣ ಆಸ್ತಿ ಮಾಡಬವುದಂತೆ."

"ಹೌದಾ?"

"ಹೌದು ಸಾರ್. ಜಾಫರ್ ಷರೀಫ್ ಒಂದು ಕಾಲದಲ್ಲಿ ತುಂಬಾ ಬಡವ. ಆದ್ರೀವತ್ತು ಕುಬೇರ. ನೀವು ಮನಸ್ಸು ಮಾಡಿದ್ರೆ ಕುಬೇರ್ರಾಗಬವುದು."

"ನಾನು ಕುಬೇರ ಆಗುವ ಅಗತ್ಯವಿಲ್ಲ, ರೈಲ್ವೆ ಇಲಾಖೇಲಿ ಸರಿಯಾಗಿ ಕೆಲಸ ಕಾರ್ಯ ಮಾಡಿಕೊಂಡು ಹೋಗಬೇಕು."

"ಅಂದ್ರೆ ರೈಲ್ವೆ ಇಲಾಖೆಲಿ ಏನನ್ನೂ ಮುಟ್ಟದಷ್ಟು ಚೆನ್ನಾಗಿದ್ದೀರಾ ಸಾರ್?"

"ಹೌದು. ನಮ್ಮ ಆದಾಯದಲ್ಲಿ ನಮ್ಮ ಜೀವನ ನಿರ್ವಹಣೆ ಮಾಡಲು ಯಾವ ತೊಂದರೆಯೂ ಇಲ್ಲ."

"ನಿಜ ಸಾರ್. ಜೀವನ ನಿರ್ವಹಣೆ ಸರಾಗವಾಗಿದ್ರೆ ಭ್ರಷ್ಟ ಕೆಲಸದ ಅಗತ್ಯವೇ ಇಲ್ಲ."

"ಅದಕ್ಕೆ ನಾನು ಬಹಳ ಹಿಂದೆಯೇ ಯೋಚಿಸಿ ವಾಣಿಜ್ಯ ಮಳಿಗೆ ಕಟ್ಟಿಸಿದ್ದೇನೆ. ಅದರ ಬಾಡಿಗೆ ಹಣವೇ ಸಾಕು."

"ಅದೇನೊ ತಕರಾರಿನ ಜಮೀನಂತಲ್ಲಾ ಸಾರ್?"

"ಅದು ಬಿಡಿಎಯಿಂದ ಜಿ ಕೆಟಗರಿ ನಿವೇಶನ ತೆಕ್ಕೊಂಡಿದ್ದು, ನಮ್ಮ ಗೆಳೆಯ ಜೀವರಾಜನ ಸೈಟನ್ನು ಖರೀದಿಸಿ, ಎರಡನ್ನು ಒಟ್ಟು ಸೇರಿಸಿ ಮಳಿಗೆ ಕಟ್ಟಿದ್ದೇನೆ. ಇಂತ ಒಂದು ಸಣ್ಣ ಮಾರ್ಪಾಡನ್ನು ಸಹಿಸದ ಜನ ಬೊಬ್ಬೆ ಹಾಕ್ತವುಂಟು."

"ನಿಜಕ್ಕೂ ಸಣ್ಣ ಜನ ಸಾರ್. ಜೀವನ ಮಾಡಕ್ಕೆ ಮಳಿಗೆ ಕಟ್ಟಿಕೊಂಡ್ರು ಸಯಿಸಲ್ಲ."

"ನಮ್ಮ ಮನೆ ವಿಷಯಕ್ಕೂ ತಕರಾರು ಮಾಡಿದ್ದಾರೆ, ಗೊತ್ತುಂಟ. ಜಾಲಳ್ಳಿ ಹೋಬಳಿ ಸರ್ವೆ ನಂಬರ್ 272/ ಪಿ–4 ನಲ್ಲಿ ಏಳೂವರೆ ಗುಂಟೆ ಜಮೀನು ತೆಕ್ಕೊಂಡು ನನ್ನ ಹೆಂಡತಿ ಹೆಸರಲ್ಲಿ ಮನೆ ಕಟ್ಟಿಸಿದ್ದೇನೆ. ಅದಕ್ಕೆ ಎಂಟು ಲಕ್ಷ ಆಯ್ತು. ನಿಮ್ಮ ಮನೆ ಬೆಲೆ ಎಷ್ಟು ಹೇಳಿ ನೋಡುವ?"

"ಹತ್ತು ಲಕ್ಷ ಸಾರ್."

"ನೋಡಿ, ನಿಮ್ಮ ಮನೆಗಿಂತಲೂ ಎರಡು ಲಕ್ಷ ಕಡಿಮೆ ಖರ್ಚಿನಲ್ಲಿ ನನ್ನ ಡಾಟಿ ಹೆಸರಿನಲ್ಲಿ ಮನೆ ಕಟ್ಟಿಸಿದರೆ ಅದು ಸುಳ್ಳು ಲೆಕ್ಕ ಮತ್ತೆ ಅಕ್ರಮ ಭೂಮಿ ಅಂತ ಹೇಳಿ ಪ್ರಧಾನಿಗೆ ದೂರು ಕೊಟ್ಟಿದ್ದಾರೆ. ನಾನು ಇದಕ್ಕೆಲ್ಲಾ ಕೇರ್ ಮಾಡುವುದಿಲ್ಲ."

"ಕೇರ್ ಮಾಡಬಾರ್ದು ಸಾರ್. ನಿಮ್ಮನ್ನ ಮುಖ್ಯಮಂತ್ರಿ ಮಾಡಿದ ಎಡೂರಪ್ಪ ಇಂತದಕ್ಕೆಲ್ಲಾ ಕೇರ್ ಮಾಡಿದ್ರೆ ನೂರಾರು ಕೋಟಿ ರೂಪಾಯಿ ಆಸ್ತಿ ಮಾಡಕ್ಕಾಗ್ತಿತ್ತ?"

"ಅವರದ್ದು ಬಿಡಿ. ಅವರ ಆಸ್ತಿಗೆ ಬೆಲೆ ಕಟ್ಟಲಿಕ್ಕೆ ನನ್ನಿಂದಾಗುವುದಿಲ್ಲ."

"ಈಗ ಬೆಂಗಳೂರಲ್ಲಿ ಮಾಡಿಕೊಂಡಿರೊ ಆಸ್ತಿ ಮಾರಿ, ಮಂಗಳೂರು ಅಥವಾ ಡಿಲ್ಲಿಲಿ ಮಾಡಿಕಳಿ ಸಾರ್."

"ಮುಂದೆ ನೋಡುವ."

"ಥೂತ್ತೇರಿ!!" ●

## ...ಬುದ್ಧಿಜೀವಿ

...ದಲ್ಲ ಒಂದಿನ
...ಕೀಯ ಏಲ್ಲ ನಮಗ್ಯಾಕ್ರೀ ಅಂತ ಕೇಳೋ
...ಮಹಾನ್ ದೇಶದ ಬುದ್ಧಿಜೀವಿಗಳು
...ಾಸ್ನ ಜಪ್ಪಿಂದ ವಿಚಾರಣೆ ಎದುರಿಸ್ಬೇಕಾಗುತ್ತೆ ನೋಡ್ರಾ ಇರಿ.

...ರ ದೇಶ ಸಕ್ರೆ, ಹರಳಿನ ತರ
...ಸ ಕರಗ್ತ ಒಂಟಿಯಾಗಿ
...ಿಯುಸಿರು ಎಳೀತಾ ಇರೋವಾಗ
...ೀನು ಮಾಡ್ತಿದ್ರು ಅಂತ ಹೇಳ್ಬೇಕಾಗುತ್ತೆ.

...ಅವ್ರ, ಅವರ ಘನಂದಾರಿ ಬರಿಸಿನ ಬಗ್ಗೆ,
... ಗೊರಕೆ ಹೊಡೆದ ನಿದ್ದೆ ಬಗ್ಗೆ ಕೇಳಲ್ಲ
... ಅವರ
...ತ್ವ ಕುರಿತ

ಬರಡು ವಾದವಿವಾದ ಕುರಿತು ತಿಳಿಯೋ ಆಸಕ್ತಿ ಇಲ್ಲ,
ಅವರ ಹಣಕಾಸು ವೈವಾಟು ಜಾಣ್ಮೆ ಬಗ್ಗೆ
ಯಾರೂ ಗಮನ ಹರಸಲ್ಲ,

ಗ್ರೀಕ್ ಪುರಾಣ ಕಾವ್ಯದ ಬಗ್ಗೆ
ಅಥವಾ ತಮ್ಮವನೊಬ್ಬ ರಣಹೇಡಿ ಥರ ಸಾಯ್ತಿದ್ದಾಗ
ಅವ್ರಿಗಾದ ಹೇವರಿಕೆ ಬಗ್ಗೆ
ಯಾರೂ ಪ್ರಶ್ನೆ ಕೇಳಲ್ಲ

ಅವರ ಇಡೀ ಬದುಕಲ್ಲಿ ನೀಡಿದ
ಪಿಳ್ಳೆನೆಪ, ಬಾಲಿಶ ಸಮಜಾಯಿಷಿ ಬಗ್ಗೆ
ಯಾವನೂ ತಲೆ ಕೆಡಿಸಿಕೊಳ್ಳಲ್ಲ,

ಒಂದಿನ ಅತಿ ಸಾಮಾನ್ಯ ಸರಳ ಜನ ಬರತಾರೆ.

ರಾಜಕೀಯ ನಮಗ್ಯಾಕೆ ಅನ್ನೋ ಬುದ್ಧಿಜೀವಿಗಳಿಗೆ
ಪ್ರತಿದಿನ ಕಾಳುಕಡ್ಡಿ ಹಾಲು ಮೊಟ್ಟೆ ಕೊಟ್ಟು
ಕಾರು ಓಡ್ಸಿ,



ಅವ್ರ ನಾಯಿ, ಕೈತೋಟದ ದೇಖರೇಖಿ ನೋಡ್ಕಂಡು
ಜೀವಮಾನ ಇಡೀ ಅವರಿಗಾಗೇ ಗೇಯ್ದರೂ
ಅವರ ಪುಸ್ತಕದಲ್ಲಿ, ಕವಿತೇಲಿ
ಜಾಗನೇ ಸಿಗದಿರೋ ಜನ ಕೇಳ್ತಾರೆ:

'ಬಡವ್ರು ನರಳುವಾಗ ನೀನೇನು ಮಾಡಿದ್ಯಯ್ಯಾ?
ನವುರಾದ ಅವರ ಬದುಕೆಲ್ಲ
ಉರಿದು ಬೂದಿಯಾಗೋವಾಗ ಏನು ಮಾಡ್ತಿದ್ದೆ?'

ನನ್ನ ಪ್ರಿಯ ದೇಶದ ಮಹಾನ್ ಬುದ್ಧಿಜೀವಿಗಳೇ,
ಇಲ್ನೋಡಿ, ಆಗ ನೀವು ಏನೂ ಉತ್ತರಿಸಕ್ಕಾಗಲ್ಲ.

ಮೌನತೋಳ ನಿಮ್ಮ ಹೊಟ್ಟೆಕರುಳ್ಳ ಬಗ್ಬುಬಗ್ದು ತಿನ್ನುತ್ತೆ
ನಿಮ್ಮ ಸಂಕ್ಟನೇ ನಿಮ್ಮ ಆತ್ಮನ ಹಿಂಸಿಸುತ್ತೆ

ನಾಚ್ಕಂಡು ನಿಮ್ ದನಿ ಕೂಡ ಬಿದ್ದು ಮೂಕರಾಗ್ತಿರಿ ನೀವು.



● ಒಟ್ಟೊ ರೆನೆ ಕ್ಯಾಸ್ಟಿಲೊ
ಅನು: ಅನುಪಮಾ

ನರ್ಮದಾ ಬಚಾವೊ ಆಂದೋಲನ, ಗ್ರೀನ್‌ಪೀಸ್‌ನಂತಹ ಸಂಘಟನೆಗಳು ಲಕ್ಷಾಂತರ ಆದಿವಾಸಿ, ಮತ್ತಿತರ ಬಡಜನರ ಒಕ್ಕಲೆಬ್ಬಿಸುವಿಕೆ, ಪರಿಸರ ಹಾನಿ ಇತ್ಯಾದಿಗಳಿಗೆ ಕಾರಣವಾಗಬಲ್ಲ ಹಲವಾರು ಯೋಜನೆಗಳಿಗೆ ತೀವ್ರ ಪ್ರತಿರೋಧ ಒಡ್ಡುತ್ತಾ ಬಂದಿವೆ.

ಪರಮಾಪ್ತ ಕಾರ್ಪೋರೇಟು ಧಣಿಗಳ 'ಅಭಿವೃದ್ಧಿ'ಯನ್ನೇ ತಮ್ಮ ಮೂಲಮಂತ್ರವಾಗಿಸಿಕೊಂಡ ಆಳ್ವಿಕರ ಪಾಲಿಗೆ ಇಂತಹ ಸಂಘಟನೆಗಳು ಮಗ್ಗುಲಮುಳ್ಳಾಗಿ ಪರಿಣಮಿಸಿರುವುದೂ ಸುಳ್ಳಲ್ಲ. ತರ್ಕಬದ್ಧವಾಗಿ ನೋಡಿದಾಗ ಎನ್‌ಜಿಒಗಳ ಆಕ್ಷೇಪಣೆಗಳನ್ನು ಬುಲ್‌ಡೋಜ್ ಮಾಡಲೆಂದೆ ಹೆಣೆದ ಚಾಣಕ್ಯತಂತ್ರದ ಭಾಗವಾಗಿ ಮಿಥ್ಯಾರೋಪಗಳಿಂದ ಕೂಡಿದ ಈ ವರದಿಯ ಸೋರಿಕೆಯಾಗಿದೆ ಎನ್ನುವುದು ಸ್ಫಟಿಕದಷ್ಟು ಸ್ಪಷ್ಟ.



# ಎತ್ತಿಗೆ ಜ್ವರ ಎಮ್ಮೆಗೆ ಬರೆ!


'ಅಭಿವೃದ್ಧಿ' ಮಂತ್ರ ಪಠಿಸಿ ಜನರಿಗೆ ಮಂಕುಬೂದಿ ಎರಚುವ ಮೂಲಕ ಚುನಾವಣೆ ಗೆದ್ದವರು ತಥಾಕಥಿತ ಅಭಿವೃದ್ಧಿಯನ್ನು ಹೇಗೆ ಸಾಧಿಸಲಿದ್ದಾರೆ ಎಂಬುದರ ಮುನ್ಸೂಚನೆಗಳು ಈಗಾಗಲೆ ಕಾಣಿಸಿಕೊಳ್ಳುತ್ತಿವೆ. ಉದಾಹರಣೆಗೆ ನೈಜ ಅಧಿಕಾರವೆಲ್ಲ ಪ್ರಧಾನಿ ಕಚೇರಿಯಲ್ಲಿ ಕೇಂದ್ರೀಕೃತವಾಗುತ್ತಿರುವುದು, ಕಾರ್ಯದರ್ಶಿಗಳೆಲ್ಲರೂ ನೇರವಾಗಿ ಪ್ರಧಾನಿಗೆ ವರದಿ ಸಲ್ಲಿಸಬೇಕೆಂದು ತಾಕೀತು ಮಾಡಿರುವುದು, ಸಚಿವರ ತಂಡಗಳನ್ನು ರದ್ದುಗೊಳಿಸಿರುವುದು, ವಿಶೇಷ ಆರ್ಥಿಕ ವಲಯಗಳ ಪುನರುಜ್ಜೀವನ, ಔದ್ಯಮೀಕರಣದ ಗತಿಯನ್ನು ನಿಧಾನಗೊಳಿಸಿ ದೊಡ್ಡ ಉದ್ಯಮಗಳ ಸ್ಥಾಪನೆಗೆ ಅಡ್ಡಿಯಾಗಿದೆ ಎನ್ನಲಾಗಿರುವ ಭೂಸ್ವಾಧೀನ ಕಾಯ್ದೆಗೆ ತಿದ್ದುಪಡಿ ತರುವ ಇಂಗಿತ, 100 ಪ್ರತಿಶತ ವಿದೇಶಿ ನೇರ ಹೂಡಿಕೆಯ ಪ್ರಸ್ತಾಪ ಮುಂತಾದುವೆಲ್ಲ ಏನನ್ನು ಸೂಚಿಸುತ್ತವೆ? ಇದರ ಮುಂದುವರಿದ ಭಾಗವಾಗಿ ಇದೀಗ ಅನಿರ್ಬಂಧಿತ ಔದ್ಯಮೀಕರಣ, ಗಣಿಗಾರಿಕೆ, ಬೃಹತ್ ನೀರಾವರಿ ಯೋಜನೆ ಇತ್ಯಾದಿಗಳಿಂದ ಮನುಕುಲ ಮತ್ತು ಪರಿಸರದ ಮೇಲಾಗುತ್ತಿರುವ ದುಷ್ಪರಿಣಾಮಗಳ ವಿರುದ್ಧ ಧ್ವನಿಯೆತ್ತಿರುವ ಸರಕಾರೇತರ ಸಂಸ್ಥೆಗಳ (ಎನ್‌ಜಿಒ) ಬಾಯಿ ಮುಚ್ಚಿಸುವ ಪ್ರಕ್ರಿಯೆ ಆರಂಭಗೊಂಡಿದೆ.

## ಐಬಿ ವರದಿ ಎಂಬ ಗದಾಪ್ರಹಾರ

ಸರಕಾರೇತರ ಸಂಸ್ಥೆಗಳ 'ಹಸ್ತಕ್ಷೇಪ'ವನ್ನು ನಿಲ್ಲಿಸುವ ಹುನ್ನಾರದ ಮೊದಲ ಭಾಗವಾಗಿ ಕುಚೇಷ್ಟೆಯ ವರದಿಯೊಂದನ್ನು ಮಾಧ್ಯಮಗಳಿಗೆ ಸೋರಿಕೆ ಮಾಡಲಾಗಿದೆ. ಅದರಲ್ಲಿ ವಿದೇಶಿ ಮೂಲಗಳಿಂದ ಧನಸಹಾಯ ಪಡೆಯುವ ಸರಕಾರೇತರ ಸಂಸ್ಥೆಗಳಿಂದ ದೇಶದ ಭದ್ರತೆಗೆ ಅಪಾಯವಿದೆಯೆಂದು ಆರೋಪಿಸಲಾಗಿದೆ. ವಿದೇಶಿ ಶಕ್ತಿಗಳ ಆಣತಿಯಂತೆ ಕಾರ್ಯಾಚರಿಸುವ ಈ ಎನ್‌ಜಿಒಗಳ ದೇಶವಿರೋಧಿ ಚಟುವಟಿಕೆಗಳು ಭಾರತದ ಅಭಿವೃದ್ಧಿಗೆ ಅಡ್ಡಗಾಲು ಹಾಕುತ್ತಿವೆ (ಜಿಡಿಪಿ ದರವನ್ನು 2-3% ಕುಗ್ಗಿಸಬಹುದು) ಎಂಬಿತ್ಯಾದಿ ಆರೋಪಗಳಿರುವ ಈ ವರದಿಯನ್ನು ತಯಾರಿಸಿರುವುದು ಗುಪ್ತಚರ ಇಲಾಖೆ ಎನ್ನಲಾಗಿದೆ. ಇಂತಹ ಕೆಲವು ಠಕ್ಕು ಎನ್‌ಜಿಒಗಳು ಇವೆ ಎಂದೇ ಇಟ್ಟುಕೊಂಡರೂ ಅಂಥವುಗಳನ್ನಷ್ಟೆ ಗುರುತಿಸಿ ಕ್ರಮ ಕೈಗೊಳ್ಳಬಹುದಲ್ಲವೇ? ಅದರ ಬದಲು ಸಾರಾಸಗಟಾಗಿ ಎಲ್ಲ ಎನ್‌ಜಿಒಗಳು ಅಪಾಯಕಾರಿ ಎನ್ನುವುದರ ಹಿಂದೆ ಬೇರೆ ಉದ್ದೇಶಗಳಿರುವುದು ಸ್ಪಷ್ಟವಿದೆ.

## ಮೋದಿ ಭಾಷಣದ ನಕಲು

ಆಶ್ಚರ್ಯಕರವಾಗಿ ವರದಿಯಲ್ಲಿನ ಕೆಲವು ಅಂಶಗಳನ್ನು ರಾಧಾ ರಾಜನ್ ಮತ್ತು ಕ್ರಿಶನ್ ಕಾಕ್ ಎಂಬವರು ಸಂಪಾದಿಸಿದ 'NGOs, Activists & Foreign Funds: Anti-Nation Industry' ಎಂಬ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆಯೆಂಬ ವಿಚಾರ ಬೆಳಕಿಗೆ ಬಂದಿದೆ. ಕೆಲವು ನಿರ್ದಿಷ್ಟ ಎನ್‌ಜಿಒಗಳು ಹೇಗೆ 'ಹಿಂದೂ ವಿರೋಧಿ?'ಯಾಗಿವೆ ಮತ್ತು ಅವ್ಯವಹಾರಗಳಲ್ಲೂ



ಹಿಂದುತ್ವ ಸಂಘಟನೆಗಳ [illegible] ಆರ್ಥಿಕ ನೆರವು ನೀಡುತ್ತಿದೆ ಎಂಬ ಆರೋಪ ಹೊತ್ತಿರುವ ಐಡಿಆರ್‌ಎಫ್ ಸಂಘಟನೆಯ ಸ್ಥಾಪಕ ವಿನೋದ್ ಪ್ರಸಾದ್ ಬಿಜೆಪಿ ನಾಯಕ ವಾಜಪೇಯಿಯೊಂದಿಗೆ

ಮುಳುಗಿವೆ ಎಂಬುದನ್ನು ಬಯಲಿಗೆಳೆಯುತ್ತದೆ ಎನ್ನಲಾದ ಈ ಪುಸ್ತಕದ ಪ್ರಥಮ ಆವೃತ್ತಿಯನ್ನು ಸೆಪ್ಟಂಬರ್ 9, 2006ರಂದು ಬಿಡುಗಡೆಗೊಳಿಸಿದಾತ ಇನ್ಯಾರೂ ಅಲ್ಲ ಸದ್ಯ ಭಾರತದ ಪ್ರಧಾನಿಯಾಗಿರುವ ನರೇಂದ್ರ ಮೋದಿ. ಮುಂದೆ ಪ್ರಕಟಗೊಂಡ ದ್ವಿತೀಯ ಆವೃತ್ತಿಯಲ್ಲಿ ಮೋದಿಯ ಭಾಷಣವನ್ನೂ ಸೇರಿಸಲಾಗಿದೆ. ಪ್ರಸಕ್ತ 'ಗುಪ್ತಚರ' ವರದಿಯಲ್ಲಿ ಇದೇ ಭಾಷಣದ ತುಣುಕುಗಳನ್ನು (ಪುಸ್ತಕದ ಪುಟ 417) ಯಥಾವತ್ತಾಗಿ ನಕಲುಮಾಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

## ಚಾಣಕ್ಯತಂತ್ರ

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯ (ಎಫ್‌ಸಿಆರ್‌ಎ) ಪ್ರಕಾರ ವಿದೇಶದಿಂದ ಹಣ ಪಡೆಯುವ ಪ್ರತಿಯೊಂದು ಎನ್‌ಜಿಒ ಕೂಡ ಕಡ್ಡಾಯವಾಗಿ ಗೃಹ ಸಚಿವಾಲಯದ ಪೂರ್ವಾನುಮತಿ ಪಡೆಯಬೇಕಾಗುತ್ತದೆ. ಹೀಗಿರುವಾಗ ವರದಿಯಲ್ಲಿ ಆರೋಪಿಸಿರುವಂತೆ ಅವು ವಿಧ್ವಂಸಕ ಚಟುವಟಿಕೆಗಳನ್ನು ನಡೆಸುತ್ತಿದ್ದ ಪಕ್ಷದಲ್ಲಿ ಸಹಜವಾಗಿಯೆ ಇಷ್ಟು ವರ್ಷಗಳ ಕಾಲ ಸಚಿವಾಲಯ, ಗುಪ್ತಚರ ಇಲಾಖೆಗಳೇನು ಮಾಡುತ್ತಿದ್ದವು ಎಂಬ ಪ್ರಶ್ನೆಯನ್ನು ಕೇಳಲೇಬೇಕಾಗುತ್ತದೆ. ವಾಸ್ತವಾಂಶ ಏನೆಂದರೆ ನರ್ಮದಾ ಬಚಾವೊ ಆಂದೋಲನ, ಗ್ರೀನ್‌ಪೀಸ್‌ನಂತಹ ಸಂಘಟನೆಗಳು ಲಕ್ಷಾಂತರ ಆದಿವಾಸಿ ಮತ್ತಿತರ ಬಡಜನರ ಒಕ್ಕಲೆಬ್ಬಿಸುವಿಕೆ, ಪರಿಸರ ಹಾನಿ ಇತ್ಯಾದಿಗಳಿಗೆ ಕಾರಣವಾಗಬಲ್ಲ ಹಲವಾರು ಯೋಜನೆಗಳಿಗೆ ತೀವ್ರ ಪ್ರತಿರೋಧ ಒಡ್ಡುತ್ತಾ ಬಂದಿವೆ. ಪರಿಣಾಮವಾಗಿ ಇಂಥಾ ಜನವಿರೋಧಿ ಯೋಜನೆಗಳು ನನೆಗುದಿಗೆ ಬಿದ್ದಿರುವುದರಿಂದ ಲಾಭಬಡುಕ ಕಾರ್ಪೋರೇಟುಗಳ ಕೈಕಟ್ಟಿದಂತಾಗಿರುವುದು ನಿಜ. ಹಾಗಾಗಿ ಪರಮಾಪ್ತ ಕಾರ್ಪೋರೇಟು ಧಣಿಗಳ 'ಅಭಿವೃದ್ಧಿ'ಯನ್ನೇ ತಮ್ಮ ಮೂಲಮಂತ್ರವಾಗಿಸಿಕೊಂಡ ಆಳ್ವಿಕರ ಪಾಲಿಗೆ ಇಂತಹ ಸಂಘಟನೆಗಳು ಮಗ್ಗುಲಮುಳ್ಳಾಗಿ ಪರಿಣಮಿಸಿರುವುದೂ ಸುಳ್ಳಲ್ಲ. ತರ್ಕಬದ್ಧವಾಗಿ ನೋಡಿದಾಗ ಎನ್‌ಜಿಒಗಳ ಆಕ್ಷೇಪಣೆಗಳನ್ನು ಬುಲ್‌ಡೋಜ್ ಮಾಡಲೆಂದೆ ಹೆಣೆದ ಚಾಣಕ್ಯತಂತ್ರದ ಭಾಗವಾಗಿ ಮಿಥ್ಯಾರೋಪಗಳಿಂದ ಕೂಡಿದ ಈ ವರದಿಯ ಸೋರಿಕೆಯಾಗಿದೆ ಎನ್ನುವುದು ಸ್ಫಟಿಕದಷ್ಟು ಸ್ಪಷ್ಟ. ಹೀಗೆ ಕೆಲವೇ ಕೆಲವರ ಲಾಭಕ್ಕಾಗಿ ಪರಿಸರವನ್ನು ಬಲಿಕೊಡಲು ಹಿಂದೆಮುಂದೆ ನೋಡದ ಪ್ರಭುತ್ವ ಪ್ರಜೆಗಳ ಪರವೇ ಎಂಬುದನ್ನು ಜನರೇ ನಿರ್ಧರಿಸಬೇಕು.

## ಪ್ರಶ್ನಾರ್ಹ ವರದಿ

ವಾಸ್ತವದಲ್ಲಿ ವಿಷಯದ ಆಳ ಹಾಗೂ ಸಮಗ್ರ ಅಧ್ಯಯನವಿಲ್ಲದ ಇಂತಹದೊಂದು ವರದಿ ಸಂಪೂರ್ಣವಾಗಿ ಪ್ರಶ್ನಾರ್ಹವಾಗಿದೆ. ಮೊದಲನೆಯದಾಗಿ, ವಿದೇಶಿ ದೇಣಿಗೆ ಕುರಿತ ದೆಹಲಿ ಹೈಕೋರ್ಟಿನ ಒಂದು ಪ್ರಮುಖ ತೀರ್ಪನ್ನು ಅದರಿಂದ ಕೈಬಿಡಲಾಗಿದೆ. 28.3.2014ರ ಆ ತೀರ್ಪಿನ ಪ್ರಕಾರ ಕಾಂಗ್ರೆಸ್ ಮತ್ತು ಬಿಜೆಪಿಗಳೆರಡೂ ಕಾನೂನುಗಳನ್ನು ಉಲ್ಲಂಘಿಸಿ ವಿದೇಶಗಳಿಂದ ಕೋಟಿಗಟ್ಟಲೆ ಹಣ ಪಡೆದು ಅಪರಾಧ ಎಸಗಿವೆ. ಈ ಪಕ್ಷಗಳು ವೇದಾಂತ ಎಂಬ ಬಹುರಾಷ್ಟ್ರೀಯ ಕಾರ್ಪೋರೇಟ್ ದೈತ್ಯ ಹಾಗೂ ಅದರ ಹಲವಾರು ಉಪಸಂಸ್ಥೆಗಳಿಂದ ದುಡ್ಡು ಪಡೆದು ಅದಕ್ಕೆ ಪ್ರತಿಯಾಗಿ ಅವುಗಳಿಗೆ ಅನೇಕ ಅನುಕೂಲತೆಗಳನ್ನು ಒದಗಿಸಿಕೊಟ್ಟಿವೆ ಎಂದು ಹೈಕೋರ್ಟು ಹೇಳಿದೆ.

ಎರಡನೆಯದಾಗಿ, ವಿದೇಶಗಳಿಂದ ಕೋಟಿಗಟ್ಟಲೆ ಹಣ ಪಡೆಯುತ್ತಾ ಸಂವಿಧಾನವಿರೋಧಿ, ಕೋಮುವಾದಿ ಮತ್ತು ಉಗ್ರಗಾಮಿ ಚಟುವಟಿಕೆಗಳನ್ನು ನಡೆಸುತ್ತಾ ಆಂತರಿಕ ಭದ್ರತೆಗೆ ಅಪಾಯಕಾರಿಯಾಗಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ ಎಂಬ ಸರಕಾರೇತರ ಸಂಘಟನೆ ಮತ್ತದರ ನೂರಾರು ಉಪಸಂಘಟನೆಗಳನ್ನೊಳಗೊಂಡ ಸಂಘ ಪರಿವಾರದ ಕುರಿತು

ವಿಶೇಷ ಲೇಖನ

ವರದಿಯಲ್ಲಿ ಎಲ್ಲಿಯೂ ಚಕಾರವೆತ್ತದಿರುವುದು ಬಹ ವಿಚಿತ್ರವಾಗಿದೆ.

## ಸಂಘ ಪರಿವಾರ ಮತ್ತು ವಿದೇಶಿ ದೇಣಿಗೆ


ಸಂಘ ಪರಿವಾರದ ಶಾಖೆಗಳು ದೇಶವಿದೇಶಗಳಿ ವಿಸ್ತರಿಸಿವೆ. ಅಮೆರಿಕಾ, ಬ್ರಿಟನ್, ಕೆನಡಾ, ನಾರ್ವೆ, ಡೆನ್ಮಾರ್ಕ್ ನೆದರ್‌ಲ್ಯಾಂಡ್, ಜರ್ಮನಿ, ಹಾಂಗ್‌ಕಾಂಗ್, ಆಸ್ಟ್ರೇಲಿಯಾ ಶ್ರೀಲಂಕಾ, ಸುರಿನಾಂ, ಟ್ರಿನಿಡಾಡ್ ಟೊಬಾಗೊ, ಸ್ಪೇಯ್ ಜಾಂಬಿಯಾ ಮುಂತಾದ ದೇಶಗಳಲ್ಲಿ ಮಾತೃಸಂಸ್ಥೆಯಾ ಕಾರ್ಯಾಚರಿಸುತ್ತಿರುವುದು ವಿಶ್ವ ಹಿಂದೂ ಪರಿಷತ್ ವಿಹಿಂಪದ ಉಪಸಂಘಟನೆಗಳನ್ನು ಮಾರೀಷಸ್ ಮಯನ್ಮಾರ್, ಕೆನ್ಯಾ, ಮಲೇಷಿಯಾ, ನೈಜೀರಿಯಾ ಗಯಾನಾ, ಮಲಾವಿ, ಟಾಂಜನೀಯ, ಥಾಯ್‌ಲ್ಯಾಂಡ್ ಇಂಡೋನೇಷಿಯಾ, ಫಿಜಿ ಮತ್ತು ನೇಪಾಳಗಳಲ್ಲಿ ಕಾಣಬಹುದು. ಬ್ರಿಟನ್‌ನಲ್ಲಿ ಹಿಂದೂ ಸ್ವಯಂಸೇವಕ ಸಂಘ ಯುಕೆ (ಭಾರತದ ರಾಷ್ಟ್ರೀಯ ಸ್ವಯಂಸೇವಕ ಸಂಘಕ ಸಮಾನ), ಹಿಂದೂ ಸೇವಿಕಾ ಸಮಿತಿ ಯುಕೆ, ಹಿಂದೂ ಸಾಹಿತ್ಯ ಕೇಂದ್ರ, ವಿಶ್ವ ಹಿಂದೂ ಪರಿಷತ್ ಯುಕೆ, ಕಲ್ಯಾಣ ಆಶ್ರಮ ಟ್ರಸ್ಟ್, ಸೇವಾ ಇಂಟರ್‌ನ್ಯಾಷನಲ್ ಯುಕೆ (ಸೇವಾ ಭಾರತಿಯ ಶಾಖೆ) ಇತ್ಯಾದಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ ಇವೆಲ್ಲಾ ದೇಶಗಳಲ್ಲಿ ಶಿಕ್ಷಣ, ದಾನ, ದತ್ತಿ, ಪರಿಹಾರಗಳ ಹೆಸರಿನಲ್ಲಿ ನಿಧಿ ಸಂಗ್ರಹ, ಪ್ರಚಾರ, ಸಭೆ ಮತ್ತಿತರ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿರುತ್ತವೆ. ದೇಣಿಗೆ ಧನಸಹಾಯಗಳನ್ನು ಕೇವಲ ಅನಿವಾಸಿ ಭಾರತೀಯರಿಂದಷ್ಟೇ ಅಲ್ಲ; ಸಿಸ್ಕೊ, ಸನ್, ಆರಕಲ್, ಎಚ್‌ಪಿ ಮೊದಲಾದ ವಿದೇಶೀ ಕಂಪೆನಿಗಳಿಂದಲೂ ಪಡೆಯಲಾಗುತ್ತದೆ. ಹೀಗೆ ಸಂಗ್ರಹಿಸಲಾಗುವ ಬೃಹತ್ತಾದ ಮೊತ್ತಗಳ ಸಿಂಹಪಾಲು ನೇರವಾಗಿ ಬಂದುಬೀಳುವುದೇ ಭಾರತದ ಹಿಂದೂತ್ವವಾದಿ ಸಂಸ್ಥೆಗಳ ಖಜಾನೆಗೆ.

ಸೇವಾ ಇಂಟರ್‌ನ್ಯಾಷನಲ್ ಯುಕೆ ಇದರ ವಾರ್ಷಿ ಆದಾಯ 2000ನೆ ಇಸವಿಯಲ್ಲಿ 7,48,35 ಪೌಂಡುಗಳಿದ್ದರೆ 2002ರಲ್ಲಿ ಅದು 21,75,971 ಮೊತ್ತವನ್ನು ತಲುಪಿತ್ತು. ಅದು 2001ರ ಗುಜರಾತ್ ಭೂಕಂಪದ ವೇಳೆ ಸಂಗ್ರಹಿಸಿದ್ದ 4.3 ಮಿಲಿಯನ್ ಪೌಂಡುಗಳಲ್ಲಿ ಅಧಿಕಾಂಶವನ್ನು ಕೇವಲ ಒಂದು ನಿರ್ದಿ ಜನವರ್ಗದ (ಹಿಂದೂ) ಮರುವಸತಿ ಕಾರ್ಯಕ್ರಮಗಳಿ ಬಳಸಲಾಗಿತ್ತು, ಇನ್ನು 92,000 ಪೌಂಡು ಪಡೆದುಕೊಂ ವನವಾಸಿ ಕಲ್ಯಾಣ ಆಶ್ರಮ 2002ರ ಗುಜರಾತ್ ದಂಗೆಗಳ ಭಾಗವಹಿಸಿರುವ ಆರೋಪ ಎದುರಿಸುತ್ತಿದೆ.

ಅಮೆರಿಕಾದಲ್ಲಿ ಹಿಂದೂ ಸ್ವಯಂಸೇವಕ ಸಂ ಅಮೆರಿಕಾ, ವಿಶ್ವ ಹಿಂದೂ ಪರಿಷತ್ ಅಮೆರಿಕಾ, ಹಿಂದ ಸ್ಟೂಡೆಂಟ್ಸ್ ಕೌನ್ಸಿಲ್, ಇಂಡಿಯಾ ಡೆವಲಪ್‌ಮೆಂಟ್ ಆಂ ರಿಲೀಫ್ ಫಂಡ್ (ಐಡಿಆರ್‌ಎಫ್) ಇವೇ ಮುಂತಾ ಸಂಸ್ಥೆಗಳನ್ನು ಹುಟ್ಟುಹಾಕಲಾಗಿದೆ. 1990-97 ಅವಧಿಯಲ್ಲಿ ವಿಹಿಂಪ ಅಮೆರಿಕಾದ ಸರಾಸರಿ ವಾರ್ಷಿ ಆದಾಯ 3,85,462 ಡಾಲರುಗಳಷ್ಟಿದ್ದರೆ 1993ರ ಅದು 10,57,147ಕ್ಕೇರಿತ್ತು. ಐಡಿಆರ್‌ಎಫ್ ಎಂಬ ಸ ಸೇವಾ ಭಾರತಿಯ ಶಾಖೆಯಾಗಿದ್ದು ಅದನ್ನು 1989ರ ಮೇರಿಲ್ಯಾಂಡ್ ರಾಜ್ಯದಲ್ಲಿ ಸ್ಥಾಪಿಸಲಾಗಿದೆ.

## ಐಡಿಆರ್‌ಎಫ್‌ನ ಚಟುವಟಿಕೆಗಳು

ಚಂದಾ ಎತ್ತಲು ಐಡಿಆರ್‌ಎಫ್ ವಿವಿಧ ವಿಧಾನಗಳ ಬಳಸುತ್ತದೆ. ಸಂಗ್ರಾಹಕರಲ್ಲಿ ಹೆಚ್ಚಿನವರು ಸಾಫ್ಟ್‌ವೇ ಸಂಸ್ಥೆಗಳಲ್ಲಿ ನೌಕರಿ ಮಾಡುವ ಅನಿವಾಸಿ ಭಾರತೀಯ ಆಗಿದ್ದಾರೆ. ಅಮೆರಿಕಾದ ಸಿಸ್ಕೊ, ಸನ್ ಮೈಕ್ರೊಸಿಸ್ಟಮ್ ಎಒಎಲ್-ಟೈಮ್ ವಾರ್ನರ್, ಹ್ಯೂಲೆಟ್ ಪಕಾರ ಮೊದಲಾದ ಕಾರ್ಪೋರೇಟ್‌ಗಳಿಂದ ಹಣ ಸಂಗ್ರಹಿಸ ಐಡಿಆರ್‌ಎಫ್ ಅದನ್ನು ಭಾರತದ ವಿವಿಧ ರಾಜ್ಯಗಳಲ್ಲಿ ನಿರ್ದಿಷ್ಟ ಸಂಘಟನೆಗಳಿಗೆ ರವಾನಿಸುತ್ತದೆ. 'ದ್ವೇಷಕ್ಕೆ ದೇ ನೀಡುವಿಕೆಯನ್ನು ತಡೆಯುವ' ಆಂದೋಲನವು (St Funding Hate, ಎಸ್‌ಎಫ್‌ಎಚ್) ಇದರ ಹಲವಾರು ವಿವರಗಳನ್ನು ಕಲೆಹಾಕಿ ವರದಿ ರೂಪ ಪ್ರಕಟಿಸಿದೆ. ಈ ವರದಿಗೆ ಆಧಾರವಾಗಿರುವ ಐಡಿಆರ್‌ಎಫ್‌ನ ತೆರಿಗೆ ವಿವರಗಳು, ಆರೆಸ್ಸೆಸ್‌ನ ಸುದ್ದಿ 'ಸಂಘ ಸಂದೇಶ'ದಲ್ಲಿ ಪ್ರಕಟವಾದ ವರದಿಗಳು ವ ಭಾರತ ಮತ್ತು ವಿದೇಶಗಳಲ್ಲಿ ಕಾರ್ಯಾಚರಿಸುತ್ತಿ ಸಂಘ ಪರಿವಾರದ ಇನ್ನಿತರ ಅಂಗಸಂಸ್ಥೆಗಳ ವರದಿ ಐಡಿಆರ್‌ಎಫ್‌ನ ಅನೇಕ ಪದಾಧಿಕಾರಿಗಳು ಭಾ ಸಂಘಪರಿವಾರಕ್ಕೆ ಸೇರಿದ ಸಂಸ್ಥೆಗಳೊಂ ಗುರುತಿಸಿಕೊಂಡಿದ್ದಾರೆಂದು ಎಸ್‌ಎಫ್‌ಎಚ್ ಹೇಳುತ್ತದೆ. ಐಡಿಆರ್‌ಎಫ್‌ನ ಸಂಸ್ಥಾಪಕರಲ್ಲೊಬ್ಬನಾದ ಅಗ್ನಿಹೋತ್ರಿ ಎಂಬಾತ ಆರೆಸ್ಸೆಸ್‌ನ ಸೈದ್ಧಾಂತಿಕನೂ, ಹಿ ಸ್ವಯಂಸೇವಕ ಸಂಘದ ನಾಯಕನೂ ಆಗಿ




ಈ ಪುಸ್ತಕವನ್ನು ಆಧರಿಸಿ ಎನ್‌ಜಿಓಗಳ ವಿರುದ್ಧ ಐಬಿ ವರದಿ ತಯಾರಿಸಿದೆ

ಎಫ್‌ಎಚ್ ವರದಿಯ ಕೆಲವು ಮುಖ್ಯಾಂಶಗಳು ಇಲ್ಲಿವೆ: 2000ನೆ ಇಸವಿ ಒಂದರಲ್ಲೇ ಐಡಿಆರ್‌ಎಫ್ ಮೂಲಕ ಪರಿವಾರದ ವನವಾಸಿ ಕಲ್ಯಾಣ ಆಶ್ರಮ ಮತ್ತು ತರ ಅಂಗಸಂಸ್ಥೆಗಳಿಗೆ ಸುಮಾರು 1.7 ಮಿಲಿಯನ್ ಲರುಗಳನ್ನು ಕಳುಹಿಸಲಾಗಿದೆ. 1994ರಿಂದ 2001ರ ನ 7 ವರ್ಷಗಳ ಅವಧಿಯಲ್ಲಿ ಪರಿಹಾರ ಮತ್ತು ವೃದ್ಧಿಯ ಹೆಸರಿನಲ್ಲಿ 5 ಮಿಲಿಯನ್ ಡಾಲರುಗಳಿಗೂ ಕ ಮೊತ್ತವನ್ನು ಸುಮಾರು 184 ಸಂಘಸಂಸ್ಥೆಗಳಿಗೆ ಗಳಲ್ಲಿ 6 ಅಮೆರಿಕಾ ನೆಲೆಯವು. 1 ಕೆನಡಾದಲ್ಲಿದೆ. ಸುಮಾರು 177 ಸಂಸ್ಥೆಗಳು ಭಾರತದ ವಿವಿಧ ್ಯಗಳಲ್ಲಿವೆ) ವಿತರಿಸಲಾಗಿದೆ. ಕರ್ನಾಟಕದ ಾಹರಣೆಯನ್ನು ತೆಗೆದುಕೊಂಡರೆ ವಿವೇಕಾನಂದ ಗಿರಿಜನ ದ, ಶ್ರೀರಾಮ ವಿಠಲ ಟ್ರಸ್ಟ್, ಶ್ರೀ ಕೊತ್ತಲ ವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಶ್ರೀ ಚೆನ್ನಕೇಶವ ಟಾಚಲಿ, ಸೇವಾ ಇನ್ ಆಕ್ಷನ್, ರಾಷ್ಟ್ರೋತ್ಥಾನ ಷತ್, ಸಂಸತ ಭಾರತಿ, ಪ್ರಜಕ ಸೇವಾ ಟ್ರಸ್ಟ್, ೋಧಿನಿ ಟ್ರಸ್ಟ್, ನಿತ್ಯಗ್ರಾಮ, ನ್ಯಾಷನಲ್ ಎಜುಕೇಷನಲ್ ಸೈಟಿ, ಮಂಗಳ ಸೇವಾ ಸಮಿತಿ ಟ್ರಸ್ಟ್, ಕೃಷಿ ಪ್ರಯೋಗ ವಾರ, ಕೇಶವ ಸ್ಮೃತಿ ಸಂವರ್ಧನ ಸಮಿತಿ, ಹಿಂದೂ ಪ್ರತಿಷ್ಠಾನ, ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಡ್ವಾನ್ಸ್‌ಡ್ ಕಂಪ್ಯೂಟಿಂಗ್, ಭಾರತೀಯ ಶಿಕ್ಷಣ ರ ಸಮಿತಿ, ಆತ್ಮ ದರ್ಶನ ಯೋಗಾಶ್ರಮ, ಏಯ್ಡ್ ವೀಕರ್ ಟ್ರಸ್ಟ್ ಮುಂತಾದ ಸಂಸ್ಥೆಗಳಿಗೆ ಸಿಕ್ಕಿರುವ ವನ್ನು ಲೆಕ್ಕಹಾಕಿದರೆ ಒಟ್ಟು ಮೊತ್ತ 2,20,090 ಲರುಗಳಷ್ಟಾಗುತ್ತದೆ.

1994-2001ರ ಅವಧಿಯಲ್ಲಿ ವಿತರಿಸಲಾದ ಒಟ್ಟು ಪ್ಲಸ್ ಮಿಲಿಯನ್ ಡಾಲರುಗಳ ಪೈಕಿ 44,67,605 ಲರುಗಳ ವಿತರಣೆ ಕುರಿತಂತೆ ವಿವರಗಳು ಐಡಿಆರ್ ನ ವಾರ್ಷಿಕ ವರದಿಗಳಲ್ಲಿವೆ. ಈ 44,67,605 ಲರುಗಳಲ್ಲಿ ಐಡಿಆರ್‌ಎಫ್‌ನ ನೇರ ನಿಯಂತ್ರಣದ ದು 32,59,980 ಡಾಲರುಗಳು. ಮಿಕ್ಕ ದುಡ್ಡು ಗಳಿಂದಲೆ ನೇರವಾಗಿ ವಿತರಿಸಲ್ಪಟ್ಟಿದೆ.

ಐಡಿಆರ್‌ಎಫ್ ಭಾರತಕ್ಕೆ ಕಳುಹಿಸಿರುವ 32,59,980 ಲರುಗಳಲ್ಲಿ ಶೇಕಡಾ 82.4ರಷ್ಟು ಸಂಘ ಪರಿವಾರಕ್ಕೂ, ಡಾ 8.1ರಷ್ಟು ಹಿಂದೂ ಧಾರ್ಮಿಕ ಸಂಸ್ಥೆಗಳಿಗೂ ಕಿದೆ. ಇನ್ನುಳಿದಂತೆ 2.2% ಜಾತ್ಯತೀತ ಸಂಸ್ಥೆಗಳಿಗೆ ಾಗಿದ್ದರೆ ಹೆಸರಿಲ್ಲದ ಸಂಸ್ಥೆಗಳಿಗೆ 7.1% ನೀಡಲಾಗಿದೆ.

ಆ 32,59,980 ಡಾಲರುಗಳನ್ನು ಈ ಕೆಳಗಿನ ಟುವಟಿಕೆಗಳಿಗೆ ವ್ಯಯಿಸಲಾಗಿದೆ:

| ಟುವಟಿಕೆ | ಶೇಕಡಾವಾರು ಖರ್ಚು |
|---|---|
| ಣ/ಬುಡಕಟ್ಟು/ಸಾಂಸ್ಕೃತಿಕ | 69% |
| ರ್ಮಿಕ | 1.8% |
| ಪದಿ | 3.9% |
| ೋಗ್ಯ/ಕಲ್ಯಾಣ | 7.6% |
| ಹಾರ | 15.2% |
| ಲ್ಲದ ಚಟುವಟಿಕೆಗಳಿಗೆ | 2.4% |

ಐಡಿಆರ್‌ಎಫ್‌ನಿಂದ ನಿರಂತರವಾಗಿ ಹಣ ಪಡೆಯುತ್ತಿರುವ ಇತರ ಕೆಲವು ಸಂಘಟನೆಗಳೆಂದರೆ ಬಿಹಾರದ ಭಾರತಿ, ತಮಿಳುನಾಡಿನ ಸ್ವಾಮಿ ವಿವೇಕಾನಂದ ರೋಗಾಭಿವೃದ್ಧಿ ಸಂಘ, ನವದೆಹಲಿಯ ಸೇವಾ ಭಾರತಿ, ಟಕದ ಜನಸೇವಾ ವಿದ್ಯಾ ಕೇಂದ್ರ, ಉತ್ತರಪ್ರದೇಶದ ಸಿ, ವನವಾಸಿ ಸೇವಾ ಪ್ರಕಲ್ಪ, ಮಹಾರಾಷ್ಟ್ರದ ಜಿ. ರದ ವನವಾಸಿ ವಸತಿಗೃಹ ಮತ್ತು ಬುಡಕಟ್ಟು ಗಳಲ್ಲಿನ ಏಕಲ್ ವಿದ್ಯಾಲಯಗಳು ಇತ್ಯಾದಿ. ಸಂಸ್ಥಾ ನೋಡಿದರೆ ಪರಿಹಾರ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ವಿದೇಶಿ ಸಂಸ್ಥೆಗಳಿಂದ ಎತ್ತಲಾದ ದುಡ್ಡಿನಲ್ಲಿ ಸಿಂಹಪಾಲು ಲಭಿಸಿರುವುದು ಮರುಮತಾಂತರ ಮತ್ತಿತರ ಕೋಮುವಾದಿ ಕಾರ್ಯಾಚರಣೆಗಳಲ್ಲಿ ತೊಡಗಿರುವ ಸಂಘ ಪರಿವಾರಕ್ಕೆ. ಜಾತ್ಯತೀತ ಸಂಘಟನೆಗಳಿಗೆ ಸಿಕ್ಕಿರುವುದು ತೀರಾ ಅತ್ಯಲ್ಪ.

## ಸಂಘ ಪರಿವಾರ ಮತ್ತು ಭಾರತದ ಸಂವಿಧಾನ


ಭಾರತದ ಸಂವಿಧಾನವನ್ನು ಸಂಘ ಪರಿವಾರ ಮೊದಲಿನಿಂದಲೂ ವಿರೋಧಿಸುತ್ತಾ ಬಂದಿದೆ. ಅದರ ಪ್ರಕಾರ ಭಾರತಕ್ಕೆ ಮನುಧರ್ಮವೇ ಯೋಗ್ಯವಾಗಿದೆ. ಸಂವಿಧಾನ ರಚನಾ ಸಭೆಯು ಭಾರತದ ಸಂವಿಧಾನವನ್ನು ಸಿದ್ಧಪಡಿಸಿದಾಗ ಆರೆಸ್ಸೆಸ್ ಪ್ರಕಟಣೆಯಾದ 'ಆರ್ಗನೈಸರ್' ಪತ್ರಿಕೆ ಅದರ ನವೆಂಬರ್ 30, 1949ರ ಸಂಪಾದಕೀಯದಲ್ಲಿ "ಆದರೆ ನಮ್ಮ ಸಂವಿಧಾನದಲ್ಲಿ ಪ್ರಾಚೀನ ಭಾರತದ ಅನನ್ಯ ಸಾಂವಿಧಾನಿಕ ವಿಕಾಸದ ಕುರಿತು ಹೇಳಲಾಗಿಲ್ಲ. ಮನುವಿನ ಕಾನೂನುಗಳು ಸ್ಪಾರ್ಟಾದ ಲೈಕರ್ಗಸ್ ಅಥವಾ ಪರ್ಷಿಯದ ಸೊಲೊನ್‌ಗಿಂತಲೂ ಬಹಳ ಹಿಂದೆಯೇ ಬರೆಯಲ್ಪಟ್ಟಿವೆ. ಮನುಸ್ಮೃತಿಯಲ್ಲಿ ನಿರೂಪಿಸಲಾದ ಮನುವಿನ ಕಾನೂನುಗಳು ಇಂದಿಗೂ ವಿಶ್ವದ ಶ್ಲಾಘನೆಗೆ ಪಾತ್ರವಾಗಿವೆಯಲ್ಲದೆ ಸ್ವಯಂಪ್ರೇರಿತವಾಗಿ ವಿಧೇಯತೆಯಿಂದ ಅನುಸರಿಸಲ್ಪಡುತ್ತವೆ. ಆದರೆ ನಮ್ಮ ಸಂವಿಧಾನ ಪಂಡಿತರಿಗೆ ಇವೆಲ್ಲವೂ ನಗಣ್ಯವಾದುವು" ಎಂದು ಬರೆದಿತ್ತು.

ಆರೆಸ್ಸೆಸ್ ನಿಲವನ್ನು 'ಗುರು' ಗೋಲ್ವಲ್ಕರ್ ತನ್ನ 'ಬಂಚ್ ಆಫ್ ಥಾಟ್ಸ್'ನಲ್ಲಿ ಸ್ಪಷ್ಟಪಡಿಸಿದ್ದಾರೆ: "ನಮ್ಮ ಸಂವಿಧಾನವೂ ಕೇವಲ ಪಾಶ್ಚಾತ್ಯ ದೇಶಗಳ ವಿವಿಧ ಸಂವಿಧಾನಗಳಿಂದ ಆಯ್ದ ವಿವಿಧ ಕಲಮುಗಳನ್ನು ಕ್ಲಿಷ್ಟಕರವಾಗಿ, ಒಂದಕ್ಕೊಂದು ಸಂಬಂಧವಿಲ್ಲದಂತೆ ಜೋಡಿಸಿ ಮಾಡಿರುವುದಾಗಿದೆ. ಅದರಲ್ಲಿ ನಮ್ಮದೇ ಎನ್ನುವಂಥಾದ್ದು ಏನೇನೂ ಇಲ್ಲ. ಅದರ ಮಾರ್ಗದರ್ಶಿ ಸೂತ್ರಗಳಲ್ಲಿ ನಮ್ಮ ರಾಷ್ಟ್ರೀಯ ಗುರಿಯೇನು ಮತ್ತು ಜೀವನದ ಕೇಂದ್ರವಸ್ತು ಏನೆಂಬುದರ ಕುರಿತು ಒಂದಾದರೂ ಶಬ್ದವನ್ನು ಉಲ್ಲೇಖಿಸಲಾಗಿದೆಯೇ ಇಲ್ಲ."

2000ನೆ ಇಸವಿಯ ಆಗಸ್ಟ್ 14ರಂದು ಬಿಬಿಸಿ ರೇಡಿಯೊದ 'ಹಾರ್ಡ್ ಟಾಕ್ ಇಂಡಿಯ' ಕಾರ್ಯಕ್ರಮದಲ್ಲಿ ಕರಣ್ ಥಾಪರ್ ಜೊತೆ ಮಾತನಾಡಿದ ಅಂದಿನ ಸರಸಂಘಚಾಲಕ ಕೆ.ಎಸ್.ಸುದರ್ಶನ್ "ನಾವು ಅಲ್ಪಸಂಖ್ಯಾತರ ಪರಿಕಲ್ಪನೆಯನ್ನು ಸರ್ವಥಾ ಒಪ್ಪುವುದಿಲ್ಲ .....ಅಲ್ಪಸಂಖ್ಯಾತರು ಬಹುಸಂಖ್ಯಾತರ 'ಸಂಸ್ಕೃತಿ'ಯನ್ನು ಒಪ್ಪಿಕೊಳ್ಳಬೇಕು. ಸಂವಿಧಾನವು ಜನರ ಸಂಸ್ಕಾರವನ್ನು ಪ್ರತಿಬಿಂಬಿಸುತ್ತಿಲ್ಲ...ನಾವು ನಮ್ಮದೇ ಆದ ಸಂವಿಧಾನವನ್ನು ರೂಪಿಸಬೇಕಾಗಿದೆ" ಎಂದಿದ್ದರು.

ದೇಶದ ಸಾಂವಿಧಾನಿಕ ವ್ಯವಸ್ಥೆಯ ನ್ಯಾಯಬದ್ಧತೆಯನ್ನು ಬಹಿರಂಗವಾಗಿ ತಿರಸ್ಕರಿಸಿರುವ ಆರೆಸ್ಸೆಸ್‌ಗೆ ದೇಶಾದ್ಯಂತ ಮುಕ್ತವಾಗಿ ಕಾರ್ಯಾಚರಿಸುವ ಸ್ವಾತಂತ್ರ್ಯವನ್ನು ನೀಡಿದ ನಮ್ಮ ಹಿಂದಿನ ಸರ್ಕಾರಗಳು ಅಕ್ಷಮ್ಯ ಪ್ರಮಾದ ಎಸಗಿವೆ. ಅದರ ದುಷ್ಪರಿಣಾಮವನ್ನು ದೇಶ ಕಳೆದ ಹಲವು ದಶಕಗಳಿಂದ ಉಣ್ಣುತ್ತಾ ಬಂದಿದೆ. ಸ್ವಾತಂತ್ರ್ಯಾಪೂರ್ವದಲ್ಲಿ ಹಾಗೂ ಸ್ವಾತಂತ್ರ್ಯಾನಂತರದಲ್ಲಿ ದೇಶಾದ್ಯಂತ ಸಂಭವಿಸಿರುವ ಅನೇಕಾನೇಕ ಕೋಮು ಗಲಭೆಗಳಿಗೆ ಸಂಘ ಪರಿವಾರವೇ ನೇರ ಹೊಣೆಯೆಂದು ಹಲವಾರು ಆಯೋಗಗಳ ವರದಿಗಳು ಹೇಳಿವೆ. ಇಂದು ಪರಿವಾರದ ಕೆಲವು ಸಂಘಟನೆಗಳು ಭಯೋತ್ಪಾದನೆಯ ಆರೋಪ ಎದುರಿಸುತ್ತಿರುವುದು ಗುಟ್ಟಿನ ಸಂಗತಿಯೇನೂ ಅಲ್ಲ. ಮಾಲೆಗಾಂವ್, ಮಕ್ಕಾಮಸೀದಿ, ಅಜ್ಮೀರ ದರ್ಗಾ, ಸಂಜೋತಾ ಎಕ್ಸ್‌ಪ್ರೆಸ್ ಮುಂತಾದ ಬಾಂಬ್ ಸ್ಫೋಟ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ ಈಗಾಗಲೆ ಪರಿವಾರದ ವಿವಿಧ ಸಂಘಟನೆಗಳ ಸದಸ್ಯರ ವಿರುದ್ಧ ಹಲವಾರು ಪ್ರಕರಣಗಳನ್ನು ದಾಖಲಿಸಿರುವ ವಿಚಾರ ವಿಸ್ತೃತವಾಗಿ ವರದಿಯಾಗಿದೆ.

ಹೀಗೆ ವಿದೇಶಗಳಿಂದ ಮಿಲಿಯಾಂತರ ಡಾಲರ್ ದೇಣಿಗೆ ಸಂಗ್ರಹಿಸಿ ಅದನ್ನು ಭಾರತೀಯ ಸಂವಿಧಾನದ ಪ್ರತಿಷ್ಠಾಪಿತ ಮೌಲ್ಯಗಳಿಗೆ ವಿರುದ್ಧವಾಗಿ ಬಳಸುತ್ತಿರುವ ಸಂಘ ಪರಿವಾರದ ಚಟುವಟಿಕೆಗಳು ದೇಶದ ಆಂತರಿಕ ಭದ್ರತೆಗೆ ಅಪಾಯ ಕಾರಿಯಲ್ಲವೇ? ಆದರೆ ನಮ್ಮ ಗುಪ್ತಚರ ಇಲಾಖೆಗೆ ಹಾಗನಿಸುತ್ತದೆಯೇ, ಅದು ಕಾರ್ಯ ಪ್ರವೃತ್ತವಾಗುವುದೇ ಎಂಬುದೀಗ ಮಿಲಿಯನ್ ಡಾಲರ್ ಪ್ರಶ್ನೆ!



● ಸುರೇಶ್ ಭಟ್ ಬಾಕ್ರಬೈಲ್

ಆಧಾರ: *'IB's NGO-scare report to Modi plagiarises from old Modi speech'* ಜೈ ಮಜೂಂದಾರ್, ಇಂಡಿಯನ್ ಎಕ್ಸ್‌ಪ್ರೆಸ್ 13.6.2014; *The Foreign Hand,* ನವನಿಧಿ ಕೌರ್; *MASUM* (ಬಾಂಗ್ಲಾರ್ ಮಾನಬಾಧಿಕಾರ್ ಸುರಕ್ಷಾ ಮಂಚ್) ಹೇಳಿಕೆ?

# 'ಲಿಂಗಸಾಧಕರೆಲ್ಲರೂ ಭೂಭಾರಕರಾದರು'

ಕವಿತ್ವ ಸಾಧಕರೆಲ್ಲರೂ ಕಳವಳಿಸಿ ಹೋದರು
ವಿದ್ಯಾಸಾಧಕರೆಲ್ಲರೂ ಬುದ್ಧಿಗೆಟ್ಟರು
ತತ್ತ್ವಸಾಧಕರೆಲ್ಲರೂ ಭಕ್ತಿಹೀನರಾದರು
ಲಿಂಗಸಾಧಕರೆಲ್ಲರೂ ಭೂಭಾರಕರಾದರು
ಕೂಡಲಚೆನ್ನಸಂಗಮದೇವಯ್ಯಾ
ನಿಮ್ಮ ಬಸವಣ್ಣ ಜಂಗಮಸಾಧಕನಾಗಿ
ಸ್ವಯಂಲಿಂಗವಾದನು.
- ಚೆನ್ನಬಸವಣ್ಣನವರು

ವಚನಗಳೆಲ್ಲ ಸಮಾಜಮುಖಿಯಾಗಿವೆ. ತಾವು ಕಟ್ಟಬಯಸಿದ ಸಮಾಜಕ್ಕೆ ಬೇಕಾದ ಧರ್ಮ, ದರ್ಶನ, ಸಾಹಿತ್ಯ ಮತ್ತು ಬದುಕನ್ನು ರೂಪಿಸುವ ವಿದ್ಯೆಯ ಕುರಿತು ಶರಣರು ವಚನಗಳಲ್ಲಿ ಸೂಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಚೆನ್ನಬಸವಣ್ಣನವರು ಬರೆದ ಸಮಾಜವಿಮರ್ಶಾ ವಚನವಿದು. ಬದುಕಿಗಾಗಿ ಬೇಕಾದ ಸಾಹಿತ್ಯ, ವಿದ್ಯೆ, ತತ್ತ್ವದರ್ಶನ ಮತ್ತು ಧರ್ಮಾಚರಣೆಗಳು ಕೇವಲ ನುಡಿಯ ರೂಪದಲ್ಲೇ ಉಳಿದು ನಡೆಯಲ್ಲಿ ಅಳವಡದಿದ್ದರೆ ನಿಷ್ಪ್ರಯೋಜಕವಾಗುವುದು ಎಂಬುದು ಚೆನ್ನಬಸವಣ್ಣನವರ ಎಚ್ಚರಿಕೆಯಾಗಿದೆ.

ಶೋಷಣೆಯ ಸಮಾಜದಲ್ಲಿ ಬಡವರು ಅನೇಕ ತೆರನಾದ ಕಷ್ಟನಷ್ಟಗಳನ್ನು ಅನುಭವಿಸುತ್ತ ಭಾರವಾದ



ಬದುಕನ್ನು ಸಾಗಿಸುತ್ತಿದ್ದಾರೆ. ಅವರ ಪಾಡನ್ನು ಕವಿಗಳು ಸಂವೇದನಾಶೀಲರಾಗಿ ಅರ್ಥೈಸಿಕೊಳ್ಳುತ್ತ ತಳಮಳಗೊಳ್ಳುತ್ತಾರೆ, ಕಸಿವಿಸಿಯಿಂದ ಆತಂಕಗೊಳ್ಳುತ್ತಾರೆ, ಕಾತರದಿಂದ ಚಿಂತೆಗೀಡಾಗಿ ಮರುಗುತ್ತಾರೆ. ಹೀಗೆ ವ್ಯಾಕುಲಗೊಂಡು ತಮ್ಮ ಕಾವ್ಯದಲ್ಲಿ ಕರುಣಾರಸವನ್ನೇ ಹರಿಸಿ ಸಹೃದಯರ ಹೃದಯತಟ್ಟುತ್ತಾರೆ. ಆದರೆ ನಡೆಯಲ್ಲಿ ಮಾಯವಾಗುತ್ತಾರೆ!


ವಿದ್ಯಾಸಾಧಕರಿಗೆ ವಿದ್ಯೆಯ ಸಾಧನೆಯೆ ಗುರಿಯಾಗಿರುತ್ತದೆ. ಆ ಗುರಿ ಸಾಧನೆಯಾದ ಮೇಲೆ ಅದುವೇ ಸಂಪತ್ತನ್ನು ಗಳಿಸುವ ಯಂತ್ರವಾಗುತ್ತದೆ. ಧನಮದದಿಂದಾಗಿ ಲೋಕದ ತಲ್ಲಣಗಳ ಬಗ್ಗೆ ಅವರಿಗೆ ಯಾವುದೇ ಕಾಳಜಿ ಉಳಿಯುವುದಿಲ್ಲ. ಹೀಗೆ ಅವರು ಸಾಮಾಜಿಕ ಪ್ರಜ್ಞೆಯನ್ನು ಕಳೆದುಕೊಂಡು ಐಹಿಕ ಜೀವನವನ್ನೇ ನಂಬಿ ಬುದ್ಧಿಗೆಟ್ಟು ಹೋಗುತ್ತಾರೆ.

ತತ್ತ್ವಸಾಧಕರೆಲ್ಲ ತಮ್ಮ ತಮ್ಮ ತತ್ತ್ವಗಳೇ ಅಂತಿಮ ಸತ್ಯ ಎಂಬುದನ್ನು ಸಾಧಿಸುವುದರಲ್ಲೇ ಬದುಕನ್ನು ಸವೆಸುತ್ತಾರೆ. ಈ ತತ್ತ್ವಸಾಧಕರಿಗೆ ಜನ ಎಂಥ ದುರಂತ ಬದುಕನ್ನು ಬದುಕುತ್ತಿದ್ದಾರೆ ಎಂಬುದರ ಅರಿವೇ ಇರುವುದಿಲ್ಲ. ತಾವಾಯಿತು ತಮ್ಮ ತತ್ತ್ವಸಿದ್ಧಾಂತವಾಯಿತು. ತಮ್ಮ ತತ್ತ್ವವನ್ನು ಪ್ರತಿಪಾದನೆ ಮಾಡಲು ರಾಜರು ಮತ್ತು ಧನಾಢ್ಯರು ಅವರಿಗೆ ಎಲ್ಲ ರೀತಿಯಿಂದ ವ್ಯವಸ್ಥೆ ಮಾಡುತ್ತಿದ್ದರು. ರಾಜಾಶ್ರಯ ಪಡೆದ ಅವರಿಗಾಗಿ ಆಯಾ ಮತಗಳಿಗೆ ಸಂಬಂಧಿಸಿದ ಗ್ರಂಥಭಂಡಾರ, ಸುವ್ಯವಸ್ಥಿತ ನಿವಾಸ, ಧನಕನಕ, ಜಮೀನು, ಆಳುಕಾಳು ಮುಂತಾಗಿ ಎಲ್ಲದರ ವ್ಯವಸ್ಥೆಯಾಗುತ್ತಿತ್ತು. ಅನ್ಯ ಮತದವರೊಂದಿಗೆ ವಾಗ್ವಾದ ಮಾಡುತ್ತ ತಮ್ಮ ಮತದ ಪ್ರಾಬಲ್ಯವನ್ನು ಸ್ಥಾಪಿಸುವುದೇ ಅವರ ಉದ್ಯೋಗವಾಗಿತ್ತು. ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತ, ಅಚಿಂತ್ಯವಾದ, ನಿರೀಶ್ವರವಾದ, ನಿರ್ಗುಣ ಬ್ರಹ್ಮ, ಸಗುಣ ಬ್ರಹ್ಮ ಹೀಗೆ ಅನೇಕ ಧರ್ಮ, ದರ್ಶನ, ತತ್ತ್ವ ಮತ್ತು ಸಿದ್ಧಾಂತಗಳ ಕುರಿತು ನಿರಂತರ ವಿಚಾರ ಮಂಡಿಸುವುದರಲ್ಲಿ ಮತ್ತು ಖಂಡಿಸುವುದರಲ್ಲಿ ಇವರೆಲ್ಲ ತಲ್ಲೀನರಾಗಿದ್ದರು. ಈ ವಾಗ್ವಾದಗಳು ತಲೆತಲಾಂತರದವರೆಗೆ ಮುಂದೆ ಸಾಗುತ್ತಿದ್ದವು. ಆಯಾ ಮತಗಳ ಪ್ರತಿಪಾದಕರ ಮನೆತನಗಳು ಈ ಮಂಡನ-ಖಂಡನ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದವು. ಹೀಗಾಗಿ ಅವರೆಲ್ಲ ಮಾನವರ ನೈಜಬದುಕಿನ ಸಂಕಷ್ಟಗಳನ್ನು ಮರೆತು ಭಕ್ತಿಹೀನರಾದರು. 'ಸರ್ವಸಮತ್ವದಿಂದಿರೆ ಭಕ್ತಿ' ಎಂಬುದು ಭಕ್ತಿಯ ವ್ಯಾಖ್ಯಾನ. ಜೀವಕಾರುಣ್ಯದ ತುಡಿತವಿಲ್ಲದೆ ಸರ್ವಸಮತ್ವದ ಅರಿವು ಮೂಡದು. ಆದ್ದರಿಂದ ಜೀವಕಾರುಣ್ಯದ ಅರಿವೇ ಭಕ್ತಿಯಾಗಿದೆ. ಆದರೆ ಈ ವಿವಿಧ ಮತವಾದಿಗಳಿಗೆ ಜೀವಕಾರುಣ್ಯದ ಅರಿವೇ ಆಗಲಿಲ್ಲ. ಜೀವಕಾರುಣ್ಯದ ಮೂಲಕ ಬರುವ ಭಕ್ತಿಯ ಕೊರತೆಯಿಂದಾಗಿ ಅವರೆಲ್ಲ ಭಕ್ತಿಹೀನರೆನಿಸಿದರು.

ಲಿಂಗಸಾಧಕರು ಕೂಡ ತಮ್ಮ ಲಿಂಗ ಸುಖವನ್ನು ಅನುಭವಿಸುತ್ತ ಅದರಲ್ಲೇ ತಲ್ಲೀನರಾಗಿ ಸಮಾಜದಲ್ಲಿನ ದುಃಖವನ್ನೇ ಮರೆತರು. ಹೀಗಾಗಿ ಭೂಮಿಗೆ ಭಾರವಾದರು. ಲಿಂಗವಂತರ ಭಕ್ತಿಯು 'ಉಭಯಕುಳ ಭಕ್ತಿ' ಆಗಿದೆ. ಲಿಂಗವಂತರಿಗೆ ಇಷ್ಟಲಿಂಗ ಪೂಜೆ ಮತ್ತು ಜಂಗಮಲಿಂಗ ಪೂಜೆಗಳು ಕಡ್ಡಾಯವಾಗಿವೆ. ಇಷ್ಟಲಿಂಗ ಪೂಜೆ ಮಾಡಿಕೊಳ್ಳುವುದು ಮತ್ತು ಜಂಗಮಲಿಂಗ ಪೂಜೆ ಮಾಡುವುದು ಪ್ರತಿಯೊಬ್ಬ ಲಿಂಗಾಯತನ ಧರ್ಮಕಾರ್ಯಗಳಾಗಿವೆ. ಪೂಜೆ ಮಾಡಿಕೊಳ್ಳುವುದೆಂದರೆ ತಮ್ಮನ್ನು ತಾವು ಶೂನ್ಯ (ಪೂಜೆ) ಮಾಡಿಕೊಳ್ಳುವುದು. ಅಂದರೆ ತಮ್ಮೊಳಗಿನ ಮಹಾಘನದ ಜೊತೆ ಭಾವಪೂರ್ಣವಾಗಿ ಒಂದಾಗುವುದರ ಮೂಲಕ 'ಶೂನ್ಯರೂಪ' ತಾಳುವುದು. ಹೀಗೆ ಆತ್ಮೋದ್ಧಾರಕ್ಕಾಗಿ ಇಷ್ಟಲಿಂಗಪೂಜೆ ಮಾಡಿಕೊಳ್ಳುವುದೇ ಹೊರತಾಗಿ ಮಾಡಲಿಕ್ಕಾಗಿ ಅಲ್ಲ. ಹೀಗೆ ಅಂತರಂಗ ಶುದ್ಧಿ ಮಾಡಿಕೊಂಡಾಗ ಮಹಾದೇವಿಯಕ್ಕ ಹೇಳುವಂತೆ 'ಲೋಕವೇ ತಾನಾದ ಬಳಿಕ ಏಕಾಂತದ ಹಂಗೇಕಯ್ಯಾ' ಎಂಬ ಭಾವ ಮೂಡುವುದು. ಪೂಜೆ ಮಾಡಿಕೊಳ್ಳುವುದರ ಮೂಲಕ ಅಂತರಂಗಶುದ್ಧಿಯಾದಾಗ, ಆ ಅಂತರಂಗದೊಳಗೆ ವಿಶ್ವ ಎಂಬ ಬಹಿರಂಗವು ತುಂಬಿಕೊಳ್ಳುವುದು. ಆ ಬಹಿರಂಗವೇ ಜಂಗಮ, ಆ ಜಂಗಮವೇ ಸಮಾಜ, ಆ ಸಮಾಜವೇ ದೇವರು. ಆದ್ದರಿಂದಲೇ ಕಾಯಕ, ಪ್ರಸಾದ ಮತ್ತು ದಾಸೋಹ ಪ್ರಜ್ಞೆಯ ಮೂಲಕ ಆ ಸಮಾಜವೆಂಬ ದೇವರ ಪೂಜೆ ಮಾಡಬೇಕಾಗುವುದು.

ಯೋಗ್ಯ ಉತ್ಪಾದನೆಯ ಕಾಯಕ ಮಾಡಬೇಕು. ಕಾಯಕದಿಂದ ಬಂದುದನ್ನು ದೇವರ ಪ್ರಸಾದವೆಂದು ಭಾವಿಸಿ ಹಿತಮಿತವಾಗಿ ಬಳಸಬೇಕು. ಮಿಗುತಾಯವನ್ನು ಸಮಾಜವೆಂಬ ದೇವರಿಗಾಗಿ ಯೋಗ್ಯರೀತಿಯಲ್ಲಿ ವಿತರಣೆ ಮಾಡಬೇಕು. ಹೀಗೆ ಮಾಡಿದಾಗ ಬಹಿರಂಗ ಶುದ್ಧಿಯಾಗುವುದು. ಲಿಂಗವಂತ ಧರ್ಮದಲ್ಲಿ ಅಂತರಂಗ ಶುದ್ಧಿ ಅಷ್ಟೇ ಮುಖ್ಯವಲ್ಲ, ಆ ಅಂತರಂಗ ಶುದ್ಧಿ ಮಾಡಿಕೊಳ್ಳುವುದು ಬಹಿರಂಗ ಶುದ್ಧಿಗಾಗಿ ಕಾರ್ಯೋನ್ಮುಖವಾಗುವುದಕ್ಕಾಗಿ! ಹೀಗೆ ಮಾಡದೆ ಹೋಗುವ ಲಿಂಗಸಾಧಕರೆಲ್ಲ ಭೂಭಾರಕರಾಗುತ್ತಾರೆ.

ಆದರೆ ಕವಿತ್ವಸಾಧಕ, ವಿದ್ಯಾಸಾಧಕ, ತತ್ತ್ವಸಾಧಕ ಮತ್ತು ಲಿಂಗಸಾಧಕರಾಗಿದ್ದ ಬಸವಣ್ಣನವರು ಈ ಎಲ್ಲ ಸಾಧನೆಗಳನ್ನು ಜಂಗಮಸಾಧನೆಗಾಗಿ ಬಳಸಿ ಸ್ವಯಂಲಿಂಗವೇ ಆಗಿದ್ದಾರೆ ಎಂದು ಚೆನ್ನಬಸವಣ್ಣನವರು ಭಾವಪೂರ್ಣವಾಗಿ ಹೇಳಿದ್ದಾರೆ. ಜಂಗಮಸಾಧನೆ ಎಂದರೆ ಶೋಷಣೆಮುಕ್ತ ಸಮಾಜದ ನಿರ್ಮಾಣ ಮಾಡುವುದು. ಬಸವಣ್ಣನವರು ಅಂಥ ಸಮಾಜವಾಗಿದ್ದ ಶರಣಸಂಕುಲವನ್ನು ನಿರ್ಮಿಸಿ ವಿಶ್ವಕ್ಕೇ ಮಾದರಿಯಾದರು. ಈ ಕಾರ್ಯ ಬಹು ಕಠಿಣವಾದುದು. ಅಂತೆಯೆ ಚೆನ್ನಬಸವಣ್ಣನವರು "ಕೂಡಲಚೆನ್ನಸಂಗಮದೇವಯ್ಯಾ ನಿಮ್ಮ ಬಸವಣ್ಣ ಜಂಗಮಸಾಧಕನಾಗಿ ಸ್ವಯಂಲಿಂಗವಾದನು" ಎಂದು ಹೇಳುವಲ್ಲಿ "ನಿಮ್ಮ" ಬಳಸಿ ಬಸವಣ್ಣನವರ ಅನನ್ಯತೆಯನ್ನು ಕೊಂಡಾಡುತ್ತಾರೆ.



ರಂಜಾನ್ ದರ್ಗಾ

# ಅಲ್ಪಸಂಖ್ಯಾತರನ್ನು ರಕ್ಷಿಸುವುದು ಬಹುಸಂಖ್ಯಾತರ ಕರ್ತವ್ಯ



ನಾನು ಅಲಹಾಬಾದಿನ ಹೈಕೋರ್ಟಿನಲ್ಲಿ ನ್ಯಾಯಮೂರ್ತಿಯಾಗಿದ್ದಾಗ ಆಳವಾಗಿ ನಂಬಿರುವ ಒಂದು ನಿಲುವನ್ನು ವ್ಯಕ್ತಪಡಿಸಲು ನನಗೆ ಒಂದು ಅವಕಾಶ ಸಿಕ್ಕಿತ್ತು.

ಏನಾಗಿತ್ತೆಂದರೆ ಉತ್ತರ ಪ್ರದೇಶದ ಒಂದು ಹಳ್ಳಿಯ ಜನಸಂಖ್ಯೆಯಲ್ಲಿ ಶೇ. 90 ಮುಸಲ್ಮಾನರಾಗಿದ್ದು ಉಳಿದ ಶೇ. 10 ಹಿಂದೂಗಳಾಗಿದ್ದರು- ಅದರಲ್ಲೂ ಹೆಚ್ಚಿನವರು ದಲಿತರಾಗಿದ್ದರು.

ಒಂದು ದಿನ ಆ ಹಳ್ಳಿಯ ಮುಸಲ್ಮಾನ ಯುವಕರ ಒಂದು ಗುಂಪು ದಲಿತ ಯುವತಿಯೊಬ್ಬಳನ್ನು ಹಿಡಿದು ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿದ್ದರು. ಟ್ರೈಯಲ್ ಕೋರ್ಟ್ ವಿಚಾರಣೆ ನಡೆಸಿ ಆ ಯುವಕರು ಅಪರಾಧಿಗಳು ಎಂದು ತೀರ್ಪು ನೀಡಿ ಅವರೆಲ್ಲರಿಗೆ ಶಿಕ್ಷೆ ವಿಧಿಸಿತ್ತು. ಆ ತೀರ್ಪಿನ ವಿರುದ್ಧ ಅವರು ಅರ್ಜಿ ಸಲ್ಲಿಸಿದ್ದರಿಂದ ಆ ಪ್ರಕರಣ ಹೈಕೋರ್ಟ್ ಮೆಟ್ಟಿಲನ್ನೇರಿ ನನ್ನ ಮುಂದೆ ಬಂದಿತ್ತು.

ನಾನು ನನ್ನ ತೀರ್ಪಿನಲ್ಲಿ ಯಾವುದೇ ಪ್ರದೇಶದಲ್ಲಿರುವ ಅಲ್ಪಸಂಖ್ಯಾತರು ಗೌರವ ಮತ್ತು ಮರ್ಯಾದೆಯಿಂದ ಜೀವಿಸುವಂತೆ ನೋಡಿಕೊಳ್ಳುವುದು ಆ ಪ್ರದೇಶದಲ್ಲಿಯ ಬಹುಸಂಖ್ಯಾತರ ಕರ್ತವ್ಯವಾಗಿದೆ ಎಂದು ಹೇಳಿದ್ದೆ. ಉತ್ತರ ಪ್ರದೇಶ ರಾಜ್ಯದಲ್ಲಿ ಹಿಂದೂಗಳೇ ಬಹುಸಂಖ್ಯಾತರಾಗಿದ್ದರೂ ಆ ನಿರ್ದಿಷ್ಟ ಹಳ್ಳಿಯಲ್ಲಿ ಮುಸಲ್ಮಾನರೇ ಬಹುಸಂಖ್ಯಾತರಾಗಿದ್ದರು. ಆದ್ದರಿಂದ ಅಲ್ಲಿನ ಹಿಂದೂಗಳು ಗೌರವ ಮತ್ತು ಮರ್ಯಾದೆಯಿಂದ ಜೀವಿಸುವಂತೆ ನೋಡಿಕೊಳ್ಳುವುದು ಆ ಹಳ್ಳಿಯಲ್ಲಿನ ಮುಸಲ್ಮಾನರ ಕರ್ತವ್ಯವಾಗಿತ್ತು. ಆದರೆ ಹಾಗೆ ಮಾಡುವ ಬದಲು ಅಲ್ಲಿನ ಮುಸಲ್ಮಾನ ಯುವಕರು ಹಿಂದೂ ಯುವತಿ ಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿದ್ದರಿಂದ ನಾನು ಅವರೆಲ್ಲರಿಗೆ ಕಠಿಣವಾದ ಶಿಕ್ಷೆಯನ್ನೇ ವಿಧಿಸಿದ್ದೆ.

ಹಾಗೊಮ್ಮೆ ಆ ಹಳ್ಳಿಯಲ್ಲಿ ಹಿಂದೂಗಳೇ ಬಹುಸಂಖ್ಯಾತರಾಗಿದ್ದು ಹಿಂದೂ ಯುವಕರು ಮುಸಲ್ಮಾನ ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿದ್ದರೆ ಆ ಹಿಂದೂ ಯುವಕರಿಗೂ ಅಷ್ಟೇ ಕಠಿಣವಾದ ಶಿಕ್ಷೆಯನ್ನು ವಿಧಿಸುತ್ತಿದ್ದೆ ಎಂದು ನನ್ನ ತೀರ್ಪಿನಲ್ಲಿ ಸ್ಪಷ್ಟಪಡಿಸಿದ್ದೆ.

ನನ್ನ ತರ್ಕದ ಪ್ರಕಾರ ಕಡಿಮೆ ಸಂಖ್ಯೆಯಲ್ಲಿರುವ ಅಲ್ಪಸಂಖ್ಯಾತರು ಬಹುಸಂಖ್ಯಾತರಿಗೆ ಹೋಲಿಸಿದರೆ ದುರ್ಬಲರಾಗಿರುತ್ತಾರೆ. ಆದ್ದರಿಂದ ಅ ಸಮುದಾಯದರಿಗೆ ಆಪತ್ತು ಎದುರಾಗದಂತೆ ಎಚ್ಚರ ವಹಿಸುವುದು ಬಹುಸಂಖ್ಯಾತರ ಗುರುತರ ಹೊಣೆಗಾರಿಕೆ ಆಗಿರುತ್ತದೆ. ಒಂದು ಸಮಾಜ ನಾಗರಿಕ ಸಮಾಜವಾಗಿ ಪರಿಗಣಿಸಲ್ಪಡ ಬೇಕಾದರೆ ಇಂತಹ ಹೊಣೆಗಾರಿಕೆ ಅತ್ಯವಶ್ಯಕ. ಬಹುಸಂಖ್ಯಾತರು ಅಲ್ಪಸಂಖ್ಯಾತರನ್ನು ರಕ್ಷಿಸದೆ ಅವರ ಮೇಲೆ ದೌರ್ಜನ್ಯವನ್ನು ಎಸಗಿದರೆ ಮತ್ಸ್ಯಾಯನ್ಯಾಯ (ದೊಡ್ಡ ಮೀನು ಚಿಕ್ಕ ಮೀನನ್ನು ನುಂಗುವ ಪ್ರಕ್ರಿಯೆ) ಪರಿಸ್ಥಿತಿಯು ಒಂದು ಸಮುದಾಯದಲ್ಲಿ ವಾಸ್ತವವಾಗಿ ದುರಂತ ಸಂಭವಿಸುತ್ತದೆ.

ಮತ್ಸ್ಯಾಯನ್ಯಾಯವನ್ನು ನಮ್ಮೆಲ್ಲ ಪ್ರಾಚೀನ ಚಿಂತಕರು ಮತ್ತು 'ಕೌಟಿಲ್ಯ', 'ಮಹಾಭಾರತ', 'ರಾಮಾಯಣ', 'ಮತ್ಸ್ಯಪುರಾಣ', 'ಕಮಂಡಕ' ಇತ್ಯಾದಿ ಕೃತಿಗಳು ಖಂಡಿಸಿವೆ ಎಂಬುದನ್ನು ಮರೆಯದಿರೋಣ.



ಮಾರ್ಕಂಡೇಯ ಕಾಟ್ಜು
ಸುಪ್ರೀಂ ಕೋರ್ಟಿನ
ನಿವೃತ್ತ ನ್ಯಾಯಮೂರ್ತಿ

---

# ಮೇರಿ...

2ನೇ ಪುಟದಿಂದ

"ಆದರೂ ಪಾಪದ ಹುಡುಗಿ ಬಿಡಿ! ಚೆನ್ನಾಗಿ ಕೆಲಸ ಮಾಡುತ್ತಾಳೆ!"

"ಅದೇನೋ ಸರಿ! ಆದರೂ ಅವಳ ಹೆಸರು ಮಾತ್ರ ಅತೀ ಉದ್ದ ಅನ್ನಿಸಲ್ಲವಾ? ನಾನಾಗಿದ್ದಿದ್ದರೆ ಮೇರಿ ಅಂತ ಕರೀತಿದ್ದೆ!"

ಕೋಪದಲ್ಲಿ ಭುಸುಗುಡುತ್ತಾ ಅಡುಗೆ ಮನೆ ಹೊಕ್ಕೆ. ಮೇರಿಯಂತೆ ಮೇರಿ! ನಿನ್ನ ಮನೆಗೆ ಬಂದ ಕಾಲಕ್ಕೆ ತಾನೆ? ಹೊಟ್ಟೆಗಿಲ್ಲದೇ ಸತ್ತರೂ ನಿನ್ನ ಮನೆ ಬಾಗಿಲು ತಟ್ಟಲಾರೆ ಹೆಣ್ಣೇ! ನಿನ್ನ ಹೃದಯ ಹತ್ತಿ ಉರಿಯುತ್ತಿದ್ದರೂ ಅದರ ಮೇಲೆ ನಾನು ಉಚ್ಚೆ ಹೊಯ್ದು ಆರಿಸಲೂ ತಯಾರಿಲ್ಲ, ತಿಳಿದುಕೋ... ಎಂದು ಧುಮುಗುಡುತ್ತಿರುವಾಗಲೇ ಖೊಳ್ಳನೆಯ ನಗುವಿನ ಅಲೆಗಳು ಜಗಲಿಯಿಂದ ಹರಿದು ಮಿಸ್ ಗ್ಲೋರಿಯ ಅಡುಗೆ ಬಟ್ಟಲುಗಳನ್ನು ತುಂಬಿದವು. ಇಷ್ಟೊಂದು ಕಗ್ಗ ಹೊಡೆಯಲು ಕಾರಣವೇನೋ!

ಈ ಬಿಳಿಯ ಜನರೇ ಒಂತರಾ ವಿಚಿತ್ರವಪ್ಪಾ! ನನ್ನ ಬಗ್ಗೆಯೇ ಗೇಲಿ ಮಾಡಿಕೊಂಡು ನಗುತ್ತಿರಬಹುದೆ? ಅವರಲ್ಲಿ ಭಾರೀ ಒಗ್ಗಟ್ಟಂತೆ. ನಮ್ಮ ನೀಗ್ರೋ ಹೆಂಗಸರಂತಲ್ಲವಂತೆ. ಮಿಸೆಸ್ ಕಲಿನನ್‌ಗೆ ಸೇಂಟ್ ಲೂಯಿಸ್‌ನಲ್ಲಿ ಸ್ನೇಹಿತೆಯರಿರಬಹುದು. ಅವರಲ್ಲೊಬ್ಬಳು ಪತ್ರ ಬರೆದು ಸ್ಟಾಂಪ್ಸ್‌ನಲ್ಲಿ ಕಪ್ಪು ಹುಡುಗಿಯೊಬ್ಬಳು ನ್ಯಾಯಾಲಯದ ಕಟಕಟೆ ಹತ್ತಿದ್ದರ ಬಗ್ಗೆ ಬರೆದಿರಬಹುದು. ಇವಳಿಗೆ ಮಿಸ್ಟರ್ ಫ್ರೀಮನ್ ಬಗ್ಗೆಯೂ ಗೊತ್ತಿರಬಹುದು!

ತಿನ್ನುತ್ತಿರುವಾಗ ಮತ್ತೊಮ್ಮೆ ಹೊಟ್ಟೆ ತೊಳಸಹತ್ತಿತು. ಹೊರಗೆ ಓಡಿ ವಾಕರಿಸಿ ಬಂದೆ. ನನಗೆ ಮೈ ಸರಿಯಿಲ್ಲವೇನೋ ಎಂದುಕೊಂಡ ಮಿಸ್ ಗ್ಲೋರಿ ಮನೆಗೆ ಹೋಗುವಂತೆ ಸೂಚಿಸಿದಳು. ಅಮ್ಮ ಏನಾದರೂ ಕಷಾಯ ಮಾಡಿಕೊಡುತ್ತಾಳೆ, ಕುಡಿದರೆ ಸರಿಹೋಗುತ್ತದೆ, ಯೋಚನೆ ಮಾಡಬೇಡ, ಯಜಮಾನಿ ಕೇಳಿದರೆ ನಾನು ಹೇಳುತ್ತೇನೆ ಎಂಬೂ ಸೇರಿಸಿದಳು.

ಅರ್ಧ ದಾರಿಯಲ್ಲಿದ್ದ ಕೊಳವನ್ನು ತಲುಪುವ ಹೊತ್ತಿಗೆ ಛೆ, ನಾನೆಂತಾ ಮೂರ್ಖಳು ಅಂತನ್ನಿಸಿತ್ತು. ಮಿಸೆಸ್ ಕಲಿನನ್‌ಗೆ ಖಂಡಿತಾ ಗೊತ್ತಿರಲಿಕ್ಕಿಲ್ಲ, ಗೊತ್ತಿದ್ದರೆ ಅಂತಹ ಚೆಂದವಾದ ಎರಡು ದಿರಿಸುಗಳನ್ನು ಕೊಟ್ಟಿರುತ್ತಿದ್ದಳೆ? ಅಮ್ಮ ಅವನ್ನು ಕತ್ತರಿಸಿ ನನ್ನ ಅಳತೆಗೆ ಒಪ್ಪ ಮಾಡಿದ್ದಳಲ್ಲ? ಗೊತ್ತಿದ್ದರೆ? ಒಳ್ಳೆಯ ಹುಡುಗಿ! ಎಂಬ ಬಿರುದು ಕೊಟ್ಟಿರುತ್ತಿದ್ದಳೆ? ಯೋಚಿಸುತ್ತಾ ನನ್ನ ಹೊಟ್ಟೆಯೆಲ್ಲಾ ಹಗುರಾಗಿ, ಸಲೀಸಾಗಿ ಉಸಿರಾಡಹತ್ತಿದೆ. ಅಮ್ಮನಿಗೆ ಏನೂ ಹೇಳಲಿಲ್ಲ.

ಆ ದಿನ ಸಂಜೆ ಕವಿತೆ ಬರೆಯಬೇಕೆನ್ನಿಸಿತ್ತು. ಮಕ್ಕಳಿಲ್ಲದ, ವಯಸ್ಸಾದ ಬಿಳಿಯ ದುಮ್ಮಿ ಹೆಂಗಸಿನ ಶೋಚನೀಯ ಪರಿಸ್ಥಿತಿಯ ಬಗ್ಗೆ ಬರೆದರೆ ಹೇಗೆ? ಕವಿತೆ ನೋವು ತುಂಬಿದ ಬ್ಯಾಲಡ್ ರೂಪದಲ್ಲಿದ್ದರೆ ಒಳ್ಳೆಯದಲ್ಲವೆ? ಅದಕ್ಕೂ ಮುಂಚೆ ಮಿಸೆಸ್ ಕಲಿನನ್‌ಳ ನೋವು, ಒಂಟಿತನ, ಹತಾಶೆ, ಎಲ್ಲವನ್ನೂ ಎಚ್ಚರದಿಂದ ಗಮನಿಸಿ ಮನಸ್ಸಿನಲ್ಲಿ ಬರೆದಿಟ್ಟುಕೊಳ್ಳುವ ನಿರ್ಧಾರ ಮಾಡಿದೆ.

ಮಾರನೆಯ ದಿನವೇ ಮೇಲಿಂದ ಕೆಳಗೆ ಥೊಪ್ಪನೆ ಎಸೆದಂತ ಪ್ರಸಂಗ ನಡೆಯಿತು! ನಾನು ಮತ್ತು ಮಿಸ್ ಗ್ಲೋರಿ ಊಟದ ತಟ್ಟೆಗಳನ್ನು ತಿಕ್ಕಿ ತೊಳೆಯುತ್ತಿರುವಾಗ ಬಾಗಿಲ ಹತ್ತಿರ ಬಂದ ಮಿಸೆಸ್ ಕಲಿನನ್ "ಮೇರಿ?" ಎಂದು ಕರೆದಳು.

ಮಿಸ್ ಗ್ಲೋರಿ ಅರ್ಥವಾಗದೇ "ಯಾರು ಬೇಕಿತ್ತು ಮ್ಯಾಮ್?" ಎಂದು ಕೇಳಿದಳು.

ಸ್ವಲ್ಪ ಜೋಲಾಗಿ ಕಾಣುತ್ತಿದ್ದ ಮಿಸೆಸ್ ಕಲಿನನ್‌ಗೆ ಯಾರೆಂದು ಗೊತ್ತಿತ್ತು. ನನಗೆ ಗೊತ್ತಿದ್ದಂತೆಯೇ.

"ಮಿಸೆಸ್ ರಾಂದೆಲ್‌ಗೆ ಸ್ವಲ್ಪ ದಿನದಿಂದ ಮೈ ಹುಷಾರಿಲ್ಲ, ಮೇರಿ ಸ್ವಲ್ಪ ಬಿಸಿಯಾದ ಸೂಪ್ ತೆಗೆದುಕೊಂಡು ಹೋಗಿ ಕೊಟ್ಟು ಬರಲಿ" ಎಂದಳು.

ಮಿಸ್ ಗ್ಲೋರಿಯ ಮುಖ ನೋಡಬೇಕಿತ್ತು. ಕಕ್ಕಾಬಿಕ್ಕಿಯಾಗಿ "ಅವಳ ಹೆಸರು ಮಾರ್ಗರೆಟ್ ಅಂತ ಮ್ಯಾಮ್" ಎಂದು ತಿದ್ದುವ ಪ್ರಯತ್ನ ಮಾಡಿದಳು.

"ಅದು ಅತೀ ಉದ್ದದ ಹೆಸರಾಯಿತು. ಇವತ್ತಿನಿಂದ ಅವಳ ಹೆಸರು ಮೇರಿ. ನಿನ್ನೆ ರಾತ್ರಿಯ ಸೂಪ್‌ಅನ್ನು ಚೆನ್ನಾಗಿ ಬಿಸಿ ಮಾಡಿ ಟರೀನ್‌ನಲ್ಲಿ ಹಾಕು. ಮೇರಿ, ನೀನು ಜೋಪಾನವಾಗಿ ಅದನ್ನು ಮುಟ್ಟಿಸಿ ಬಾ" ಎಂದಳು.

ಇದ್ದ ಹೆಸರನ್ನು ಬಿಟ್ಟು ಯಾವುದೋ ಹೆಸರನ್ನು ಹೊರುವ ಭಯ ಎಂತಹದ್ದು ಎನ್ನುವುದು ನಮ್ಮಂತವರಿಗೆ ಚೆನ್ನಾಗಿ ಗೊತ್ತು. ಬೇರೆ ಯಾವ ಹೆಸರಿನಿಂದ ಕರೆಯುವುದೂ ಅಪಾಯವೇ. ಶತಶತಮಾನಗಳಿಂದ ನಿಗ್ಗರ್, ಜಿಗಬೂ, ಕೊಳಕ, ಕರಿಹಕ್ಕಿ, ಕಾಗೆ, ಚಾಕರ, ಕರಿದೆವ್ವ... ಇತ್ಯಾದಿ ಇತ್ಯಾದಿಗಳಿಂದ ಕರೆಸಿಕೊಂಡು ಹೈರಾಣಾಗಿದ್ದೇವಲ್ಲ?

ಮಿಸ್ ಗ್ಲೋರಿಗೆ ನನ್ನ ಬಗ್ಗೆ ಅಪಾರ ಮರುಕ ಹುಟ್ಟಿತು. ಹಬೆಗುಡುತ್ತಿದ್ದ ಸೂಪಿನ ಬಟ್ಟಲನ್ನು ನನ್ನ ಕೈಗಿಡುತ್ತಾ "ನೋಡು, ಮನಸ್ಸಿಗೆ ಬೇಜಾರು ಮಾಡಿಕೊಳ್ಳಬೇಡ. ಕಲ್ಲು ಕೋಲುಗಳು ಬೆನ್ನು ಮುರಿಯಬಹುದು. ಆದರೆ ಕೆಲವು ಪದಗಳಿವೆಯಲ್ಲ...? ಹೋಗಲಿ ಬಿಡು. ನಾನು ಇಪ್ಪತ್ತು ವರ್ಷದಿಂದ ಇಲ್ಲಿ ದುಡಿಯುತ್ತಿದ್ದೇನೆ. ಆದರೂ..."

ನಾನು ಮಾತಿಲ್ಲದೆ ಬಾಗಿಲಿನತ್ತ ಹೆಜ್ಜೆ ಹಾಕಿದೆ.

ಬಾಗಿಲನ್ನು ತೆರೆಯುತ್ತಾ "ಇಪ್ಪತ್ತು ವರ್ಷದ ಹಿಂದೆ ನಾನಿಲ್ಲಿಗೆ ಬಂದಾಗ ನಿನಗಿಂತ ಚಿಕ್ಕ ವಯಸ್ಸು. ಆಗ ನನ್ನ ಹೆಸರೇನಾಗಿತ್ತು ಗೊತ್ತಾ? 'ಅಲೆಲೂಯಾ!' ನಮ್ಮಮ್ಮ ಇಟ್ಟಿದ್ದ ಹೆಸರು!? ಈ ಯಜಮಾಂತಿ ನನ್ನ 'ಗ್ಲೋರಿ' ಅಂತ ಕರೆದರು. ಆ ಹೆಸರೇ ನಿಂತು ಹೋಯಿತು. ಅದೇ ಹೆಸರು ಇಷ್ಟ ಆಗಕ್ಕೂ ಶುರುವಾಯ್ತು ನೋಡು..."

ಹಿಂಬಾಗಿಲಿಂದ ಹೋಗುವ ಕಿರಿದಾದ ಓಣಿಯನ್ನು ನಾನು ಅರ್ಧ ಕ್ರಮಿಸಿದ್ದಿರಬಹುದು. ಹಿಂದಿನಿಂದ ಮಿಸ್ ಗ್ಲೋರಿಯ ಧ್ವನಿ ಮತ್ತೆ ತೇಲಿ ಬಂತು. "ಮೇರಿ ಅನ್ನೋ ಹೆಸರು ಹೇಗೂ ಚಿಕ್ಕದಾಗೂ ಇದ್ಯಲ್ಲಾ...?"

ನನಗಂತೂ ಸ್ವಲ್ಪ ಹೊತ್ತು ಅಳಬೇಕೋ, ನಗಬೇಕೋ ತಿಳಿಯಲಿಲ್ಲ. ಯಾರಾದರೂ 'ಅಲೆಲೂಯಾ!' ಅಂತ ಕರೆದರೆ ಹೇಗಿರಬಹುದು ಎಂದು ಊಹಿಸಿಕೊಂಡು ಕಿಸಕ್ಕೆನ್ನುವ ನಗು ಒತ್ತರಿಸಿಕೊಂಡು ಬರುತ್ತಿತ್ತು. ತನ್ನ ನಾಲಿಗೆ ಹೊರಳದೆಂದು ನನ್ನ ಹೆಸರನ್ನೇ ಬದಲಾಯಿಸಬಿಟ್ಟಳಲ್ಲ ಈ ದುಮ್ಮಿ ಎಂದು ಅಳು ಸಹ ನುಗ್ಗಿಬರುತ್ತಿತ್ತು. ಸದ್ಯ ನನ್ನ ಧುಮುಗುಡುವ ಕೋಪ ನನ್ನನ್ನು ಅಳಲೂ ಬಿಡಲಿಲ್ಲ, ನಗಲೂ ಬಿಡಲಿಲ್ಲ, ಇಲ್ಲ, ಈ ಕೆಲಸದ ಸಹವಾಸವೇ ಬೇಡ. ನಿನ್ನ ಕೆಲಸ, ಹೆಸರು, ನೀನೇ ಇಟ್ಟುಕೋ ಎಂದು ಬಿಸಾಕಿದಂತೆ ಹೇಳಿ ಬಿಡುಬೀಸಾಗಿ ನಡೆದುಬಿಡಬೇಕು. ಆದರೆ ನಾನು ಕೆಲಸ ಬಿಡಲು ಅಮ್ಮ ಒಪ್ಪುವಳೆ?



ಮಿಸೆಸ್ ರಾಂದೆಲ್ ಮನೆಯ ಕೆಲಸದವಳ ಕೈಲಿ ಸೂಪ್‌ನ ಟರೀನ್ ಅನ್ನು ಇತ್ತಾಗ "ನಿನ್ನ ಯಜಮಾಂತಿ ಮುತ್ತಿನಂಥಾ ಹೆಂಗಸು...ಅಪ್ಪಟ ಚಿನ್ನಾ..." ಅಂತೆಲ್ಲಾ ರಾಗ ಹಾಡುತ್ತಾ ತೆಗೆದುಕೊಂಡಳು. ಈ ಹೆಂಗಸಿನ ಹಳೆಯ ಹೆಸರೇನಾಗಿತ್ತೋ? ಈಗೇನಂತ ಕರೆಯುತ್ತಿದ್ದಾರೋ? ಅಂತೆಲ್ಲಾ ಯೋಚಿಸುತ್ತಾ ಅವಳನ್ನೇ ಮಿಕಿಮಿಕಿ ನೋಡಿದೆ.

ಮುಂದಿನ ವಾರವಿಡೀ ಮಿಸೆಸ್ ಕಲಿನನ್ ನನ್ನ ಮೇರಿ ಅಂತ ಕರೆದಾಗೆಲ್ಲಾ ಅವಳನ್ನೇ ದುರುಗುಟ್ಟಿ ನೋಡುತ್ತಿದ್ದೆ. ಬೇಕೆಂತಲೇ ಬೆಳಗ್ಗೆ ತಡವಾಗಿ ಬಂದು ಸಂಜೆ ಬೇಗ ಹೊರಟರೂ ಆ ಪ್ರಾಣಿ ಯಾಕೋ ಏನೋ, ಸುಮ್ಮನೇ ಇರುತ್ತಿತ್ತು. ಮಿಸ್ ಗ್ಲೋರಿಗೆ ಮಾತ್ರ ನನ್ನ ಬಗ್ಗೆ ಸಿಕ್ಕಾಪಟ್ಟೆ ಕೋಪ ಬರುತ್ತಿತ್ತು. ನಾನು ತೊಳೆದ ಪಾತ್ರೆಗಳಲ್ಲಿ ಮೊಟ್ಟೆಯ ಹಳದಿ ಇನ್ನೂ ಮೆತ್ತಿಕೊಂಡೇ ಇರುತ್ತಂತೆ. ಬೆಳ್ಳಿ ಪಾತ್ರೆಗಳಲ್ಲಿ ಹೊಳಪಿಲ್ಲವಂತೆ. ಸರಿ, ಯಜಮಾನಿಗೆ ಹೋಗಿ ಹೇಳುತ್ತಾಳಾ? ಅಂತ ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಿದ್ದೆ. ಊಹೂಂ, ಅವಳು ಹಾಗೇನೂ ಮಾಡಲಿಲ್ಲ.

ನನ್ನನ್ನು ಒಳಗಿನಿಂದ ಹಿಂಡುತ್ತಿದ್ದ ದ್ವಂದ್ವಕ್ಕೆ ಕೊನೆಗೂ ಪರಿಹಾರ ಸಿಕ್ಕಿದ್ದು ಬೈಲಿಯಿಂದ. ಬೀರುವಿನ ಒಳಗೆ ಏನೆಲ್ಲಾ ಸಲಕರಣೆಗಳಿವೆ ಎಂಬುದನ್ನೂ ವಿವರವಾಗಿ ಕೇಳಿ ತಿಳಿದುಕೊಂಡ. ಯಜಮಾಂತಿಯ ಅಚ್ಚುಮೆಚ್ಚಿನವು ಯಾವು ಅಂತಲೂ ಕೇಳಿದ. ನೆನಪಿಸಿಕೊಂಡು, ಮೀನಿನ ಆಕಾರದಲ್ಲಿದ್ದ ಕೆಸರೋಲ್ ಮತ್ತು ಹಸಿರು ಗಾಜಿನ ಕಾಫಿ ಕಪ್ಪುಗಳು ಎಂದು ಹೇಳಿದೆ. "ಸರಿ ಹಾಗಾದರೆ..." ಎನ್ನುತ್ತಾ ಏನು ಮಾಡಬೇಕೆಂದು ಹೇಳಿದ.

ಮಾರನೆಯ ದಿನ ಮಿಸ್ ಗ್ಲೋರಿ ಬಟ್ಟೆಗಳನ್ನು ಬಿಸಿಲಲ್ಲಿ ಹರವುತ್ತಿದ್ದಳು. ಜಗಲಿಯ ಮೇಲೆ ಹರಟೆ ಹೊಡೆಯುತ್ತಿದ್ದ ಮುದಿಗೂಬೆಗಳಿಗೆಲ್ಲ ತಿನ್ನಲು ಕುಡಿಯಲು ಸರಬರಾಜು ಮಾಡೆಂಬ ಅಣತಿ ಬಂತು. ತಕ್ಷಣವೇ ಖಾ... ಟ್ರೇಯನ್ನು ಧಡಾರನೆ ನೆಲಕ್ಕೆ ಹಾಕಿದೆ. ಮಿಸೆಸ್ ಕಲಿನನ್‌ಳ "ಮೇರಿ!" ಎಂಬ ಘರ್ಜನೆ ಕೇಳಿಸಿದ್ದೇ ಒಂದು ಕೈಯಲ್ಲಿ ಕೆಸರೋಲನ್ನೂ, ಇನ್ನೊಂದು ಕೈಯಲ್ಲಿ ಹಸಿರು ಗಾಜಿನ ಕಾಫಿ ಕಪ್ಪುಗಳನ್ನೂ ಹಿಡಿದು ತಯಾರಾಗಿ ನಿಂತೆ. ಅಡುಗೆ ಮನೆಯ ಬಾಗಿಲಿನ ಮೇಲೆ ಅವಳ ನೆರಳು ಬಿದ್ದದ್ದೇ ತಡ, ಹೊಳಪಾದ ನೆಲದ ಹೆಂಚಿನ ಮೇಲೆ ಅವೂ ಫಳೀರೆಂದು ಬೀಳುವಂತೆ ಕೆಳಗೆ ಬಿಟ್ಟೆ.

ಆಮೇಲೆ ನಡೆದಿದ್ದನ್ನು ಬೈಲಿಗೆ ಪೂರ್ತಿ ವಿವರಿಸಲು ಆಗುತ್ತಿರಲೇ ಇಲ್ಲ. ಮಿಸೆಸ್ ಕಲಿನನ್ ನೆಲದ ಮೇಲೆ ಬಿದ್ದು ತನ್ನ ಕುರೂಪ ಮೂತಿಯನ್ನು ಇನ್ನಷ್ಟು ಕಿವುಚಿಕೊಂಡು, ಲಬೊಲಬೊ ಎಂದು ಬಾಯಿ ಬಡಿದುಕೊಳ್ಳುತ್ತಿದ್ದನ್ನು ವಿವರಿಸುವಾಗ ಹೊಟ್ಟೆ ಹುಣ್ಣಾಗುವಂತೆ ಬಿದ್ದು ಬಿದ್ದು ನಗುತ್ತಿದ್ದೆವು. ನೆಲದ ಮೇಲೆಲ್ಲಾ ಹಾಲಾಡುತ್ತಾ ಒಡೆದ ಕಪ್ಪಿನ ಚೂರುಗಳನ್ನು ಹಿಡಿದು, "ಅಯ್ಯೋ... ಅಮ್ಮಾ! ನೀನು ಕೊಟ್ಟ ಚೈನಾ ಗತಿ ಏನಾಯ್ತು! ನೋಡು, ವರ್ಜಿನಿಯಾದಿಂದ ತಂದ ಚೈನಾಗೆ ಈ ಗತಿಯೇ! ಅಯ್ಯೋ... ದೇವರೇ! ಅಮ್ಮಾ... ದಯವಿಟ್ಟು ಕ್ಷಮಿಸು..." ಎಂದೆಲ್ಲಾ ಭೋರಿಟ್ಟು ಅತ್ತಿದ್ದಳು.

ಇತ್ತ ಅಂಗಳದಲ್ಲಿದ್ದ ಮಿಸ್ ಗ್ಲೋರಿ ದೌಡಾಯಿಸಿ ಬಂದರೆ, ಆ ಜಗಲಿಯಲ್ಲಿದ್ದ ಹೆಂಗಸರೆಲ್ಲಾ ಓಡಿ ಬಂದು ಸುತ್ತ ನೆರೆದಿದ್ದರು. ಮಿಸ್ ಗ್ಲೋರಿ ತನ್ನ ಯಜಮಾಂತಿಯಷ್ಟೇ ದಿಕ್ಕುಗೆಟ್ಟಂತೆ ಬೆಬ್ಬೆ ಅನ್ನುತ್ತಿದ್ದಳು. "ಅಯ್ಯೋ... ನಮ್ಮ ವರ್ಜಿನಿಯಾದ ಚೈನಾ ಗತಿ ಹೀಗಾಗಬೇಕೆ? ಈಗೇನು ಮಾಡುವುದು..."

ಮಿಸ್ ಕಲಿನನ್ ಬುದ್ಧಿಗೆಟ್ಟವಳಂತೆ ಅರಚುತ್ತಿದ್ದಳು. "ದರಿದ್ರ ಕರಮಿ... ನೋಡೋಕೆ ಇಷ್ಟುದ್ದ ಇದಾಳೆ! ಎಷ್ಟು ಧೈರ್ಯ ಈ ಹೀನ ಕರಕಿಗೆ!"


ಆ ಕನ್ನಡಕದ ಮೂತಿ "ಯಾರು ಒಡೆದಿದ್ದು ವಯೊಲಾ? ಆ ಮೇರಿಯೆ? ಯಾರು ಹೇಳು?" ಎಂದು ಪದೇಪದೇ ಕೇಳಿತು. ಮಿಸೆಸ್ ಕಲಿನನ್ ... ಗೂಬೆ ಹೆಸರು ಮಾರ್ಗರೆಟ್! ಅವಳ ಹೆಸರು ಮಾರ್ಗರೆಟ್ ಅಂತಾ... ಎಂದು ಕಿರುಚುತ್ತಾ ಒಡೆದ ಕೆಸರೋಲಿನ ಚೂರೊಂದನ್ನು ನನ್ನ ಕಡೆಗೆ ಬಿ... ಎಸೆದಳು. ಕೋಪ ದುಃಖದಲ್ಲಿ ಥರಥರನೆ ನಡುಗುತ್ತಿದ್ದಕ್ಕೋ ಏನೋ, ಹಾರುತ್ತಾ ಚೂರು ಗುರಿ ತಪ್ಪಿ ಮಿಸ್ ಗ್ಲೋರಿಯ ಕಿವಿಗಪ್ಪಳಿಸಿ ಅವಳೂ "ಹೋ..." ಎಂದು ಕಿರುಚಲಾರಂಭಿಸಿದಳು. ಎಲ್ಲವೂ ಎಷ್ಟು ಚಕಚಕನೆ ನಡೆಯಿತೆಂದರೆ ಮೊದಲು ಕಿರುಚಿದ್ದೋ, ಆಮೇಲೆ ಎಸೆದಿದ್ದೋ ಗೊತ್ತಾಗಲಿಲ್ಲ.

ಬರುವಾಗ, ನೆರೆಹೊರೆಯವರಿಗೆಲ್ಲ ಸರಿಯಾಗಿ ಕೇಳಿಸಲೆಂದು ಮುಂಬಾಗಿಲ ಬಾಗಿಲನ್ನು ಇಷ್ಟಗಲ ತೆರೆದಿಟ್ಟು ಬಂದೆ.

ಒಂದು ವಿಷಯದ ಮಟ್ಟಿಗಂತೂ ಮಿಸೆಸ್ ಕಲಿನನ್‌ಳ ತಪ್ಪಿರಲಿಲ್ಲ, ನನ್ನ ಹೆಸರು ಮೇರಿ ಆಗಿರಲಿಲ್ಲ.

● ಸುಕನ್ಯಾ ಕನಾರ

(ಲಂಕೇಶ್ ಪ್ರಕಾಶನದ 'ಹೇಳುತ್ತೇನ ಕೇ...



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

## ಪಾವಿತ್ರ್ಯತೆಯ ಉದಯ

ಆದಿಮ ಕಾಲದಿಂದಲೂ ಮನುಷ್ಯ ಆಹಾರ ಮತ್ತು ...ರೆಗಾಗಿ ಪ್ರಕೃತಿಯನ್ನು ನೇರವಾಗಿ ಆಶ್ರಯಿಸಿದ್ದಾನೆ. ...ಕೃತಿಯಲ್ಲಿ ಕಾಣುವಂತಹ ಕೌತುಕಗಳನ್ನು ನೋಡುತ್ತಾ, ...ಅಂದಿಸುತ್ತಾ ಮತ್ತು ಹೆದರುತ್ತಾ ಅವುಗಳಿಗೆ ತನ್ನದೇ ...ವಂತಹ ಪರಿಕಲ್ಪನೆಗಳಲ್ಲಿ ಅರ್ಥಗಳನ್ನು ಕೊಡುತ್ತಾ, ...ವಕ್ಕೂ ಗುಣಗಳನ್ನು ಆರೋಪಿಸುತ್ತಿದ್ದನು. ನೈಸರ್ಗಿಕ ...ತ್ತು ಅತಿಭೌತಿಕ- ಹೀಗೆ ಯಾವುದೇ ರೀತಿಯ ತನ್ನ ...ಕಲ್ಪನೆಯ ವಿಷಯಗಳಿಗೆ ತಾನೇ ಆರೋಪಿಸಿದ ...ಾವವನ್ನು ಅಥವಾ ಅದರಲ್ಲಿ ತಾನು ಕಂಡುಕೊಂಡ ...ಾವವನ್ನು ಭಾವಿಸುತ್ತಿದ್ದನು. ಇಲ್ಲಿ ಎಚ್ಚರಿಕೆಯಿಂದ ...ನಿಸಬೇಕಾದ ಅಂಶವೆಂದರೆ, ಯಾವುದರ ಗುಣ, ಸ್ವಭಾವ, ... ಸಾಮರ್ಥ್ಯ ಹೀಗೆ ಅಥವಾ ಯಾವುದನ್ನು ಅದು ...ವ ರೀತಿ ಇದೇ ಎಂದು ಪರಿಭಾವಿಸಿದ್ದನೋ ಅದಕ್ಕೆ ...ೇ ಸ್ಪಂದಿಸುತ್ತಿದ್ದನು ಹಾಗೂ ಹಾಗೆಯೇ ಭಾವಿಸುತ್ತಿದ್ದನು. ...ವುದೇ ಒಂದು ವಸ್ತುವಿನ ಸ್ವಂತವಾದ ಮೂಲಗುಣ, ...ಾವ ಮತ್ತು ಅದರದೇ ಆದ ಪ್ರಕಟಣೆಗೊಳ್ಳುವ ...ಯಿರುವುದೋ ಅದೇ ಆ ವಸ್ತುವಿನ ಧರ್ಮ. ಆ ...ವಿನ ಧರ್ಮಕ್ಕೆ ಪ್ರತಿಕ್ರಿಯೆಯಾಗಿ ಸ್ಪಂದಿಸುವ ಅಥವಾ ...ವಿಸುವ ರೀತಿಯೇ ಧಾರ್ಮಿಕ ಭಾವನೆಗಳಾದವು. ಆ ...ವನೆಗಳು ವ್ಯಕ್ತಿಗತವಾಗಿದ್ದು ಕ್ರಮೇಣ ಸಮುದಾಯಕ್ಕೆ ...ಹನವಾಗಿದ್ದಿರಬಹುದು ಅಥವಾ ಸಮುದಾಯವೇ ...ಬಗೆಯ ಸಂಗ್ರಹ ಭಾವವನ್ನು ಹೊಂದಿರಬಹುದು. ...ದರಾಗಲಿ, ಪರಿಕಲ್ಪಿತ ಗುಣಗಳ ಭಾವಿಸುವಿಕೆಯೇ ...ರ್ಮಿಕ ಭಾವನೆಗಳಾದವು. ಇಂತಹ ಭಾವನೆಗಳನ್ನು ...ಲ್ಲೇ ಗಟ್ಟಿಗೊಳಿಸಿಕೊಳ್ಳುತ್ತಾ ಹೋದ ಸಮುದಾಯಗಳು ...ನ್ನು ಮೀರಿದ ಆಲೋಚನೆಗಳನ್ನು ಮಾಡಲಿಲ್ಲ ಅಥವಾ ...ಡಲು ಇಚ್ಛಿಸಲಿಲ್ಲ, ಅವುಗಳಲ್ಲೇ ಅವರು ತೃಪ್ತರಾಗಿದ್ದರು. ...ದೀರ್ಘಕಾಲದ ಸಮುದಾಯಗಳ ಭಾವನಾತ್ಮಕ ...ಯು ವಿವೇಚನೆಗಾಗಲಿ, ಹೊಸ ವಿಚಾರಗಳಿಗಾಗಲಿ ... ಮಾಡಿಕೊಡುವುದಿಲ್ಲ, ಹಾಗೊಂದು ವೇಳೆ ...ುದಾಯದ ಭಾವನಾತ್ಮಕ ತೃಪ್ತಿಯಿಂದ ತೃಪ್ತನಾಗದ ...ರೊಬ್ಬನು ಹೊಸ ವಿಚಾರವನ್ನು ಅಥವಾ ಅದೇ ...ಯವನ್ನು ಬೇರೊಂದು ದಿಕ್ಕಿನಲ್ಲಿ ನೋಡಿದಾಗ ಅಲ್ಲಿ ...ತಿ ಉಂಟಾಗುತ್ತದೆ. ಅದೇ ಮನಸ್ಸುರು ಒಪ್ಪಿ ಆ ...ನಲ್ಲಿ ಆಲೋಚಿಸ ತೊಡಗಿದರೆ, ಆಲೋಚಿಸಲೊಲ್ಲದ ...ನಾತ್ಮಕ ತೃಪ್ತರು ಆ ತೃಪ್ತಿಯ ಭಂಗವನ್ನೂ ...ಸಲಾರರು. ಜೊತೆಗೆ ಆ ಭಾವಕ್ಕೆ ಬೇರೆ ಯಾವುದೇ ...ರವು ಸೇರ್ಪಡೆಯಾದರೆ ಅವರು ನಂಬಿರುವ ವಿಚಾರವೇ ...ಟವಾಗುವ ಅಥವಾ ಪತನವಾಗುವ ಕಾರಣದಿಂದ ...ದರ ಬೆರಿಕೆಯನ್ನು, ಅಥವಾ ಅನ್ಯ ದೃಷ್ಟಿಯಿಂದ ...ಡಲು ಸಿದ್ಧವಾಗುವುದಿಲ್ಲ. ಹೀಗೆ ಸಿದ್ಧವಾಗಿಲ್ಲದೇ ತಮ್ಮ ...ನಾತ್ಮಕವಾದ ವಿಚಾರವನ್ನು ಕಾಯುವಿಕೆಯೇ ಪಾವಿತ್ರ ...ಎಂಬ ಹೆಸರನ್ನು ಪಡೆದುಕೊಳ್ಳುತ್ತದೆ. ಅನ್ಯವಾದವು ...ದರೆ ಅಪವಿತ್ರ ಎಂಬ ದೂರು ನೀಡುತ್ತಾರೆ.

...ವಿಕಾಸಮುಖಿ ಮತ್ತು ಪ್ರಗತಿಪರ ಕ್ರಾಂತಿಕಾರಿ ...ರವಾದಿಗಳು ಇನ್ನೂ ಒಂದು ಹೆಜ್ಜೆ ಮುಂದುವರಿದು ...ಗೆ ಪರಿಚಯವಾಗುವ ಹೊಸ ಮತ್ತು ಭಿನ್ನ ವಿಷಯಗಳ ...ಲ್ಯಗಳನ್ನು ಅರಿತುಕೊಂಡು, ಅವನ್ನು ತಮ್ಮ ...ಪ್ರದಾಯಿಕ ಭಾಷೆಯಲ್ಲಿ, ಸಮುದಾಯದಲ್ಲಿ ...ನ್ಯವಾಗುವ ಶೈಲಿಯಲ್ಲಿ ಪ್ರಸ್ತಾಪಿಸುತ್ತಾರೆ ಮತ್ತು ...ಿಸಿಸುತ್ತಾರೆ. ಅವು ಮುಂದುವರಿದಂತೆ, ಅನೇಕ ...ಘಟ್ಟಗಳಲ್ಲಿ ಪುನರಾವರ್ತಿತವಾದಂತೆ ಆಗಿನ ಹೊಸ ...ರಗಳು ಹಳತಾಗಿರುತ್ತವೆ ಮತ್ತು ಪ್ರಾಚೀನತೆಯ ...ಲ್ಯವನ್ನು ಪಡೆದುಕೊಳ್ಳುತ್ತದೆ.

...ನಮ್ಮ ಸಮಾಜದಲ್ಲಿ ಈಗಲೂ ಗಮನಿಸಬಹುದು. ...ಂದ ಕೂಡಲೇ ಅದಕ್ಕೇನೋ ಮಾನ್ಯತೆ! ಹಾಗೆಯೇ ...ಚ್ಚೀ ಉದಾತ್ತವಾಗಿರುವ ವಿಚಾರಗಳು ಓಬೀರಾಯನ ...ದ್ದು ಎಂದು ಮೂಗುಮುರಿಯುವವರೂ ಇದ್ದಾರೆ. ...ನೋಡಬೇಕಾಗಿರುವುದು ವಿಚಾರಗಳ ಪ್ರಸ್ತುತವಾಗಿರುವ ... ಎಷ್ಟು ಹಳತು ಅಥವಾ ಎಷ್ಟು ಹೊಸತು ಎಂದಲ್ಲ, ...ಗೆ ಈಗ ಅವುಗಳೆಷ್ಟು ಪ್ರಸ್ತುತವಾಗಿವೆ ಎಂಬುದಷ್ಟೇ ...ಿ ತೌಲನಿಕ ಅಧ್ಯಯನ ಮಾಡುವಾಗ ಅಥವಾ ...ದ ಮತ್ತು ಬದಲಾವಣೆಯ ಹಂತಗಳನ್ನು ಶೈಕ್ಷಣಿಕವಾಗಿ ...ಶಿಸುವಾಗ ಅವುಗಳ ಅಗತ್ಯವಿರುತ್ತದೆ.

## ವೈದಿಕ ಕವಿಯ ಭೂಮಿಗೀತೆ


...ಅಥರ್ವ ವೇದ, 12ನೇ ಕಾಂಡ, 1ನೇ ಭೂ ...ದಲ್ಲಿನ ಕೆಲವು ವಿಚಾರಗಳು ಸೂಕ್ಷ್ಮವಾಗಿದ್ದು, ...ಾರ್ಯರಿಂದ ಇಂತಹ ಕೃತಿ ರಚಿತವಾಗಿರುವುದಕ್ಕೆ ...ಸಂತೋಷಿಸುತ್ತೇನೆ. ಸಂತೋಷದ ಕಾರಣವೇನೆಂದರೆ,

# ಭೂಮಿಗಾಗಿ ಆರ್ಯ ಮತ್ತು ಅಸುರ ಸಂಘರ್ಷ

ಕೃಷಿಕರ ಮನೋಧರ್ಮವನ್ನು ಹೊಂದಿರುವಂತಹ ಆರ್ಯಕವಿಗಳು ಇದನ್ನು ರಚಿಸಿದ್ದಾರೆ ಎನಿಸುವುದರಿಂದ. ಅಲೆಮಾರಿಗಳಾಗಿದ್ದ ಆರ್ಯರು ಭಾರತದ ಮೂಲ ನಿವಾಸಿಗಳಂತೆ ನಿರ್ದಿಷ್ಟ ನೆಲದ ಬಗ್ಗೆ ಅಷ್ಟೊಂದು ಕಾಳಜಿ ಮತ್ತು ಪ್ರೀತಿ ತೋರುವುದರಿಂದ. ಭೂಮಿಗಾಗಿ ಮತ್ತು ತಮ್ಮ ಉಳಿವಿಗಾಗಿ ನಡೆದ ಯುದ್ಧಗಳ ಸೂಚನೆಗಳನ್ನು ನೇರ ಪ್ರಸ್ತಾಪ ಮಾಡಿರುವುದರಿಂದ.

ಹೀಗೊಂದು ವಿಶ್ಲೇಷಣೆ; ಅಲೆಮಾರಿಗಳಾಗಿದ್ದ ಬ್ರಾಹ್ಮಣರು ಮತ್ತು ಇತರ ಉಚ್ಚ ವರ್ಣದವರು, ತಮ್ಮ ಸಮೂಹದಲ್ಲಿ ಸಾವುಂಟಾದಾಗ ನದಿದಡಗಳಲ್ಲಿ ಅಥವಾ ಊರಿನಾಚೆ, ಪ್ರಕೃತಿ ಮಡಿಲಲ್ಲಿ ಸುಡುತ್ತಿದ್ದರು. ಕಾರಣ ಅವರಿಗೆ ಅವರದೇ ಆದಂತಹ ಭೂಮಿ ಇರಲಿಲ್ಲ, ಅವರಿಗೆ ಸುಡದೇ ಬೇರೆ ದಾರಿಯೇ ಇರಲಿಲ್ಲ, ಅವರ ಕುರುಹು ಬೂದಿಯಾಗಿ ಹಾರಿಹೋಗುವಂತಹದ್ದು, ಆದರೆ, ಮೂಲ ನಿವಾಸಿಗಳು, ಬುಡಕಟ್ಟಿನವರು, ಒಕ್ಕಲಿಗರು, ಇತರರು ಹೆಣಗಳನ್ನು ತಮ್ಮ ಭೂಮಿಯಲ್ಲಿ ಹೂಳುತ್ತಿದ್ದರು. ಅವರು ತಮ್ಮ ಸ್ವಾಮಿತ್ವದಲ್ಲಿದ್ದ ಭೂಮಿಯಲ್ಲಿ ಅಧಿಕಾರಯುತವಾಗಿ ಮತ್ತು ಅಭಿಮಾನದಿಂದ ಸಂಸ್ಕಾರ ಮಾಡುತ್ತಿದ್ದರು. ಅವರು ತಮ್ಮ ನಿರ್ದಿಷ್ಟವಾದ ಸೀಮೆಯನ್ನು ಗುರುತಿಸಿಕೊಂಡಿದ್ದೇ ಅಲ್ಲದೇ, ಅದರಲ್ಲಿ ದೀರ್ಘಕಾಲದ ಬಾಳ್ವೆಯನ್ನು







ಮಾಡುತ್ತಿದ್ದರು ಎಂದೇ ಸ್ಪಷ್ಟವಾಗಿ ತೋರುತ್ತದೆ.

ಸುಡುವಿಕೆ ಮತ್ತು ಹೂಳುವಿಕೆ ಬರಿಯ ಸಂಪ್ರದಾಯ ಮಾತ್ರವಲ್ಲದೇ ಅವರು ಬದುಕುತ್ತಿದ್ದ ಭೂಮಿಯ ಮೇಲಿನ ಸ್ವಾಮಿತ್ವವನ್ನು ಸೂಚಿಸುತ್ತದೆ ಎಂದು ನನ್ನ ಸ್ಪಷ್ಟ ಅಭಿಪ್ರಾಯ.

ಬ್ರಾಹ್ಮಣರ ಶವ ಸುಡುವಿಕೆಯ ಸಂಪ್ರದಾಯವನ್ನು ಯಜ್ಞಕ್ಕೆ ಸಮೀಕರಿಸುವ ಮಾತುಗಳನ್ನೂ ಕೇಳಿದ್ದೇನೆ. ಆದಿತ್ಯೋಪಾಸಕರು ಅಗ್ನಿಯನ್ನು ಸೂರ್ಯನ ಸಂಕೇತವನ್ನಾಗಿಸಿಕೊಂಡು ಕರ್ಮಗಳನ್ನು ಮಾಡುವರು ಎಂದು. ಯಜ್ಞ ಯಾಗಾದಿಗಳಲ್ಲಿ ಸಂಬಂಧಿತ ದೇವತೆಗಳಿಗೆ ಹವಿಸ್ಸನ್ನು ಅರ್ಪಿಸಿದಂತೆ, ಮೃತ ಶರೀರವನ್ನು ಅಗ್ನಿಗೆ ಅರ್ಪಿಸಿ ಧೂಮದ ಮೂಲದ ಶರೀರವು ಅಂತರಿಕ್ಷವನ್ನು ಸೇರಲು ಅವಕಾಶ ಮಾಡಿಕೊಟ್ಟಂತೆ ಎಂದೂ ಹೇಳುತ್ತಾರೆ. ಏನೇ ಆಗಲಿ, ಅಗ್ನಿಯನ್ನು ಆಧರಿಸಿದ, ಅಂತರಿಕ್ಷವನ್ನು ದಿಟ್ಟಿಸುವ ಆರ್ಯರು ಅಥರ್ವವೇದದಲ್ಲಿ ಕೃಷಿಕರಂತೆ ಭೂಮಿಯನ್ನು ಕೊಂಡಾಡುವುದೇಕೆ?

## ಭೂಮಿಗಾಗಿ ಯುದ್ಧಗಳು

ಭೂ ಸೂಕ್ತದಲ್ಲಿ ಭೂಮಿಯ ಫಲವತ್ತತೆಯನ್ನು, ಸಂಪತ್ತನ್ನು ಕೊಂಡಾಡುವುದರ ಜೊತೆಗೆ ಅನೇಕ ವಿಷಯಗಳು ಬೆಳಕಿಗೆ ಬರುತ್ತವೆ. ಆ ವೈದಿಕರು ಈ ನೆಲದವರಲ್ಲವೆಂದೂ ಮತ್ತು ಈ ಭೂಮಿಯ ಸಂಪತ್ತಿಗೆ ಮಾರು ಹೋಗಿ ಇಲ್ಲಿ ಇರಲು ಬಯಸಿದ್ದವರೆಂದೂ, ಹಾಗೆ ಇರಲು ಪ್ರಯತ್ನಿಸಿದಾಗ ಮೂಲ ನಿವಾಸಿಗಳ ಜೊತೆಗೆ ಯುದ್ಧಗಳಾಗಿದ್ದು, ಅಂತಹ ಸಂಘರ್ಷಗಳಿಂದ ಹೊರಬರಲು ಒದ್ದಾಡುತ್ತಿದ್ದರೆಂದೂ ನೇರವಾಗಿಯೇ ತಿಳಿದುಬರುತ್ತದೆ. ಸಂಘರ್ಷಗಳ ನಂತರ ಒಟ್ಟಾಗಿ ಬಾಳ್ವೆ ಮಾಡಲೂ ಬಯಸಿರುವುದು ತಿಳಿಯುತ್ತದೆ.

"ತಡೆಯಿಲ್ಲದ ಅಸಂಖ್ಯ ಶಿಖರ, ಇಳಿಜಾರು ಹಾಗು ಅಸೀಮ ಸಮತಲ ಪ್ರದೇಶಗಳಿಂದ ಕೂಡಿದ ಭೂದೇವಿಯು ಮಾನವರನ್ನು ಒಟ್ಟುಗೂಡಿಸಿರುವಳು. ರೋಗನಾಶಕ ಶಕ್ತಿಯುಳ್ಳ ಅನೇಕ ಔಷಧೀಯ ವನಸ್ಪತಿಗಳನ್ನು ಹೊಂದಿರುವ ಭೂಮಿಯು ನಮಗಾಗಿ ವಿಸ್ತಾರಗೊಳ್ಳಲಿ, ಸಮೃದ್ಧಳಾಗಲಿ." (2) ತಾವು ಪ್ರವೇಶಿಸಿರುವ ಭೂಭಾಗವನ್ನು ನೋಡಿದ ಆರ್ಯರ ಬೆರಗು ತುಂಬಿರುವ ದೃಷ್ಟಿಯನ್ನು ಗಮನಿಸಿ.

"ಭೂತ ಹಾಗೂ ಭವಿಷ್ಯತ್ ಕಾಲಗಳೆರಡಕ್ಕೂ ಒಡತಿಯಾಗಿರುವ ಭೂದೇವಿಯು ನಮಗಾಗಿ ವಿಶಾಲ ಲೋಕವನ್ನು ಉಂಟುಮಾಡಲಿ" (1) ನಾವು ಹಿಂದೆ ಕಂಡಿರದಿದ್ದಾಗಲೂ ಇದ್ದ ಭೂಮಿ ಇದು. ಮುಂದೆಯೂ ಬಾಳುವ ಭೂಮಿ ಇದು. ಈಗ ವರ್ತಮಾನದಲ್ಲಿ ನಾವು ಇಲ್ಲಿರಲು ಯೋಗ್ಯವಾದ ತಾಣವಾಗಲಿ ಎಂದು ಬಯಸುವ ಆರ್ಯರು ಎಂದಿನಂತೆ ತಮ್ಮ ಮಂತ್ರದಲ್ಲಿ ಲೌಕಿಕಾಪೇಕ್ಷೆಗಳನ್ನು ಧಾರಾಳವಾಗಿ ಮುಂದಿಡುತ್ತಾರೆ.

"ಕೃಷಿಯ ಫಸಲುಗಳು ಮತ್ತು ಅನ್ನರೂಪವಾದ ಧಾನ್ಯಗಳನ್ನು ಉಂಟುಮಾಡಿದಂಥ, ಉಸಿರಾಡುವ ಹಾಗೂ ಚಲಿಸುವ ಎಲ್ಲವನ್ನೂ ಪೋಷಿಸುವಂಥ ಭೂದೇವಿಯು ನಮಗೆ ದನಕರುಗಳನ್ನೂ ಬೆಳೆಗಳನ್ನೂ ನೀಡಲಿ (4). ನಮ್ಮ ಪೂರ್ವಜರು ನೆಲೆಸಿ ಕಾರ್ಯತತ್ಪರರಾಗಿದ್ದಂಥ, ದೇವತೆಗಳು ಅಸುರರನ್ನು ಜಯಿಸಿದಂಥ, ಗೋವುಗಳಿಗೂ ಕುದುರೆಗಳಿಗೂ ಹಾಗೂ ಪಕ್ಷಿಗಳಿಗೂ ವಾಸಸ್ಥಾನವಾದಂತಹ ಭೂದೇವಿಯು ನಮಗೆ ಐಶ್ವರ್ಯವನ್ನೂ ವರ್ಚಸ್ಸನ್ನೂ ಅನುಗ್ರಹಿಸಲಿ (5)." ಈ ಸಾಲಿನಲ್ಲಿ ಸ್ವಲ್ಪ ಪೂರ್ವಜ ಶಬ್ದದ ಬಳಕೆಯಿಂದ ಗೊಂದಲ ಉಂಟಾಗುತ್ತದೆ. ತಾವು ಸಂಚರಿಸುತ್ತಿರುವವರು (ಶಿವಾಂ ಸ್ಯೋನಾಮನು ಚರೇಮ ವಿಶ್ವಹಾ 17)ರಲ್ಲಿ ಹೇಳುವ ಇದೇ ವೈದಿಕರು ತಮ್ಮ ಪೂರ್ವಜರು ನೆಲೆಸಿ ಕಾರ್ಯತತ್ಪರರಾಗಿದ್ದರು ಎಂದು ಏಕೆ ಮತ್ತು ಹೇಗೆ ಹೇಳುತ್ತಿದ್ದಾರೆ ಎಂದು ಯೋಚಿಸಬೇಕಾಗುತ್ತದೆ. ತತ್ಕಾಲಕ್ಕೆ ನೆಲೆಸಿದರು ಎಂದು ತೆಗೆದುಕೊಳ್ಳುವುದೋ ಅಥವಾ ತತ್ಕಾಲಕ್ಕೆ ಸಂಚರಿಸುತ್ತಿದ್ದರು ಎಂದು ತೆಗೆದುಕೊಳ್ಳುವುದೋ ಎಂಬ ಪ್ರಶ್ನೆ ಬಂದಾಗ ತತ್ಕಾಲಕ್ಕೆ ನೆಲೆಸಿದ್ದಿರಬಹುದಾದ ಸೂಚನೆಗಳೇ ಇತರ ಆಕರಗಳಿಂದ ದೊರಕುವುದು.

ಆರ್ಯರ ಮತ್ತು ಅಸುರರ ಸಂಘರ್ಷದ ಸೂಚನೆಗಳನ್ನು ಅನೇಕ ಶ್ಲೋಕಗಳು ನೀಡುತ್ತವೆ. "ಯಾವ ಭೂಮಿಯಲ್ಲಿ ಕುಶಲ ಶಿಲ್ಪಿಗಳು ಯಜ್ಞವೇದಿಯನ್ನು ನಿರ್ಮಿಸುವರೋ, ಎಲ್ಲಿ ಯಜ್ಞಗಳನ್ನು ಆಚರಿಸುವರೋ, ಎಲ್ಲಿ ಆಹುತಿಗಳ ಮುಂಚೆ ಹೊಳೆಯುವ ನೇರವಾದ ಯೂಪಸ್ತಂಭಗಳನ್ನು ನೆಟ್ಟು ಅಳೆಯುವರೋ ಅಂತಹ ಭೂಮಿಯು ತಾನೂ ಬೆಳೆದು ನಮ್ಮನ್ನೂ ಬೆಳೆಸಲಿ (13)." ಯೂಪಸ್ತಂಭಗಳು ಆರ್ಯ ಯಾಜ್ಞಿಕರ ಸೊತ್ತು ಮತ್ತು ಆಚರಣೆಗಿರುವ ಅಗತ್ಯ ಪರಿಕರ.

"ಓ ಭೂಮಿಯೇ, ನಮ್ಮನ್ನು ದ್ವೇಷಿಸುವವರೂ ನಮ್ಮೊಡನೆ ಯುದ್ಧಕ್ಕೆ ಬರುವವರೂ ನಮ್ಮನ್ನು ಮಾನಸಿಕವಾಗಿ ಹಿಂಸಿಸುವವರೂ ಮತ್ತು ಕೊಲ್ಲಬೇಕೆಂದು ಮಾರಕ ಶಸ್ತ್ರಾಸ್ತ್ರಗಳನ್ನು ಹಿಡಿದು ಬರುವವರೂ ಆದಂಥವರನ್ನು ನಾವು ಪ್ರಾರ್ಥಿಸುವ ಮೊದಲೇ ರಕ್ಷಕಳಾದ ನೀನು ನಾಶ ಮಾಡು (14)." ನಮ್ಮನ್ನು ಯಾರೂ ದ್ವೇಷಿಸದಂತಾಗಲಿ ಎಂಬ ಮಾತು ಪದೇಪದೇ ಉಲ್ಲೇಖವಾಗುತ್ತದೆ. ಇದರಿಂದ ಆರ್ಯರ ವಾಸ್ತವ್ಯವನ್ನು ಒಪ್ಪದವರು ಈ ನೆಲದಲ್ಲಿದ್ದರು ಎಂಬುದನ್ನು ನೇರವಾಗಿ ಸೂಚಿಸುವ ಕರ್ತೃವು ಮುಂದೆ ಹೇಳುವುದನ್ನು ಗಮನಿಸಿ, "ಓ ಭೂಮಿಯೇ, ನಿನ್ನಲ್ಲಿ ಜನರ ಸಂಚಾರಕ್ಕಾಗಿ, ರಥ ಮತ್ತು ಬಂಡಿಗಳ ಸಂಚಾರಕ್ಕಾಗಿ ಯಾವ ಮಾರ್ಗಗಳುಂಟೋ, ಯಾವ ರಸ್ತೆಗಳಲ್ಲಿ ಶಿಷ್ಟರು ಹಾಗೂ ದುಷ್ಟರೂ ಕೂಡ ಸಂಚರಿಸುವರೋ ಅವುಗಳಲ್ಲಿ ಶತ್ರುಗಳಿಲ್ಲದೆ, ಚೋರರಿಲ್ಲದೆ ನಾವು ಜಯಿಸುವಂತೆ ಮಾಡು (47)." ತಮ್ಮನ್ನು ತಾವು ಶಿಷ್ಟರೆಂದುಕೊಳ್ಳುವುದು, ತಮ್ಮನ್ನು ಎದುರಿಸುವವರನ್ನು ದುಷ್ಟರೆನ್ನುವುದು ನಿವೇದಿಸುವವರಲ್ಲಿ ಸಾಮಾನ್ಯ, ಅದರಂತೆಯೇ ಇಲ್ಲಿ ಕವಿ ಉಲ್ಲೇಖಿಸುತ್ತಾ ನಿಷ್ಪಕ್ಷಪಾತವಾದ ಭೂಮಿಯ ಮೇಲೆ ಒಬ್ಬರಿಗೊಬ್ಬರು



ಅನುಸರಿಕೊಂಡು ಹೋಗದೇ ವಿಧಿಯಿಲ್ಲ ಎಂದು ಹೇಳುತ್ತಾನೆ. "ಭಾರವಾದುದನ್ನೂ, ಹಗುರವಾದುದನ್ನೂ ಹಾಗೂ ದಡ್ಡನಾದವನ್ನೂ ಧರಿಸಿ, ಒಳ್ಳೆಯವರ ಹಾಗೂ ಕೆಟ್ಟವರ ನಿಧನವನ್ನೂ ಸಹಿಸಿಕೊಂಡು ಭೂದೇವಿಯು ವರಾಹಿನೊಡನೆ ಮಾಡಿಕೊಂಡ ಒಪ್ಪಂದದಂತೆ ಹಂದಿಗಳಿಗೂ ಸ್ವೇಚ್ಛಾವಿಹಾರದ ಅವಕಾಶವನ್ನು ಕಲ್ಪಿಸುತ್ತಾಳೆ (48). ರಾಕ್ಷಸ ಶಕ್ತಿಗಳನ್ನು ನಮ್ಮಿಂದ ದೂರ ಓಡಿಸು (49). ಗಂಧರ್ವರು, ಅಪ್ಸರೆಯರು, ಕಿರಾತಕರು, ಕಿಮೀದಿಗಳೆಂಬ ಪಿಶಾಚರು, ಎಲ್ಲಾ ರಾಕ್ಷಸರನ್ನು ನಮ್ಮಿಂದ ದೂರ ಓಡಿಸು (50)."


ರಾಕ್ಷಸರು ಅರಣ್ಯದೊಳಗಿದ್ದು ತಮ್ಮ ನೆಲವನ್ನು ಕಾಪಾಡುವ ರಕ್ಷಕರೆಂದು ಈಗಾಗಲೇ ತಿಳಿದಿದ್ದೇವೆ. ಗಂಧರ್ವರಿಂದ ಹಿಡಿದು, ಪಿಶಾಚರವರೆಗೂ ಎಲ್ಲಾ ರಾಕ್ಷಸರು ಅರಣ್ಯವಾಸಿಗಳೆಂದು ತಿಳಿಯುತ್ತದೆ. ಈ ಆರ್ಯರ ಮತ್ತು ಅಸುರರ ಸಂಘರ್ಷದಲ್ಲಿ ವೈದಿಕರಿಗೆ ಅನೇಕ ಬಾರಿ ಸೋಲುಂಟಾಗಿದೆ. ಅವರು ಎಷ್ಟೆಷ್ಟೋ ಬಾರಿ ಒಲ್ಲದ್ದನ್ನು ಸಹಿಸಬೇಕಾಗಿದೆ. "ನಾನು ಎಲ್ಲವನ್ನೂ ಸಹಿಸುತ್ತಾ, ಎಲ್ಲಕ್ಕೂ ಮೇಲ್ಪಂಕ್ತಿಯವನಾಗಿ ಈ ಭೂಮಿಯಲ್ಲಿದ್ದೇನೆ. ನಾನು ಎಲ್ಲೆಲ್ಲಿಯೂ ಜಯಶಾಲಿಯಾಗಿ, ಎಲ್ಲವನ್ನೂ ಗೆದ್ದು, ದಿಕ್ಕು ದಿಕ್ಕುಗಳಲ್ಲೂ ಎದುರಿಸಬಲ್ಲವನಾಗಿದ್ದೇನೆ" (54) ಎನ್ನುವ ಕವಿಯ ಧ್ವನಿಯಲ್ಲಿ ಆಶಯವಿದೆ. ಭರವಸೆಯ ಆಶಾಕಿರಣವಿದೆ.

"ಯಾವ ಭೂಮಿಯಲ್ಲಿ ಮನುಷ್ಯರು ಹಾಡುವರೋ, ನರ್ತಿಸುವರೋ, ಅಬ್ಬರಿಸುವರೋ, ಯುದ್ಧ ಮಾಡುತ್ತಾ ಅರಚುವರೋ, ನಗಾರಿ ಬಾರಿಸುವರೋ ಆ ಭೂಮಿಯು ನಮ್ಮ ವೈರಿಗಳನ್ನು ಹೊಡೆದೋಡಿಸಲಿ. ನಮ್ಮನ್ನು ಶತ್ರುರಹಿತರನ್ನಾಗಿ ಮಾಡಲಿ" (41) ಎನ್ನುವ ಈ ಶ್ಲೋಕದಲ್ಲಿ ಭೂಮಿಗಾಗಿ ಯಾವ ಮಟ್ಟದ ಯುದ್ಧಗಳಾಗುತ್ತಿದ್ದವು ಎಂಬುದನ್ನು ಗಮನಿಸಬಹುದು. ನಂತರ ಯುದ್ಧದಲ್ಲಿ ಆರ್ಯರು ಮೇಲುಗೈ ಸಾಧಿಸಿರುವುದನ್ನೂ ಗಮನಿಸಿ. "ನೀನು ಸರ್ಪರೂಪದ ವೃತ್ರಾಸುರನಿಂದ ದೂರ ಸರಿದು, ದೇವ ಹಿಂಸಕರೂ ದೂಷಕರೂ ಆದ ದಸ್ಯುಗಳನ್ನು ತಿರಸ್ಕರಿಸಿ, ಇಂದ್ರನನ್ನು ಆರಿಸಿಕೊಂಡೆ" (37). ಇದರಿಂದ ಇಂದ್ರನು ವೃತ್ರಾಸುರನನ್ನು ಸೋಲಿಸಿದನು ಎಂದು ತಿಳಿಯುತ್ತದೆ. "ಮಹಾಶೂರನಾದ ಇಂದ್ರನು ಜಾಗರೂಕತೆಯಿಂದ ನಿನ್ನನ್ನು ರಕ್ಷಿಸುತ್ತಾನೆ" (18). ಹೀಗೊಂದು ವೈದಿಕ ಕವಿಯ ಭರವಸೆ! "ಯಾವಳ ಮೇಲೆ ಭಗವಂತನಾದ ಮಹಾವಿಷ್ಣುವು ತ್ರಿವಿಕ್ರಮಾವತಾರ ಮಾಡಿ ತ್ರಿಲೋಕವನ್ನೇ ಅಳೆದನೋ, ಯಾವಳನ್ನು ಶಚೀಪತಿಯಾದ ಇಂದ್ರನು ತನಗಾಗಿ ಶತ್ರುರಹಿತಳನ್ನಾಗಿ ಮಾಡಿಕೊಂಡನೋ ಅಂತಹ ತಾಯಿಯು ಮಗನಿಗೆ ನೀಡುವಂತೆ ನನಗೂ ಹಾಲೂಡಿಸಲಿ" (10). ದೀರ್ಘಕಾಲದ ಯುದ್ಧಾನಂತರ ಶತ್ರುಗಳಿಲ್ಲದೇ ವೈದಿಕರು ಒಂದಷ್ಟು ಕಾಲ ಬಾಳಿದ್ದಿರಬಹುದು. ಒಟ್ಟಿನಲ್ಲಿ ಭೂಸೂಕ್ತದಲ್ಲಿ ಆರ್ಯರಿಗೂ ಮತ್ತು ಅಸುರರಿಗೂ ನಡೆದಿರುವ ಯುದ್ಧದ ಬಗ್ಗೆ ಉಲ್ಲೇಖಗಳಿದ್ದು ಇತರ ಫಲವತ್ತಿನ ಅಂಶಗಳೂ ಇವೆ.

ಲೌಕಿಕ ಫಲಾಪೇಕ್ಷಿಗಳಾಗಿದ್ದ ವೈದಿಕರ ಮಂತ್ರಗಳನ್ನು ಗಮನಿಸಿದರೆ, ಪ್ರಕೃತಿಯಿಂದಾಗಲಿ, ಇತರೇ ಶಕ್ತಿಗಳಿಂದಾಗಲಿ ತಮಗೆ ಬೇಕಾದುದನ್ನು ಅಪೇಕ್ಷಿಸಿ ಕೋರುವುದನ್ನು ನೋಡಬಹುದು. ಅದೇರೀತಿ ಜನಪದದಲ್ಲಿ ಈ ಬಗೆಯ ಕೋರಿಕೆಗಳಿಗಿಂತ ತಮ್ಮ ಕೃಷಿ ಅಥವಾ ಕಾಯಕವಾದ ಮೇಲೆ ದೊರಕಿದ ಸಂಪತ್ತಿಗೆ ಕೃತಜ್ಞತೆಯನ್ನು ಸಲ್ಲಿಸುವ ಆಚರಣೆಗಳನ್ನು ಹೆಚ್ಚಾಗಿ ಗಮನಿಸುತ್ತೇವೆ.

ಭೂ ಸಂವೇದನೆಯನ್ನು ಉಳ್ಳಂತಹ ಅನೇಕ ವಿಚಾರಗಳೂ ಭೂ ಸೂಕ್ತದಲ್ಲಿದ್ದು ಅವು ಭೂ ಧರ್ಮವನ್ನು ಪಾಲನೆ ಮಾಡುವಂತಹ ಭಾವುಕ ಉಲ್ಲೇಖಗಳಿವೆ. ಆ ವಿಚಾರಗಳಂತೂ ಈಗಲೂ ಪ್ರಸ್ತುತವಾಗಿವೆ. ಆ ಭೂಮಿ ಧರ್ಮದ ಸೂಕ್ಷ್ಮ ಸಂವೇದನೆಗಳನ್ನು, ಅದ್ಭುತವಾದ ಹಸಿರಿನ ಪಚ್ಚೆಯನ್ನು ಮುಂದೆ ನೋಡೋಣ. ●

# ಹೀಗೊಂದು ಜನಮರುಳ ಪ್ರಚಾರ!





ನೂತನ ಕೇಂದ್ರ ಸರ್ಕಾರದ ರಸ್ತೆ ಸಾರಿಗೆ, ಹೆದ್ದಾರಿ, ನೌಕಾಯಾನ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಾದ ನಿತಿನ್ ಗಡ್ಕರಿಯವರು ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಹೊಸ ಪರಿಹಾರವೊಂದನ್ನು ಕಂಡಿದ್ದಾರಂತೆ. ಭಾರತದ ಹೆದ್ದಾರಿಗಳ ಉದ್ದಕ್ಕೂ 200 ಕೋಟಿ ಮರಗಳನ್ನು ನೆಡುವ ಭವ್ಯ ಪ್ಲಾನ್ ಸಿದ್ಧವಾಗುತ್ತಿದೆಯಂತೆ.

ಮಂತ್ರಿ ಮಹಾಶಯರು "ನಮ್ಮ ದೇಶದಲ್ಲಿರುವ ಅಷ್ಟೂ ಹೆದ್ದಾರಿಗಳ ಒಟ್ಟು ಉದ್ದ 1 ಲಕ್ಷ ಕಿಲೋಮೀಟರ್ ಆಗುತ್ತದೆ. ಹೆದ್ದಾರಿಗಳ ಎರಡೂ ಪಕ್ಕಗಳಲ್ಲಿ 200 ಕೋಟಿ ಮರ ನೆಡುವ ಭವ್ಯ ಯೋಜನೆಯೊಂದನ್ನು ತಯಾರಿಸುವಂತೆ ಅಧಿಕಾರಿಗಳಿಗೆ ಹೇಳಿದ್ದೇನೆ. ಇದರಿಂದಾಗಿ ನಿರುದ್ಯೋಗಿಗಳಿಗೆ ಕೆಲಸ ಸಿಕ್ಕಂತಾಗುತ್ತದೆ, ಪರಿಸರ ಸಂರಕ್ಷಣೆಯೂ ಆಗುತ್ತದೆ" ಎಂದರೆಂದು ಇಕನಾಮಿಕ್ ಟೈಮ್ಸ್ ಪತ್ರಿಕೆ ವರದಿ ಮಾಡಿದೆ.

ವಾಹನಗಳು ಮತ್ತು ಕಾರ್ಖಾನೆಗಳಿಂದಾಗಿ ವಾತಾವರಣ ವಿಪರೀತವಾಗಿ ಮಲಿನಗೊಂಡಿರುವ ಇಂದಿನ ಸಂದರ್ಭದಲ್ಲಿ ನಿಜಕ್ಕೂ ಇದೊಂದು ಸ್ವಾಗತಾರ್ಹ ಹೆಜ್ಜೆ ಎನ್ನಲಡ್ಡಿಯಿಲ್ಲ. ಇಂತಹ ಆಣಿಮುತ್ತುಗಳನ್ನು ಆಲಿಸಿ ಪುಳಕಿತರಾಗದೆ ಉಳಿಯುವವರು ಮೂರ್ಖರೆ ಸರಿ! ಆದರೆ...

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಂಕಿಅಂಶಗಳ ಪ್ರಕಾರ ದೇಶದಲ್ಲಿರುವ ಹೆದ್ದಾರಿಗಳ ಒಟ್ಟು ಉದ್ದ 79,243 ಕಿಲೋಮೀಟರ್ ಮೀರುವುದಿಲ್ಲ. ಸಚಿವರಿಗೆ 1 ಲಕ್ಷದ ಸಂಖ್ಯೆ ಎಲ್ಲಿಂದ ಸಿಕ್ಕಿತೊ ಗೊತ್ತಿಲ್ಲ. ಇರಲಿ, 1 ಲಕ್ಷ ಎಂದೇ ಇಟ್ಟುಕೊಳ್ಳೋಣ. ಮರಗಳನ್ನು ಹೆದ್ದಾರಿಯ ಇಕ್ಕೆಲಗಳಲ್ಲೂ ನೆಡುವುದಾದಲ್ಲಿ 2 ಲಕ್ಷ ಕಿ.ಮೀ. ಲಭ್ಯವಾಗುತ್ತದೆ. 2 ಲಕ್ಷ ಕಿ.ಮೀ. ನಲ್ಲಿ 200 ಕೋಟಿ ಮರಗಳೆಂದರೆ 1 ಲಕ್ಷ ಕಿ.ಮೀ.ನಲ್ಲಿ 100 ಕೋಟಿ ಮರಗಳೆಂದಾಯ್ತು. ಅರ್ಥಾತ್ ಪ್ರತಿ 1 ಕಿ.ಮೀ.ನಲ್ಲಿ 10,000 ಮರಗಳು ಅಥವಾ ಪ್ರತಿಯೊಂದು ಮೀಟರ್‌ನಲ್ಲಿ 10 ಮರಗಳು ಅಥವಾ ಪ್ರತಿಯೊಂದು ಅಡಿಯಲ್ಲಿ 3 ಮರಗಳು! ಒಂದೊಂದು ಮರದ ಸುತ್ತಳತೆಯನ್ನೂ ಅದರ ಗೆಲ್ಲುಗಳ ಹರಹನ್ನೂ ಬಲ್ಲ ಎಂಥವರಿಗೂ ಒಂದು ಅಡಿಯಲ್ಲಿ ಮೂರು ಮರಗಳನ್ನು ಬೆಳೆಯುವುದು ಭೌತಿಕವಾಗಿ ಅಸಾಧ್ಯವೆಂದು ಕೂಡಲೆ ತಿಳಿಯುತ್ತದೆ.

. ಆದರೆ ಸದಾ ಜನಮರುಳ ಪ್ರಚಾರದಲ್ಲೇ ತಲ್ಲೀನರಾಗಿರುವವರಿಗೆ ಇದೆಲ್ಲ ಹೇಗೆ ಅರ್ಥವಾಗಬೇಕು? ನಿಜ ಹೇಳಬೇಕೆಂದರೆ ಈಗಾಗಲೆ ಇಂತಹ ಹತ್ತುಹಲವು ನಂಬಲಸಾಧ್ಯ ಕನಸುಗಳನ್ನು ಮಾರಿ ಅಧಿಕಾರಕ್ಕೆ




ಬಂದಿರುವವರ ಸ್ವಪ್ನಕಣಜಕ್ಕೆ ಇದೊಂದು ಹೊಸ ಸೇರ್ಪಡೆ ಅಷ್ಟೆ. ಕಳೆದ ವರ್ಷ ಉತ್ತರಾಖಂಡದ ಪ್ರವಾಹದ ವೇಳೆ ಸಿಕ್ಕಿಬಿದ್ದ ಸಾವಿರಾರು ಗುಜರಾತಿಗಳನ್ನು ಚಿಟಿಕೆ ಹೊಡೆಯುವಷ್ಟರಲ್ಲಿ ಪಾರು ಮಾಡಿದ ರ್‍ಯಾಂಬೊ ಸಾಹಸಗಾಥೆ, 2012ರ ಗುಜರಾತ್ ಅಸೆಂಬ್ಲಿ ಚುನಾವಣೆಗಳ ಕಾಲದಲ್ಲಿ 5 ವರ್ಷಗಳೊಳಗಾಗಿ 50 ಲಕ್ಷ ಮನೆ ನಿರ್ಮಾಣದ ಭರವಸೆ ಮುಂತಾದ ಮಹೋನ್ನತ ಸ್ವಪ್ನಸೌಧಗಳನ್ನು ಮರೆಯಲು ಸಾಧ್ಯವೇ? ಪ್ರಾಯಶಃ ಸಮಸ್ಯೆ ಏನೆಂದರೆ ಅಧಿಕಾರದ ಚುಕ್ಕಾಣಿ ವಹಿಸಿಕೊಂಡವರಿನ್ನೂ ಚುನಾವಣೆಗಳ ಮೂಡ್‌ನಿಂದ ಹೊರಬಂದಂತಿಲ್ಲ.

(www.truthofgujarat.com)


# ಸೌಜನ್ಯಳ ಕೊಲೆಗಡುಕರನ್ನು ರಕ್ಷಿಸಿದ್ದು ಬಿಜೆಪಿಯವರಲ್ಲವೇ?

"ಕೇವಲ ಉತ್ತರ ಪ್ರದೇಶದಲ್ಲಿ ಮಾತ್ರ ರಾಜಕಾರಣಿಗಳು ಅತ್ಯಾಚಾರಿಗಳನ್ನು ಮತ್ತು ಕೊಲೆಗಾರರನ್ನು ರಕ್ಷಿಸುತ್ತಾರೆ, ಆದರೆ ಬೇರೆ ರಾಜ್ಯಗಳಲ್ಲಿ ಈ ರೀತಿ ಆಗುವುದಿಲ್ಲ" ಎಂದು ಕೇಂದ್ರ ಮಂತ್ರಿ ಉಮಾ ಭಾರತಿಯವರು ಹೇಳಿಕೆ ಕೊಟ್ಟಿದ್ದಾರೆ.

ಆದರೆ ಅವರ ಬಿಜೆಪಿ ಪಕ್ಷವೇ ಅಧಿಕಾರದಲ್ಲಿ ಇರುವಾಗ ನಡೆದ ಧರ್ಮಸ್ಥಳದ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಕರ್ನಾಟಕದ ಇಡೀ ಬಿಜೆಪಿ ಸರಕಾರವೇ ಅತ್ಯಾಚಾರಿಗಳ ರಕ್ಷಣೆಗೆ ನಿಂತು ಪೊಲೀಸರ ಮೇಲೆ ಒತ್ತಡ ತಂದು ನಿಜವಾದ ಕೊಲೆಗಾರರನ್ನು ರಕ್ಷಿಸಿ ಒಬ್ಬ ಮಾನಸಿಕ ರೋಗಿಯನ್ನು ಪ್ರಕರಣದಲ್ಲಿ ಫಿಕ್ಸ್ ಮಾಡಲಿಲ್ಲವೇ? ಜತೆಗೆ ಈಗ ಕಾಂಗ್ರೆಸ್ ಸರಕಾರವಿರುವಾಗ ಇದರ ಸಿಐಡಿ ತನಿಖೆ ನಡೆದು ತಿಪ್ಪೆ ಸಾರಿಸಲಾಯಿತು ತಾನೇ! ಒಟ್ಟಾರೆ ಕರ್ನಾಟಕದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳ ರಾಜಕಾರಣಿಗಳು ಸೌಜನ್ಯ ಪ್ರಕರಣದಲ್ಲಿ ನಿಜವಾದ ಕೊಲೆಗಾರರನ್ನು ರಕ್ಷಿಸಲಿಲ್ಲವೇ? ಪೇಜಾವರರ ಸಹಿತ ಕರಾವಳಿಯ ಹಲವು ಕಾವಿಧಾರಿಗಳೂ ಅತ್ಯಾಚಾರಿಗಳ ಪರ ವಾದಿಸಿರಲಿಲ್ಲವೇ? ಹಾಗಿರುವಾಗ ಕರ್ನಾಟಕದಲ್ಲಿ ತನ್ನ ಪಕ್ಷವೇ ಅತ್ಯಾಚಾರಿಗಳ ರಕ್ಷಣೆ ಮಾಡಿರುವುದು ಬಿಜೆಪಿಯ ಉಮಾ ಭಾರತಿಗೆ ಕಾಣಿಸದೇ ಕೇವಲ ಯೂಪಿ ರಾಜ್ಯದ ಪ್ರಕರಣಗಳು ಮಾತ್ರ ಯಾಕೆ ಕಾಣಿಸುತ್ತಿವೆ?

ಆಸಾರಾಮ್ ಬಾಪು ಎಂಬ ಮುದಿ ಸಿಂಧಿ ಕಾಮುಕ ಕಾವಿಯುಟ್ಟು ಹಲವಾರು ಮಹಿಳೆಯರ ಮೇಲೆ ಅತ್ಯಾಚಾರ ಮಾಡಿದ್ದರೂ ಇದೇ ಉಮಾ ಭಾರತಿ ಆ ಆಸಾರಾಮನ ಪರ ವಹಿಸಿಕೊಂಡು ಮಾತನಾಡಿರಲಿಲ್ಲವೇ? ಉತ್ತರ ಪ್ರದೇಶ ರಾಜ್ಯವು ಪೂರ್ಣವಾಗಿ ಅಪರಾಧೀಕರಣಗೊಂಡಿರುವುದು ನಿಜ. ಆದರೆ ಇದಕ್ಕೆ ಸಮಾಜವಾದಿ ಪಕ್ಷದ ಜೊತೆಗೆ ಅಲ್ಲಿಯ ಇತರ ಎಲ್ಲಾ ರಾಜಕೀಯ ಪಕ್ಷಗಳೂ ನೇರ ಹೊಣೆಯಾಗಿವೆ ಎಂಬುದೂ ಅಷ್ಟೇ ಸತ್ಯ.

-ಅಭಿಷೇಕ್. ಎ. ಪದಿವಾಳ್, ಸುಳ್ಯ




## ಒಂದು ದಿನದಲ್ಲಿ ದೇವಾಲಯವಾಗಿದ್ದ ಮರ ಕಕ್ಕಸಾದ ಬಗೆ

ಕಳೆದ ಗುರುವಾರ ಜೂನ್ 12 ರಂದು ನಾನು ನನ್ನ ಮನೆಯಿಂದ ಸ್ವಲ್ಪ ದೂರವಿರುವ ಮಂಗಳೂರಿನ ಗಾಂಧಿನಗರ ಅಂಚೆ ಕಚೇರಿಗೆ ಬೆಳಗ್ಗೆ 10 ಗಂಟೆಗೆ ಟೆಲಿಫೋನ್ ಬಿಲ್ ಕಟ್ಟಲು ಹೋಗಿದ್ದೆ. ಅಲ್ಲಿ ಅಂಚೆ ಕಚೇರಿಯ ಎದುರಿಗೆ ರಸ್ತೆ ಬದಿಯಲ್ಲಿರುವ ಆಲದ ಮರಕ್ಕೆ ಕೆಲವು ಯುವ ಮಹಿಳೆಯರು ನೂಲು ಸುತ್ತಿ ಹೂವು ಕುಂಕುಮಗಳಿಂದ ಶೃಂಗರಿಸಿ ಪೂಜಿಸುತ್ತಿದ್ದರು.

ಇಬ್ಬರು ವೃದ್ಧ ಮಹಿಳೆಯರು ಅಂಚೆ ಕಚೇರಿಯ ಮೆಟ್ಟಿಲ ಮೇಲೆ ಕುಳಿತು ಹೊಸದಾಗಿ ಮದುವೆಯಾದ ಮೂರು ಯುವತಿಯರಿಗೆ ಪೂಜೆಯ ಬಗ್ಗೆ ನಿರ್ದೇಶನ ಕೊಡುತ್ತಿದ್ದರು. ಅಂಚೆ ಕಚೇರಿಯ ಮಹಿಳಾ ಕ್ಲಾರ್ಕ್‌ಗೆ ಇದೇನು ನಡೆಯುತ್ತಿದೆ ಎಂದು ಕೇಳಿದೆ. ಅದಕ್ಕೆ ಆ ಕ್ಲಾರ್ಕ್ "ಇಂದು ವಟಸಾವಿತ್ರಿ ವ್ರತ. ಹಾಗಾಗಿ ಮುತ್ತೈದೆಯರು ಆಲದ ಮರಕ್ಕೆ ಪೂಜೆ ಮಾಡುತ್ತಿದ್ದಾರೆ. ಪ್ರತಿವರ್ಷ ಇಲ್ಲಿ ಮಹಿಳೆಯರು ಬಂದು ಹೀಗೆ ಪೂಜೆ ಮಾಡುತ್ತಾರೆ"ಎಂದು ಹೇಳಿದರು.

ಅದೇ ದಿನ ಸಾಯಂಕಾಲ ಏಳು ಗಂಟೆಗೆ ನಾನು ಮನೆಯ ಸಾಮಾನು ತರಲು ಆ ರಸ್ತೆಯ ಮೂಲಕ ಮಾರ್ಕೆಟ್ಟಿಗೆ ಹೋಗುತ್ತಿದ್ದಾಗ ಯಾರೋ ಒಬ್ಬ ಅದೇ ಆಲದ ಮರಕ್ಕೆ ಉಚ್ಚೆ ಉಯ್ಯುತ್ತಿದ್ದ. ಮರುದಿನ ಬೆಳಗಿನ ಜಾವ ಆ ರಸ್ತೆಯ ಮೂಲಕ ನಾನು ವಾಕಿಂಗ್ ಹೋಗುತ್ತಿದ್ದಾಗ ಮರದಡಿ ಎರಡು ಸಾರಾಯಿ ಬಾಟಲ್ ಮತ್ತು ಕೋಳಿಯ ಎಲುಬುಗಳು ಬಿದ್ದಿದ್ದು ನೋಡಿ ರಾತ್ರಿ ಅಲ್ಲಿ ಯಾರೋ ನಡೆಸಿರಬಹುದಾದ ಗುಂಡು-ತುಂಡಿನ ಸಮಾರಾಧನೆಯ ಅಂದಾಜಾಯಿತು.

ಸ್ವಲ್ಪ ಹೊತ್ತಿಗೆ ನಾನು ವಾಕಿಂಗಿನಿಂದ ಹಿಂದೆ ಬರುವಾಗ ರಸ್ತೆಯ ಆಚೆ ಬದಿಯಲ್ಲಿ ನಿರ್ಮಾಣ ಹಂತದಲ್ಲಿದ್ದ ಕಟ್ಟಡದ ಒಬ್ಬ ಕಾರ್ಮಿಕ ಹೆಂಗಸು ತನ್ನ ಪುಟ್ಟ ಮಗುವನ್ನು ಆ ಆಲದ ಮರದಡಿ ಕೂಡಿಸಿ ಕಕ್ಕಸು ಮಾಡಿಸುತ್ತಿದ್ದಳು. ಮರದ ಮೇಲಿದ್ದ ಎರಡು ಮಂಗಗಳು ನನ್ನನ್ನು ನೋಡಿ ಅಣಕಿಸಿದಂತೆ ಅನಿಸಿತು.

ಒಟ್ಟಾರೆ ಕೇವಲ 24 ಗಂಟೆ ಅವಧಿಯೊಳಗೆ ಒಂದು ಆಲದ ಮರವು ದೇವಾಲಯವಾಗಿ-ಮೂತ್ರದ ದೊಡ್ಡಿಯಾಗಿ- ಶರಾಬು ಬಾರ್ ಆಗಿ-ಕೊನೆಗೆ ಕಕ್ಕಸಾಗಿ ಪರಿವರ್ತನೆಯಾಗಿದನ್ನು ಕಂಡಾಗ ಡಾ. ಕಲಬುರ್ಗಿ ಮತ್ತು ಯು.ಆರ್.ಅನಂತಮೂರ್ತಿಯವರ ಮೂತ್ರ ಮತ್ತು ಭೂತದ ಕಲ್ಲಿನ ಪ್ರಸಂಗದ ವಿವಾದ ನೆನಪಾಯಿತು. (ಕಣ್ಣು ಹಾಯಿಸಿದಲ್ಲೆಲ್ಲಾ ಗುಡಿ ಗುಂಡಾರ ದೇವರ ಮೂರ್ತಿ ನಾಗಬನಗಳ ಕಂಡು, ಉಗುಳಿದರೆ ಸೀನಿದರೆ ಎಂಜಲು ದೇವರ ಮೇಲೆ ಬೀಳಬಹುದೆಂಬ ಭಯದಿಂದ ಉಗುಳು ಸಿಂಬಳ ನುಂಗಿ ನುಂಗಿ ಹೊಟ್ಟೆ ಕುಂಬಳವಾಯಿತೋ ಸರ್ವಜ್ಞ!)

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

## ಮೋದಿಯ ಹಿಂದೆ ಬರುತ್ತಿದೆ ಹಿಂದಿ ಸಾಮ್ರಾಜ್ಯ

ಮೋದಿ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ ಎರಡೇ ವಾರದಲ್ಲಿ ಎಲ್ಲೆಡೆ ಹಿಂದಿ ಭಾಷೆ ವಿಜೃಂಭಿಸತೊಡಗಿದೆ. ಇತರ ಭಾರತೀಯ ಭಾಷೆಗಳ ತೀವ್ರ ಅವನತಿ ಶುರುವಾದಂತೆ ಕಾಣುತ್ತಿದೆ. ಹಿಂದಿನ ಸರಕಾರಗಳಿದ್ದಾಗಲೇ ಕರ್ನಾಟಕದಲ್ಲಿ ಕೇಂದ್ರ ಸರಕಾರದ ಕಚೇರಿ, ರೈಲ್ವೇ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಹಿಂಬಾಗಿಲಿನಿಂದ ಹಿಂದಿ ಭಾಷೆಯ ಹೇರಿಕೆ ನಡೆದೇ ಇತ್ತು. ಇನ್ನು ಈ ಹೊಸ ಸರಕಾರದ ಭಯಂಕರ ಹಿಂದಿ ದುರಭಿಮಾನ ನೋಡಿದ ನಂತರ ಸರಕಾರಿ ಕಚೇರಿ, ರೈಲ್ವೇ , ಕೇಂದ್ರೋದ್ಯಮ ಮತ್ತೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಕನ್ನಡಿಗರ ಭಾವನೆಗಳನ್ನು ಕಡೆಗಣಿಸಿ ಹಿಂದಿಯನ್ನು ಬಲಾತ್ಕಾರದಿಂದ ಹೇರುವುದು ಖಂಡಿತ ಎನಿಸುತ್ತಿದೆ.

. ಹಿಂದಿ ದುರಭಿಮಾನಿಗಳನ್ನು ಮೆಚ್ಚಿಸಲು ಅರೆ-ಕನ್ನಡಿಗ ಅನಂತಕುಮಾರ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದು ಹಿಂದಿಯಲ್ಲಿ. ಹೀಗೇ ಮುಂದುವರಿದರೆ ಇನ್ನು ಐದು ವರ್ಷದೊಳಗೆ ರೈಲ್ವೇ , ಕೇಂದ್ರೋದ್ಯಮ ಮತ್ತು ಸಾರ್ವಜನಿಕ ಬ್ಯಾಂಕುಗಳಲ್ಲಿ ಕನ್ನಡ ಸಂಪೂರ್ಣ ಮಾಯವಾಗುವುದು ಖಂಡಿತ. ಕನ್ನಡಿಗರೇ ಈಗಲೇ ಎಚ್ಚೆತ್ತುಕೊಳ್ಳಿ, ಹಿಂದೂತ್ವದ ಎಡೆಯಲ್ಲಿ ಕನ್ನಡತ್ವ ಅಳಿಯುವುದು ಬೇಡ.

ಕಾವೇರಿ ವಿಷಯದಲ್ಲಿ ತಮಿಳುನಾಡಿಗೆ ಶಾಶ್ವತ ಲಾಭವಾಗುವಂತಹ ನಿರ್ಧಾರಗಳನ್ನು ತೆಗೆದುಕೊಳ್ಳಲು ಮೋದಿ ಸರಕಾರ ತೆರೆಮರೆಯಲ್ಲಿ ನಡೆಸಿರುವ ಸಿದ್ಧತೆ ಈಗಾಗಲೇ ಬಹಿರಂಗಗೊಂಡಿದೆ. ಇನ್ನು ಮುಂದೆ ಎನ್‌ಡಿಎ ಆಡಳಿತದಡಿ ಕರ್ನಾಟಕಕ್ಕೆ ಏನೇನು ಗ್ರಹಚಾರ ಕಾದಿದೆಯೋ.

-ಹರೀಶ್. ಎಂ. ರಾವ್, ಉಡುಪಿ

## ದುಃಖ, ಕೋಪ ಮೂಡಿತು

ಜೂನ್ 18, 2014ರ ಸಂಚಿಕೆಯ 'ಕಂಡಹಾಗೆ' ಅಂಕಣವು ಮನದಲ್ಲಿ ದುಃಖವನ್ನು, ಮರುಕ್ಷಣ ಕ್ರೋಧವನ್ನೂ ಮೂಡಿಸಿತು.

-ಮೋಹನ್, ಮೈಸೂರು


## ಮಾಡದ ತಪ್ಪಿಗೆ ಯುಆರ್‌ಎಗೆ ಶಿಕ್ಷೆ

ಯಾರೋ ಪತ್ರಿಕೆಯವರು, ಲೇಖಕರು ತಿರುಚಿದ ಹೇಳಿಕೆಯಿಂದಾದ ಪರಿಣಾಮವನ್ನು ಪಾಪ ಅನಂತಮೂರ್ತಿ ಅವರು ಅನುಭವಿಸಬೇಕಾಯಿತು. ಅನಂತಮೂರ್ತಿಯವರ ಪುಸ್ತಕದಲ್ಲಿನ ಹೇಳಿಕೆ ಹೀಗಿದೆ: "ಮರಗಳ ಕೆಳಗಿದ್ದ ದೆವ್ವಗಳ ಕಲ್ಲುಗಳ ಮೇಲೆ ನಾನು ಮೂತ್ರ ವಿಸರ್ಜನೆ ಮಾಡಿದ್ದೆ."

ಅಂದರೆ ಅವರು ದೆವ್ವಗಳ ಕಲ್ಲಿನ ಮೇಲೆ ಮೂತ್ರ ವಿಸರ್ಜನೆ ಮಾಡಿದ್ದರೆ ಹೊರತು ದೇವರ ಕಲ್ಲಿನ ಮೇಲಲ್ಲ. ಆದರೂ ಈ ಕುರಿತು ಪ್ರೊ. ಕಲ್ಬುರ್ಗಿಯವರು ಮಾಡಿದ ಎಡವಟ್ಟು ಹೇಳಿಕೆಯಿಂದ ಅನಂತಮೂರ್ತಿಯವರು ದೊಡ್ಡ ವಿವಾದಕ್ಕೆ ಈಡಾಗುವಂತಾಯಿತು. ಅದರಲ್ಲೂ ಹಲವು ಪತ್ರಕರ್ತರಿಂದಾಗಿ ಇದು "ಧರ್ಮ ಜಾತಿ ದೇವರು ಆಚಾರ ವಿಚಾರ ಮೂರ್ತಿ ಪೂಜೆಯ" ಕಡೆಗೆಲ್ಲ ಚರ್ಚೆ ತಿರುವು ಪಡೆದುಕೊಂಡಿತು. ಪರಿಣಾಮವಾಗಿ ಜನರು ಅನಂತಮೂರ್ತಿಯವರನ್ನು ಉಗ್ರವಾಗಿ, ಕೀಳು ಪದಗಳಿಂದ ಟೀಕೆ ಮಾಡಿದರು. ಇಂತಹ ಟೀಕೆಗಳಿಂದ ಅ ಪಾಪ ಆ ಹಿರಿಯ ಜೀವ ಅದೆಷ್ಟು ನೊಂದಿತೋ.

ಅವರ ಬಗೆ ಕ್ಷಮೆ ಇರಲಿ, ಅನಂತಮೂರ್ತಿಗಳೆ!

ಅನಂತಮೂರ್ತಿಯವರನ್ನು ಟೀಕಿಸಿದ ಜನರಿಗೆ ನನ್ನಿಂದ ಒಂದಿಷ್ಟು ಪ್ರಶ್ನೆಗಳು: "ಇದೇನಾ ನಮ್ಮ ಸಂಸ್ಕೃತಿ? ಹಿರಿಯ ಸಾಹಿತಿಗಳಿಗೆ ನೀವು ಕೊಡುವ ಗೌರವ ಇದೇನಾ? ಅವರು ಮಾಡದಿರುವ ತಪ್ಪಿಗೆ ಅವರ ಮೇಲೆ ಗೂಬೆ ಕೂರಿಸಿ ನಿಮ್ಮ ಟೀಕಾಪ್ರಹಾರವನ್ನು ಮಾಡಿದ್ದು ಎಷ್ಟು ಸರಿ? ಅನಂತಮೂರ್ತಿಯವರು ಮೋದಿ ಪ್ರಧಾನಿ ಆಗುವುದನ



# ರಸೆಲ್ ಕ್ರೋ: ಒಂದು ಬ್ಯೂಟಿಫುಲ್ ಮೈಂಡ್

'ಗ್ಲಾಡಿಯೇಟರ್', 'ನೋಹ', 'ಎ ಬ್ಯೂಟಿಫುಲ್ ಮೈಂಡ್', 'ಅಮೆರಿಕನ್ ಗ್ಯಾಂಗ್‌ಸ್ಟರ್', 'ಎಲ್.ಎ. ಕಾನ್ಫಿಡೆನ್ಶಿಯಲ್', 'ಮಾಸ್ಟರ್ ಅಂಡ್ ಕಮಾಂಡರ್: ದಿ ಫಾರ್ ಸೈಡ್ ಆಫ್ ದಿ ವರ್ಲ್ಡ್', 'ಎ ಗುಡ್ ಇಯರ್', 'ದಿ ಇನ್‌ಸೈಡರ್' ತರಹದ ಅದ್ಭುತ ಸಿನಿಮಾಗಳಲ್ಲಿ ನಟಿಸಿರುವ, ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿ ಗಳಿಸಿರುವ ನಟ, ಸಂಗೀತಗಾರ ರಸೆಲ್ ಕ್ರೋ ಇತ್ತೀಚೆಗಷ್ಟೇ ತನ್ನ ಐವತ್ತು ವಸಂತಗಳನ್ನು ಪೂರೈಸಿರುವ ನೆಪದಲ್ಲಿ ಹೀಗೊಂದು ಬರಹ...



ರಸೆಲ್ ಕ್ರೋ ಯಾಕೆ ನಮ್ಮನ್ನು ಕಾಡುತ್ತಾನೆ ಎಂಬ ಪ್ರಶ್ನೆಗೆ 'ಗ್ಲಾಡಿಯೇಟರ್', 'ನೋಹ', 'ಎ ಬ್ಯೂಟಿಫುಲ್ ಮೈಂಡ್', 'ಅಮೆರಿಕನ್ ಗ್ಯಾಂಗ್‌ಸ್ಟರ್', 'ಎಲ್.ಎ. ಕಾನ್ಫಿಡೆನ್ಶಿಯಲ್', 'ಮಾಸ್ಟರ್ ಅಂಡ್ ಕಮಾಂಡರ್: ದಿ ಫಾರ್ ಸೈಡ್ ಆಫ್ ದಿ ವರ್ಲ್ಡ್', 'ಎ ಗುಡ್ ಇಯರ್', 'ದಿ ಇನ್‌ಸೈಡರ್' ತರಹದ ಸಿನಿಮಾಗಳು ಉತ್ತರವಾಗಿ ನೆನಪಿಗೆ ಬರುತ್ತವೆ. ಹೀಗೆ ರಸೆಲ್ ಕ್ರೋ ಬಗ್ಗೆ ಯೋಚಿಸುವಾಗ ಈತನ ಸಿನಿಮಾ, ಸಂಗೀತ ಪ್ರೇಮ, ಕ್ರೀಡಾಸಕ್ತಿಗಳೂ ನಮ್ಮನ್ನು ಆಕರ್ಷಿಸದೇ ಇರವು.

ಐವತ್ತು ವರ್ಷ ತುಂಬಿರುವ ಈತ ನಮ್ಮ ಸಮಾನದವನು ಎಂದು ಹೇಳಿಕೊಳ್ಳುವುದೇ ಹೆಮ್ಮೆಯ ಸಂಗತಿ; ರಸೆಲ್ ಮಾಮೂಲಿ ನಟನಾಗಿದ್ದರೆ, ಮಾಮೂಲಿ ತರಹದ ಸಿನಿಮಾಗಳಲ್ಲಿ ನಟಿಸಬಲ್ಲ, ಮಾಮೂಲಿ ಬಗೆಯ ವ್ಯಕ್ತಿಯಾಗಿದ್ದರೆ ಅಷ್ಟು ಸೆಳೆಯುತ್ತಿರಲಿಲ್ಲ. ಆದರೆ ರಸೆಲ್, ಕಮಲ್‌ಹಾಸನ್, ರಾಮ್ ಗೋಪಾಲ್ ವರ್ಮ ಮತ್ತು ಬಾಲಾ ತರಹದ ಮಂದಿ ಒಂದು ಬಗೆಯಲ್ಲಿ ತಾವೇ ರೂಪಿಸಿಕೊಂಡ ಜಗತ್ತಿನಲ್ಲಿ ಜೀವಿಸಬಲ್ಲಂಥವರು. ನಮಗೆ ಬಾಲಾ ಅಥವಾ ರಾಮ್ ಗೋಪಾಲ್‌ವರ್ಮರ ಒಳಲೋಕ ಗ್ರಹಿಕೆಗೆ ಸಿಕ್ಕಿದರೆ, ಅವರು ಬಣ್ಣದ ಮಾತುಗಳಾಡುತ್ತ ಎಲ್ಲರಿಗೂ ಒಳ್ಳೆಯವರಾಗಿರುತ್ತಾ ಬಾಳುವುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ನೇರನುಡಿ, ನಿಷ್ಠುರತೆ, ಸಹಜತೆಗಳನ್ನೆಲ್ಲಾ ಒಮ್ಮೆಲೇ ಬಿಂಬಿಸಿ ಅನೇಕರ ದೃಷ್ಟಿಗೆ ವಕ್ರವಾಗಿ ಕಾಣುವ ಈ ರೋಚಕ ಜೀವಿಗಳ ಪ್ರಪಂಚ ರಂಗುರಂಗಾಗಿರುವಂಥದ್ದು, ಸೋಲುಗೆಲುವನ್ನೂ ಕೂಡ ತನ್ನ ಪರಿಧಿಯಾಚೆಗಿರಿಸಿ ಉಳಿದುಕೊಂಡದ್ದು.

ಈ ರಸೆಲ್ ಕ್ರೋನ ಚಿತ್ರಗಳಲ್ಲಿ ಈತನೇ ಆಕರ್ಷಣೆ ಅಥವಾ ಕೇಂದ್ರ. ರಸೆಲ್ ಒಪ್ಪಿಕೊಂಡ ಪಾತ್ರವನ್ನು ನಿರ್ದೇಶಕನ ನಿರೀಕ್ಷೆಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ನಿರ್ವಹಿಸಿ ಜನಕ್ಕೆ ರಂಜನೆ ನೀಡುತ್ತಾನೆ. ಅಭಿನಯವನ್ನು ರಕ್ತಗತ ಮಾಡಿಕೊಂಡಿರುವ ರಸೆಲ್ ಕ್ರೋನ ವಿಶೇಷ ಅಂಶ ಯಾವುದೆಂದರೆ ತಾನು ನಿರ್ವಹಿಸುತ್ತಿರುವ ಪಾತ್ರಕ್ಕೆ ಜೀವ ತುಂಬುತ್ತಾ ತಾನೇ ಆ ಪಾತ್ರವಾಗಿಬಿಡುವುದು. ಅಥವಾ ಆ ಪಾತ್ರವನ್ನೇ ತನಗೆ ಒಗ್ಗಿಸಿಕೊಳ್ಳುವುದು.

ಈತ 'ಗ್ಲಾಡಿಯೇಟರ್' ಚಿತ್ರದಲ್ಲಿ ನಟಿಸುವುದಕ್ಕಿಂತ ಮುಂಚೆ ಒಂದಿಷ್ಟು ಸಿನಿಮಾಗಳಲ್ಲಿ ನಟಿಸಿದ್ದರೂ ಈತ ಪೂರ್ಣಪ್ರಮಾಣದಲ್ಲಿ ಪ್ರೇಕ್ಷಕರಿಗೆ ದಕ್ಕಿರಲಿಲ್ಲ; 'ಫಾರ್ ದಿ ಮೊಮೆಂಟ್' ಚಿತ್ರದಲ್ಲಿ ಆಸ್ಟ್ರೇಲಿಯನ್ ಏರ್ ಮ್ಯಾನ್ ಆಗಿದ್ದುಕೊಂಡು ವಿವಾಹಿತೆಯೊಬ್ಬಳನ್ನು ಪ್ರೇಮಿಸುವ ಪಾತ್ರವಾಗಲೀ, 'ವರ್ಚುಯೋಸಿಟಿ' ಚಿತ್ರದಲ್ಲಿನ ಸೀರಿಯಲ್ ಕಿಲ್ಲರ್ ಪಾತ್ರವಾಗಲೀ, 'ಎಲ್.ಎ. ಕಾನ್ಫಿಡೆನ್ಶಿಯಲ್' ಚಿತ್ರದ ವಿಶಿಷ್ಟ ಅಧಿಕಾರಿಯ ಪಾತ್ರವಾಗಲೀ ರಸೆಲ್ ಕ್ರೋ ಒಳಗೆ ಸುಪ್ತವಾಗಿ ಅಡಗಿರಬಹುದಾದ ಪ್ರತಿಭಾವಂತ ಕಲಾವಿದನ ದರ್ಶನ ಮಾಡಿಸಿರಲಿಲ್ಲ.

ಚಿತ್ರವನ್ನು ಇದ್ದಕ್ಕಿದ್ದ ಹಾಗೆ ತನ್ಮಯತೆಯ ತುತ್ತತುದಿಗೆ ತಲುಪಿಸಬಲ್ಲ ರಸೆಲ್ ಕಣ್ಣಿನಲ್ಲೇ ಮಾತು, ಮುಖದ ಗೆರೆಗಳಲ್ಲೇ ಆಂತರ್ಯದ ಭಾವನೆಗಳನ್ನು ವ್ಯಕ್ತಪಡಿಸಲು ಯತ್ನಿಸುತ್ತಾನೆ. 'ಎ ಬ್ಯೂಟಿಫುಲ್ ಮೈಂಡ್' ಚಿತ್ರದ ಕ್ಲಾಸ್ ರೂಂನಲ್ಲಿ ತಾನು ಬೋಧಿಸಬೇಕಿರುವ ಪುಸ್ತಕವನ್ನು ಕಸದಬುಟ್ಟಿಗೆ ಎಸೆಯುವುದಿರಬಹುದು, ಸೈಕಲ್ಲೇರಿ ಕಾಲೇಜು ಆವರಣದಲ್ಲಿ ತನ್ನ ಪಾಡಿಗೆ ತಾನು ಸುತ್ತಿದ ಕಡೆಯೇ ಸುತ್ತುವುದಿರಬಹುದು, '3 : 10 ಟು ಯೂಮ' ಚಿತ್ರದ ಗಾಂಭೀರ್ಯತೆಯಿರಬಹುದು- ಇವು ಈತನ ಅಭಿನಯ ವೈವಿಧ್ಯತೆಗೆ ಕೆಲವು ಉದಾಹರಣೆಗಳಷ್ಟೇ. ಇದಕ್ಕೆ ಪೂರಕವಾಗಿ ಒಂದೆರಡು ಮಾತು ಸೇರಿಸಬೇಕು. ಎಂತಹ ಪಾತ್ರಕ್ಕೂ ಒಪ್ಪುವ ರಸೆಲ್ ಕ್ರೋ ಹಾಲಿವುಡ್ ಕಂಡ ವಿಶಿಷ್ಟ ನಟ.


ನಿರ್ದೇಶಕನ ತಂತ್ರ, ಆಶಯಗಳನ್ನು ಅರ್ಥಮಾಡಿಕೊಂಡು ನಟಿಸಬೇಕಾದುದು ನಟನ ಧರ್ಮ. ಇದನ್ನು ಮನಗಂಡಿರುವ ರಸೆಲ್ ತಾನು ನಟಿಸುವ ಪಾತ್ರಕ್ಕೆ ನಟನೊಬ್ಬನಿಂದ ಬೇಕಿರುವ ಅಗತ್ಯತೆಗಳನ್ನು ತುಂಬಿಕೊಡಲು ಯತ್ನಿಸುತ್ತಾನೆ. ಆ ಪಾತ್ರಕ್ಕೆ ಪೂರಕವಾಗಿ ತನ್ನ ನಡಿಗೆ, ಮಾತು, ಆಂಗಿಕ ಚಲನೆ ಇತ್ಯಾದಿಗಳನ್ನು ಅಳವಡಿಸಿಕೊಳ್ಳುವ ಮೂಲಕ, ಪಾತ್ರದಲ್ಲಿ ತನ್ಮಯನಾಗುವ ಮೂಲಕ ಪರದೆಯ ಮೇಲೆ ಅಚ್ಚರಿಯಾಗಿ ಪರಿಣಮಿಸುತ್ತಾನೆ. ಕಾಲಾನುಕ್ರಮದಲ್ಲಿ ರಸೆಲ್‌ನನ್ನು ಮಾಗಿಸುತ್ತಾ ಹೊರಟಿದ್ದು ಅಭಿನಯದ ಮೇಲೆ ಆತನಿಗಿದ್ದ ಶ್ರದ್ಧೆ ಮತ್ತು ಹೊಸಬಗೆಯ ಪಾತ್ರಗಳು ಎಂಬುದು ಗಮನಿಸಬೇಕಾದ ಸಂಗತಿ. 'ಎ ಬ್ಯೂಟಿಫುಲ್ ಮೈಂಡ್' ಚಿತ್ರದ ಭಾವುಕತೆ, ಪರವಶತೆ, ಅಸಹಜ ಮನೋದೃಷ್ಟಿ ನಿಜಕ್ಕೂ ವಿಸ್ಮಯಕಾರಿ. ಗಣಿತಶಾಸ್ತ್ರಜ್ಞ ಜಾನ್ ನ್ಯಾಶ್‌ನ ಜೀವನ ಕಥೆಯನ್ನು ಆಧರಿಸಿದ್ದ 'ಎ ಬ್ಯೂಟಿಫುಲ್ ಮೈಂಡ್'ನಲ್ಲಿ ರಸೆಲ್ ಸ್ವತಃ ನ್ಯಾಶ್ ಆಗಿದ್ದ. ಅದೇ ರೀತಿ 'ರಾಬಿನ್ ಹುಡ್' ಚಿತ್ರದ ಧೀರತ್ವ, ಕಣ್ಣುಗಳ ಅಚಲತೆ, 'ಎ ಗುಡ್ ಇಯರ್' ಚಿತ್ರದಲ್ಲಿನ ನವಿರುತನ ಇವೆಲ್ಲಾ ಗಮನಕ್ಕೆ ಬರುವಂಥವು.

ಸಿನಿಮಾಗಳಲ್ಲಿ ನಟಿಸುವುದರ ಜೊತೆಗೆ ರಸೆಲ್ ಹೆಚ್ಚು ತಲೆಕೆಡಿಸಿಕೊಳ್ಳುವುದು ಸಂಗೀತ ಕುರಿತು ಮಾತ್ರ; 'ಐ ವಾಂಟ್ ಟು ಬಿ ಲೈಕ್ ಮರ್ಲಾನ್ ಬ್ರಾಂಡೋ' ಎಂಬ ಹಾಡಿನ ಮೂಲಕ ಎಂಭತ್ತರ ದಶಕದಲ್ಲಿ ಹಾಡಲು ಶುರುಮಾಡಿಕೊಂಡ ರಸಲ್ ಒಳಗೊಬ್ಬ ಅದ್ಭುತ ಸಂಗೀತಗಾರನಿದ್ದಾನೆ. ಲೀಡ್ ವೋಕಲ್ಸ್, ಗಿಟಾರ್‌ಗಳನ್ನು ಬ್ಯಾಂಡ್‌ಗಳಿಗಾಗಿ ನುಡಿಸುತ್ತಿದ್ದ, ಆಸ್ಟ್ರೇಲಿಯಾ ಸೇರಿದಂತೆ ಲಂಡನ್, ಲಾಸ್ ಏಂಜಲೀಸ್, ಟೆಕ್ಸಾಸ್, ಆಸ್ಟಿನ್, ಚಿಕಾಗೋ, ಪೋರ್ಟ್ ಲ್ಯಾಂಡ್, ಸ್ಯಾನ್ ಫ್ರಾನ್ಸಿಸ್ಕೋ, ನ್ಯೂಯಾರ್ಕ್, ನ್ಯೂಜೆರ್ಸಿಗಳಲ್ಲಿ ಕಾರ್ಯಕ್ರಮಗಳನ್ನು ಕೊಟ್ಟ, ಹಾಡುಗಳ ಬಗೆಗಿದ್ದ ಅದೇ ಹುಚ್ಚಿನಲ್ಲಿ ಡೇನಿಯಲ್ ಸ್ಪೆನ್ಸರ್ ಎಂಬ ಆಸ್ಟ್ರೇಲಿಯನ್ ಮೂಲದ ಗಾಯಕಿ, ಗೀತರಚನಾಕಾರ್ತಿಯನ್ನು ವರಿಸಿ ಎರಡು ಮಕ್ಕಳ ತಂದೆಯಾದ. ಈ ಮೊದಲು ತನ್ನ 'ಪ್ರೂಫ್ ಆಫ್ ದಿ ಲೈಫ್' ಚಿತ್ರದಲ್ಲಿ ಒಟ್ಟಿಗೆ ನಟಿಸಿದ್ದ ಮೆಗ್ ರ್ಯಾನ್ ಎಂಬಾಕೆಯೊಂದಿಗೆ ರೊಮ್ಯಾಂಟಿಕ್ಕಾಗಿ ಇನ್ವಾಲ್ವ್ ಆಗಿದ್ದ ಈ ನಟ ರಸಿಕತೆಯಲ್ಲೂ ಹಿಂದೆ ಬಿದ್ದಿರಲಿಲ್ಲ!

ರಸೆಲ್‌ನ ಬದುಕು ಅನೇಕ ಅಚ್ಚರಿಗಳಿಂದ ಕೂಡಿರುವಂಥದ್ದು ಎಂಬುದಕ್ಕೆ ಸಾಕ್ಷಿ, ಆತ ಆಸ್ಟ್ರೇಲಿಯಾದ ನಾನಾ ಗ್ಲೆನ್ ಎಂಬ ಗ್ರಾಮೀಣ ಪರಿಸರದಲ್ಲಿ 791 ಎಕರೆಯಷ್ಟು ಆಸ್ತಿ ಹೊಂದಿದ್ದರೂ ಸಿಡ್ನಿಯ ಫ್ಲ್ಯಾಟೊಂದರಲ್ಲಿ ಉಳಿದುಕೊಂಡದ್ದು; ಕುದುರೆಗಳು ಮನುಷ್ಯರಂತೆ, ಅವುಗಳೊಂದಿಗೆ ಭಾವನಾತ್ಮಕವಾಗಿ ವರ್ತಿಸಬಹುದೆಂದು ಭಾವಿಸುವುದು; ಹಳೆಯ ಭೂಪಟಗಳನ್ನು ಆಚ್ಚಿಕೊಳ್ಳುವುದು; ತನ್ನ ಮಕ್ಕಳಿಗಾಗಿ ಸಿಗರೇಟು ಬಿಟ್ಟುಬಿಡುತ್ತೇನೆ ಎಂದು ಸಾರ್ವಜನಿಕವಾಗಿ ಹೇಳಿಕೆ ಕೊಟ್ಟು ಮತ್ತೆ ಸಿಗರೇಟು ಸೇದಿದ್ದು; ಬರಾಕ್ ಒಬಾಮಾನನ್ನು 'ದಿ ಲೈಟ್ ಅಂಡ್ ದಿ ಫ್ಯೂಚರ್' ಅಂತ ಹೊಗಳಿ 2012ರ ಅಮೆರಿಕಾ ಅಧ್ಯಕ್ಷೀಯ ಚುನಾವಣೆಯಲ್ಲಿ ಒಬಾಮಾ ಪರ ಪ್ರಚಾರ ಮಾಡಿದ್ದು; ಮದ್ಯರಹಿತ ದಿನಗಳನ್ನು ಜಾರಿಯಲ್ಲಿಟ್ಟು ಡಯಟ್ ಮಾಡಿ, ಸಾಕಷ್ಟು ವ್ಯಾಯಾಮ ಇತ್ಯಾದಿಗಳನ್ನು ಮಾಡಿ ನೂರಾ ನಾಲ್ಕು ಕೆಜಿಯಿದ್ದ ತನ್ನ ತೂಕವನ್ನು ತೊಂಭತ್ತಕ್ಕೆ ಇಳಿಸಿಕೊಂಡಿದ್ದು; ಸಿಡ್ನಿಯ ರಗ್ಬಿ ಲೀಗ್ ಫುಟ್‌ಬಾಲ್ ತಂಡಕ್ಕೆ ಸಹಾಯ ಮಾಡಿದ್ದು- ಹೀಗೆ ಹತ್ತು ಹಲವು ಸಂಗತಿಗಳಿಂದ ರಸೆಲ್ ವಿಚಿತ್ರ ಎನಿಸುತ್ತಾನೆ.

'ಪ್ರಿಸನರ್ಸ್ ಆಫ್ ದಿ ಸನ್ಸ್' ಚಿತ್ರದಿಂದ ಹಿಡಿದು ಆತನ ಇತ್ತೀಚಿನ ಚಿತ್ರ 'ನೋಹ'ವರೆಗೆ ರಸೆಲ್ ಬಿಡಿಬಿಡಿಯಾಗಿ ಕಾಣಿಸಿಕೊಂಡ ಒಬ್ಬ ವಿಶಿಷ್ಟ ನಟ. ಅಭಿನಯಿಸಬಲ್ಲ, ಹಾಡಬಲ್ಲ, ವಾದ್ಯ ನುಡಿಸಬಲ್ಲ, ಅಳಬಲ್ಲ, ಅಳಿಸಬಲ್ಲ, ನಗಬಲ್ಲ, ನಗಿಸಬಲ್ಲ, ಪ್ರಾಣ ತೆಗೆಯಬಲ್ಲ, ಪ್ರಾಣ ಉಳಿಸಬಲ್ಲ ಈ ನಟನನ್ನು ಪ್ರಬುದ್ಧನನ್ನಾಗಿ, ಒಂದು ಬಗೆಯ ಮಾಗಿದ ಮನುಷ್ಯನನ್ನಾಗಿ ಮಾಡಿದ್ದು ಆತ ನಿಭಾಯಿಸಿದ ಪಾತ್ರಗಳು ಹಾಗೂ ಆತನನ್ನು ಪಳಗಿಸಿದ ನಿರ್ದೇಶಕರುಗಳು. ಒಂದು ಕೋನದಿಂದ ವಿಷ್ಣುವರ್ಧನ್ ಮತ್ತೊಂದು ಕೋನದಿಂದ ಮೋಹನ್ ಲಾಲ್‌ನನ್ನು ಹೋಲುವ ಈ ರಸೆಲ್ ಕ್ರೋ ತನ್ನ ನ್ಯೂಜಿಲೆಂಡರ್ ಮುಖ, ಮಾಂತ್ರಿಕ ಕಣ್ಣು ಮತ್ತು ಗಂಭೀರ ಧ್ವನಿಯಿಂದ ಎಲ್ಲರನ್ನು ಚಕಿತಗೊಳಿಸುತ್ತಾನೆ. ಹಾಗೆಯೇ ಒಮ್ಮೊಮ್ಮೆ ವಿಚಿತ್ರವಾಗಿ ವರ್ತಿಸುತ್ತ ಕೆಲವರ ದೃಷ್ಟಿಯಲ್ಲಿ ವಿಲನ್ ಕೂಡ ಆಗುತ್ತಾನೆ.

ಪೊಲೀಸ್ ಸ್ಟೇಷನ್ನಿನ ಮೆಟ್ಟಿಲು ಕೂಡಾ ಹತ್ತುತ್ತಾನೆ. ಆಸ್ಟ್ರೇಲಿಯಾದ ಕಾಫ್ಸ್ ಹಾರ್ಬರಿನ ಹೋಟೆಲೊಂದರಲ್ಲಿ




ರಸೆಲ್ ಕೆಲವರೊಂದಿಗೆ ಹೊಡೆದಾಡುವಾಗಿನ ದೃಶ್ಯ ಸೆಕ್ಯುರಿಟಿ ವಿಡಿಯೋದಲ್ಲಿ ರೆಕಾರ್ಡ್ ಆದದ್ದಿರಬಹುದು, ಹೋಟೆಲ್ ನೌಕರನೊಬ್ಬನ ಮೇಲೆ ಟೆಲಿಫೋನ್ ಎಸೆದು ನ್ಯೂಯಾರ್ಕ್ ಪೊಲೀಸರಿಂದ ಬಂಧನಕ್ಕೊಳಗಾದದ್ದಿರಬಹುದು, 'ಬ್ರಿಟಿಷ್ ಅಕಾಡೆಮಿ ಆಫ್ ಫಿಲಂ ಅಂಡ್ ಟೆಲಿವಿಷನ್ ಆರ್ಟ್' ಅವಾರ್ಡ್ ಸಂದರ್ಭದಲ್ಲಿ ನಿರ್ಮಾಪಕ ಮಾಲ್ಕೊಮ್ ಜೆರ್ರಿ ಜೊತೆಗಿನ ವಿರುದ್ಧನಿಯ ಜಗಳವಿರಬಹುದು, 'ಆಕ್ಯುಪೈ ವಾಲ್ ಸ್ಟ್ರೀಟ್' ಚಳವಳಿಗೆ ಟ್ವೀಟರ್ ಮೂಲಕ ಬೆಂಬಲಿಸಿದ್ದು- ಹೀಗೆ ಒಂದಿಲ್ಲೊಂದು ಚಟುವಟಿಕೆ, ವಿವಾದಗಳಿಲ್ಲದೆ ರಸೆಲ್ ಕ್ರೋ ಇಲ್ಲ.

ನ್ಯೂಜಿಲೆಂಡ್ ಕ್ರಿಕೆಟ್ ತಂಡದ ಆಟಗಾರರಾಗಿದ್ದ ಮಾರ್ಟಿನ್ ಕ್ರೋ ಮತ್ತು ಜೆಫ್ ಕ್ರೋ ಈತನ ಕಸೀನ್‌ಗಳಾಗಿದ್ದು, ತಾನೂ ಕೂಡ ಕ್ರಿಕೆಟ್ ನೋಡುವುದು, ಆಡುವುದು ಈತನ ಇತರ ಹಾಬಿಗಳಲ್ಲಿ ಒಂದು. 2009 ರಲ್ಲಿ ಆಸ್ಟ್ರೇಲಿಯ-ಇಂಗ್ಲೆಂಡ್ ನಡುವೆ ನಡೆದ 'ಆಷಸ್ ಟೆಸ್ಟ್ ಸೀರೀಸ್'ನ ಎರಡನೇ ಟೆಸ್ಟ್ ಪಂದ್ಯಕ್ಕೆ ರಸಲ್ 'ಥರ್ಡ್ ಮ್ಯಾನ್' ಕೂಡ ಆಗಿದ್ದನೆಂಬುದು ಮತ್ತೊಂದು ವಿಶೇಷ.

ಹೀಗೆ ನಟನಾಗಿ, ಸಂಗೀತಗಾರನಾಗಿ, ಕ್ರೀಡಾ ಪ್ರೋತ್ಸಾಹಕನಾಗಿ, ವಿವಾದಾತ್ಮಕ ವ್ಯಕ್ತಿಯಾಗಿ ಜಗತ್ತನ್ನು ಸೆಳೆದ ರಸೆಲ್ ಕ್ರೋ ಸಿನಿಮಾ ಶೂಟಿಂಗ್ ಮಾಡುವವರಿಗೆ ಊಟ, ತಿಂಡಿ ಪೂರೈಸುವ ದಂಪತಿಗಳ ಮಗನಾಗಿ 7 ಏಪ್ರಿಲ್ 1964ರಂದು ನ್ಯೂಜಿಲೆಂಡಿನ ವೆಲ್ಲಿಂಗ್ಟನ್ನಿನಲ್ಲಿ ಜನಿಸಿ, ಜಗತ್ತು ಮೆಚ್ಚುವಂಥ ನಟನಾಗಿ ಅರಳಿ, ಆಸ್ಕರ್ ನಂಥ ಪುರಸ್ಕಾರಗಳಿರುವ ಈತ ಆಧುನಿಕ ಚಿತ್ರಪ್ರೇಮಿಗಳ ಮನಸುಗಳಲ್ಲಿ ಸಣ್ಣದೊಂದು ಆಕಾರವಾಗಿ ಪರಿಣಮಿಸಿದ್ದಾನೆ ಎಂಬುದಂತೂ ಖರೆ ಅಲ್ಲವೇ?

● ಹೃದಯಶಿವ




...ವಿರೋಧಿಸಿದರು ಎಂಬ ಒಂದು ಕಾರಣಕ್ಕೆ ಅವರ ವಿರುದ್ಧ ಸುಳ್ಳು ಆರೋಪ ಮಾಡಿ, ಟೀಕಾಪ್ರಹಾರ ಮಾಡುವುದು ಎಷ್ಟು ಸರಿ?

ಈ ವಿಷಯದಲ್ಲಿ 'ಕನ್ನಡಪ್ರಭ' ಮತ್ತು 'ಹೊಸ ದಿಗಂತ' ಪತ್ರಿಕೆಗಳ ಅಬ್ಬರ ಜೋರಾಗಿತ್ತು. ಆ ಎರಡೂ ಪತ್ರಿಕೆಗಳು ಇಡೀ ವಿಷಯವನ್ನು ರೂಪಾಂತರಿಸಿ 'ಧರ್ಮ ಜಾತಿ ಆಚರಣೆ ದೇವರ' ಎಂದೆಲ್ಲ ಹೇಳಿಕೊಂಡು ಅನಂತಮೂರ್ತಿಯವರನ್ನು ತುಂಬಾ ಹೀನಾಮಾನವಾಗಿ ಟೀಕಿಸಿದವು. ನಾಡಿನ ಮೂಲೆಮೂಲೆಗಳಿಂದ ಧಾರ್ಮಿಕ ಸಂಘಟನೆಗಳಿಂದ ಪ್ರತಿಭಟನೆಗಳಾಗುವಂತೆ ಮಾಡಿದರು. ಅಸಲಿಗೆ ತಮ್ಮದಲ್ಲದ ತಪ್ಪಿಗೆ ಅನಂತಮೂರ್ತಿ ಶಿಕ್ಷೆ ಅನುಭವಿಸುವಂತಾಯ್ತು.

ಅನಂತಮೂರ್ತಿಯವರು ತಪ್ಪು ಮಾಡಿರದಿದ್ದರೂ ಅವರನ್ನು ಖಂಡಿಸಿದ ಈ ಪತ್ರಿಕೆಗಳ ಸಂಪಾದಕರು ಈಗ ಅವರ ಕ್ಷಮೆಯನ್ನು ಕೇಳುವರಾ?

-ವಿಶ್ವನಾಥ್ ಬಿ.ಎಂ. ಈ ಮೇಲ್ ಮೂಲಕ

## ಮಾಧ್ಯಮಗಳು ಅಲ್ಪಸಂಖ್ಯಾತ ವಿರೋಧಿಗಳಾಗುತ್ತಿವೆ

ಗುಜರಾತ್‌ನಲ್ಲಿರುವ ಅಕ್ಷರಧಾಮದ ಮೇಲಾದ ದಾಳಿಗೆ ಸಂಬಂಧಿಸಿದಂತೆ ಜೈಲುಪಾಲಾಗಿದ್ದ ಮುಸಲ್ಮಾನರನ್ನು ನಿರ್ದೋಷಿಗಳೆಂದು ಸುಪ್ರೀಂಕೋರ್ಟ್ ಬಿಡುಗಡೆ ಮಾಡಿದ್ದನ್ನು ಕೆಲವೇ ಕೆಲವು ಪತ್ರಿಕೆಗಳು ಪ್ರಕಟಿಸಿದವು. ನಿಮ್ಮ ಪತ್ರಿಕೆಯೂ ಅದರಲ್ಲಿ ಒಂದು. ಟಿವಿ ಚಾನೆಲ್‌ಗಳಲ್ಲಿ ಇದರ ಬಗ್ಗೆ ಪ್ರಸ್ತಾವನೆಯೂ ಆಗಲಿಲ್ಲ.

ಮುಸಲ್ಮಾನರನ್ನು ಪೊಲೀಸರು ಬಂಧಿಸಿದಾಗಲೆಲ್ಲ ನಮ್ಮ ಟಿವಿ ಚಾನೆಲ್‌ಗಳು ಅದರ ಸುತ್ತಲೇ ಚರ್ಚೆಗಳನ್ನು ನಡೆಸುತ್ತಿವೆ. ಅದರಲ್ಲೂ ಮುಸಲ್ಮಾನರ ವಿರುದ್ಧ ಕೆಂಡಕಾರುವವರನ್ನೆಲ್ಲ ಅಂತಹ ಚರ್ಚೆಗಳಿಗೆ ಕರೆಸಿ ಸಾರ್ವಜನಿಕರಿಗೆ ತಪ್ಪು ಮಾಹಿತಿಯನ್ನು ರವಾನಿಸುತ್ತಾರೆ. ಅಂತಹ ಚರ್ಚೆಗಳನ್ನು ನಡೆಸುವ ಆ್ಯಂಕರ್‌ಗಳಿಗೇ ಸರಿಯಾದ ಮಾಹಿತಿ ಅಥವಾ ನಿಲುವು ಇಲ್ಲದಿರುವುದೂ ಇಂತಹ ಚರ್ಚೆಗಳು ಕೋಮುದ್ವೇಷವನ್ನು ಬಿತ್ತುವಲ್ಲಿ ಯಶಸ್ವಿಯಾಗುತ್ತಿವೆ.

ಅದರಲ್ಲೂ ಮೋದಿ ಪ್ರಧಾನಿ ಆದ ನಂತರ ಹೆಚ್ಚಿನ ಟಿವಿ ಚಾನೆಲ್‌ಗಳು ಹಿಂದುತ್ವದ ಹಾದಿಯನ್ನು ಹಿಡಿಯುತ್ತಿದ್ದಾವೆ. ಇದು ಪ್ರಜಾಪ್ರಭುತ್ವಕ್ಕೆ ಒಳ್ಳೆಯದಲ್ಲ.

-ನಜೀರ್ ಹುಸೇನ್ ಅಹಮದ್, ಬೆಂಗಳೂರು

'ಎಡಿಜಿಪಿ ಡಾ. ರವೀಂದ್ರನಾಥ್ ಪಜೀತಿಯ ...ಪ್ರಸಂಗ' ಶೀರ್ಷಿಕೆಯಡಿ ಪ್ರಕಟವಾದ ಪತ್ರಿಕೆಯ ...ದಿಂದ ತಿಳಿಯುತ್ತಿರುವುದೇನೆಂದರೆ ನಮ್ಮ ಸಮಾಜದಲ್ಲಿ ...ಳ್ಳಿದ ಶೀರ್ಷಿಕೆದವರ ಮೇಲೆ ಇನ್ನೂ ಹೆಚ್ಚಾಗುತ್ತಿದೆಯೇ ...ರತು ಕಡಿಮೆಯಾಗುತ್ತಿಲ್ಲವೆಂಬುದು. ಡಾ. ಬಿ.ಆರ್. ಅಂಬೇಡ್ಕರ್ ಹೇಳಿರುವಂತೆ ಈ ಜಾತಿಗಳ ವೈಷಮ್ಯ ಕ್ರೂರ ಹಂತ ತಲುಪಿಯೇ ಇಳಿಮುಖವಾಗುತ್ತದೆ ಎಂಬಂತೆ ನಡೆಯುತ್ತಿದೆ. ಪರಿಶಿಷ್ಟ ಜಾತಿಯವರಾದ ಡಾ. ರವೀಂದ್ರನಾಥ್ ಸೇವಾಹಿರಿತನದಲ್ಲಿ ಎಂದಾದರೊಮ್ಮೆ ಬೆಂಗಳೂರಿನ ಪೊಲೀಸ್ ಕಮೀಷನರ್ ಹುದ್ದೆಗೆ ಪ್ರಮೋಟ್ ಆಗುವವರೆಂಬ ಏಕೈಕ ಕಾರಣದಿಂದ ಇವರನ್ನು ಯಾವುದಾದರೂ ಸೆಕ್ಸ್ ಸ್ಕ್ಯಾಂಡಲ್‌ನಲ್ಲಿ ಸಿಕ್ಕಿಸಿ, ಗೌರವ ಕಳೆದು ತಮ್ಮ ಮೇಲ್ಜಾತಿಯವರಿಗೆ ಈ ಹುದ್ದೆ ಉಳಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಈ ದೃಷ್ಟಿಯಲ್ಲಿ ಅಂದು ಆ ಹೋಟೆಲ್‌ನಲ್ಲಿ ಮಹಿಳೆಯೊಂದಿಗಿನ 'ಫೋಟೋ ಕ್ಲಿಕ್' ಪ್ರಕರಣ ಏರ್ಪಾಟು ಮಾಡಿದ್ದಾರೆ.

ರವೀಂದ್ರನಾಥ್‌ರವರ ನ್ಯಾಯಯುತ ಪ್ರತಿಭಟನೆಯಿಂದ ಜಾತಿವಾದಿ ಅಧಿಕಾರಿಗಳ ಮುಖವಾಡ ಈಗ ಬಯಲುಗೊಂಡಂತಾಗಿದೆ. ಈ ಜಾತಿವಾದಿಗಳಿಗೆ ಇತ್ತೀಚಿನ



ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಭಾರತೀಯ ಜನತಾ ಪಾರ್ಟಿಯೇ ಹೆಚ್ಚು ಸ್ಥಾನ ಗಳಿಸಿರುವುದು ಸಹ ಕಾರಣವಾಗಿರಬಹುದು. ಏಕೆಂದರೆ ಈ ಐಪಿಎಸ್ ಹುದ್ದೆಗಳು ಕೇಂದ್ರ ಸರ್ಕಾರದ ಆಡಳಿತಕ್ಕೊಳಪಟ್ಟಿರುತ್ತವೆ. ಅಲ್ಲಿಂದ ತಮಗೆ ಬೇಕಾದಂತೆ ರಕ್ಷಣೆ ಪಡೆಯಬಹುದೆಂಬ ಹುಂಬ ಆಲೋಚನೆಯಿರಬಹುದು. ತೊಂದರೆಗೊಳಗಾದ ಮಹಿಳೆ ಲಿಖಿತ ದೂರು ನೀಡದಿದ್ದರೂ ಆಪಾದಿತನನ್ನು ಕೇಸಿನಲ್ಲಿ ಸಿಕ್ಕಿಸಬಹುದೆಂಬ ಪತ್ರಕರ್ತ ತರುಣ್ ತೇಜ್‌ಪಾಲ್ ಪ್ರಕರಣದಿಂದ ಇವರು ಸ್ಫೂರ್ತಿ ಪಡೆದು ಅದನ್ನು ತಪ್ಪಾಗಿ ಇಲ್ಲಿ ಅಳವಡಿಸಿಕೊಂಡಿರುವಂತಿದೆ. ಇದಕ್ಕೆ ಊಹಿಸಿದಂತೆ ಕೆಲವು ಪತ್ರಕರ್ತರನ್ನು ಸೇರಿಸಿಕೊಂಡಿದ್ದಾರೆಂದು ಪತ್ರಿಕೆಯಲ್ಲಿಯೇ ತಿಳಿಸಿದ್ದೀರಿ.

ನಿರೀಕ್ಷೆಯಂತೆಯೇ ಇಂದಿನ ದಿನಪತ್ರಿಕೆಗಳಲ್ಲಿ ಈ ಪ್ರಕರಣಕ್ಕೆ ತಿಪ್ಪೆ ಸಾರಿಸುವ ವರದಿಯನ್ನು ಸಿಐಡಿ ಪೊಲೀಸರು ಸರ್ಕಾರಕ್ಕೆ ನೀಡುತ್ತಿದ್ದಾರೆಂದು ವರದಿಯಾಗಿದೆ. ಒಟ್ಟಾರೆ ಅಹಿಂದ ನಾಯಕರು ನೇತೃತ್ವ ವಹಿಸಿರುವ ಕಾಂಗ್ರೆಸ್ ಸರ್ಕಾರದ ಸಿದ್ದರಾಮಯ್ಯನವರ ಅಡಿಯಲ್ಲಿಯೇ ನಡೆದಿರುವ ಈ ಘಟನೆಯು ಈ ಸರ್ಕಾರಕ್ಕೊಂದು ಸವಾಲಾಗಿದೆ.

-ಎಚ್.ಕೆ. ಈರಪ್ಪ, ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 02-07-2014



## ಇಂಡೋ-ಡಚ್ ಮ್ಯಾರೇಜು ಪ್ರಸಂಗ

ಜಗ್ಗೇಶ್ ಮಗ ಗುರುರಾಜ್ ತನ್ನ ತಂದೆ ನಿರ್ದೇಶನದ 'ಗುರು' ಸಿನಿಮಾದಲ್ಲಿ ನಟಿಸಿ ಸೋತ ನಂತರ ಗೈದ ಏಕೈಕ ಕೆಲಸವೆಂದರೆ ಬೆಳ್ಳಬೆಳ್ಳಗಿರುವ ಡಚ್ ಹುಡುಗಿಯೊಬ್ಬಳನ್ನು ಮದುವೆಯಾಗಿದ್ದು. ಮದುವೆಯಾದಾಗಿನಿಂದ ಹೆಂಡತಿಯೊಟ್ಟಿಗೆ ಅಷ್ಟೇನೂ ಸಾರ್ವಜನಿಕವಾಗಿ ಕಾಣಿಸಿಕೊಳ್ಳದ ಗುರುರಾಜ್ ದಿಢೀರಂತ ಮೊನ್ನೆ ಮೀಡಿಯಾ ಮುಂದೆ ಬಂದಿದ್ದು. ಅದೂ ತನ್ನ ಸಹೋದರ ಯತಿರಾಜ್ ನಟಿಸಿರುವ 'ತರ್ಲೆ ನನ್ ಮಕ್ಳು' ಸಿಡಿ ಬಿಡುಗಡೆ ಸಮಾರಂಭಕ್ಕೆ. ಯಾವಾಗ ಈ ಇಂಡೋ-ಡಚ್ ಜೋಡಿ ಕಣ್ಣಿಗೆ ಬಿತ್ತೋ ಮಾಧ್ಯಮದ ಮಂದಿ ಟಕಾಟಕಾ ಅಂತ ಫೋಟೋಗಳ ಮೇಲೆ ಫೋಟೋ ತೆಗೆದುಬಿಟ್ಟರು. ಆ ಜೋಡಿಯೂ ಅಷ್ಟೇ ಉತ್ಸಾಹದಿಂದ ನಕ್ಕು ಶಾಲು, ಹಣ್ಣಿನ ಬುಟ್ಟಿಗಳನ್ನು ಸ್ವೀಕರಿಸಿತು. ಅಂದಹಾಗೆ, ತನ್ನ ಮಾವನಂತೆ ಈ ಹೆಣ್ಣುಮಗಳು ಮುಂದೊಮ್ಮೆ ರಾಜಕೀಯ ಪ್ರವೇಶಿಸಿ ಶಾಸಕಿಯಾಗಿ, ಅಪ್ಪಿತಪ್ಪಿ ಮುಖ್ಯಮಂತ್ರಿ ಏನಾದರು ಆದಳು ಅಂತ ಇಟ್ಟುಕೊಳ್ಳಿ... ಆಗ ದೇಶಭಕ್ತ ಬಿಜೆಪಿ ಮಂದಿ "ವಿದೇಶಿ ಮಹಿಳೆ ಕರ್ನಾಟಕದ ಮುಖ್ಯಮಂತ್ರಿಯಾಗಲು ಯಾವುದೇ ಕಾರಣಕ್ಕೂ ಬಿಡುವುದಿಲ್ಲ" ಎನ್ನಬಹುದೇ? ಎಂಬ ತರ್ಲೆ ಪ್ರಶ್ನೆ ಈ 'ತರ್ಲೆ ನನ್ ಮಕ್ಳು' ಮೂಡಿನಲ್ಲಿ ಹೊಳೆದರೆ ಅಚ್ಚರಿಯೇನಿಲ್ಲ ಬಿಡಿ!

## ಸಿಂಪಲ್ ಹುಡುಗನ ಸ್ಟ್ರಾಂಗ್ ಲೈನುಗಳು

"ಕರಗಿದ ಬಾನಿನಲ್ಲಿ/ ಮೂಡಿ ಬಾ ನೀ ಚಂದಿರ/ ನಸುಕಿನ ಕನಸಿನಲ್ಲಿ/ ನಿನ್ನ ನೆನಪೇ ಸುಂದರ..." - 'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ' ಚಿತ್ರದ ಈ ಸಾಲುಗಳನ್ನು ಬರೆದವರು ಪ್ರಕಾಶ್ ಶ್ರೀನಿವಾಸ್. ಮನೆಯ ಭಾಷೆ ತಮಿಳಾದರೂ ಬೆಂಗಳೂರಿನಲ್ಲೇ ಹುಟ್ಟಿ ಬೆಳೆದ ಇವರು ಕನ್ನಡದಲ್ಲಿ ಕವಿತೆ ಬರೆಯಬಲ್ಲರು. ಈ ಜಮಾನದ ಯುವಜನಕ್ಕೆ ಇಷ್ಟವಾಗುವಂಥ ನವಿರುನವಿರಾದ ಭಾವನೆಗಳು ಇವರ



ಸಾಲುಗಳಲ್ಲಿ ಇರುತ್ತವೆ. ಇಂತಹ ಒಬ್ಬ ಕವಿ ನೂರು ದಿನ ಓಡಿದ 'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ' ಚಿತ್ರಕ್ಕೆ ಹಿಟ್ ಗೀತೆ ಬರೆಯುವ ಮೂಲಕ ತಮ್ಮೊಳಗೊಬ್ಬ ಸ್ಟ್ರಾಂಗ್ ಗೀತರಚನಾಕಾರ ಇದ್ದಾನೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಸಂಗೀತ ನಿರ್ದೇಶಕರನ್ನೂ, ನಿರ್ದೇಶಕರನ್ನೂ ಚೆನ್ನಾಗಿ ಓಲೈಸಿಕೊಂಡು, ಹೊಗಳಿಕೊಂಡು ಆ ಮೂಲಕ ಎಲ್ಲರಿಗೂ ಒಳ್ಳೆಯವರಾಗಿದ್ದುಕೊಂಡು ಅವಕಾಶಗಳನ್ನು ಪಡೆದುಕೊಳ್ಳುವ ಅಥವಾ ಮತ್ತೊಬ್ಬ ಸಾಹಿತಿಯ ಬಗ್ಗೆ ಫಿಟ್ಟಿಂಗ್ ಇಟ್ಟು ಅವಕಾಶಗಳನ್ನು ಕಿತ್ತುಕೊಳ್ಳುವ ಗಾಂಧಿನಗರದ ಕಂತ್ರಿ ಬುದ್ಧಿಯನ್ನು ಅರಿಯದ ಈ ಮುಗ್ಧ ಯುವಕವಿ "'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ' ನಂತರ ಹಾಡು ಬರೆಯುವ ಅವಕಾಶಗಳು ಬರಲಿಲ್ಲವೇ?" ಎಂಬ ಪ್ರಶ್ನೆಗೆ ತೀರಾ ಮುಗ್ಧತೆಯಿಂದ ಹೇಳುವುದಿಷ್ಟು: "ಹಾಡು ಬರೆಸುವುದಾಗಿ ಕೆಲವು ಅಸಿಸ್ಟೆಂಟ್ ಡೈರೆಕ್ಟರ್‌ಗಳು ಹೇಳಿದ್ದಾರೆ. ಮುಂದೆ ಅವರ ಚಿತ್ರಗಳು ಸೆಟ್ ಏರಿದಾಗ ನೋಡಬೇಕು. ಆದರೆ ನನಗೆ ಯಾವುದೇ ಅನುಭವ ಇಲ್ಲ, ಮೀಟರ್ ಅಂತಾರೆ. ಆಮೇಲೆ ಕೆಲವೊಂದು ಪದಗಳು ಬರಬಾರದು ಅಂತಾರೆ. ಅದೆಲ್ಲಾ ನನಗೆ ಗೊತ್ತಿಲ್ಲ, ಹಾಗಾಗಿ ನಾನು ಇದರ ಬಗ್ಗೆ ತುಂಬಾ ಯೋಚಿಸಿಲ್ಲಾ, ಆ ಚಿತ್ರ ಹೇಗೋ ಸಿಕ್ಕಿತು, ಬರೆದೆ ಅಷ್ಟೇ. ಸದ್ಯಕ್ಕೆ ಒಂದು ಟ್ರಾವೆಲ್ಸ್‌ನಲ್ಲಿ ಬಿಲ್ ಬರೆಯುವ ಕೆಲಸ ಮಾಡ್ಕೊಂಡಿದ್ದೇನೆ." ಪ್ರಕಾಶ್ ಶ್ರೀನಿವಾಸ್ ಥರದ ಸದಭಿರುಚಿಯ ಸಾಹಿತಿಗಳನ್ನು ಚಿತ್ರರಂಗ ಬಳಸಿಕೊಳ್ಳುವಂತಾಗಲಿ ಅಲ್ಲವೇ?

## ಬೆಂಕಿಪಟ್ನ 'ಬೆಂಕಿ' ಹಚ್ಚಲಿದೆಯೇ?

ಶೂಟಿಂಗ್ ಮುಗಿದು, ಎಡಿಟಿಂಗ್ ಮುಗಿದು, ಡಬ್ಬಿಂಗ್ ಮುಗಿದು, ರೀ-ರೆಕಾರ್ಡಿಂಗ್ ಕೆಲಸ ಶುರು ಮಾಡಿಕೊಳ್ಳುತ್ತಿರುವ ಸಿನಿಮಾ ಹೆಸರು 'ಬೆಂಕಿಪಟ್ನ' ಅಂತ. ಕಥೆಗಾರ ಟಿ.ಕೆ.ದಯಾನಂದ್ ಸ್ಕ್ರಿಪ್ಟ್ ಬರೆದು ನಿರ್ದೇಶಿಸುತ್ತಿರುವ ಈ ಚಿತ್ರದಲ್ಲಿ ಒಟ್ಟು ಆರು ಹಾಡುಗಳಿದ್ದು ಹಲವು ಗಮನ ಸೆಳೆಯುವಂತಿವೆ. ಗಾಯಕನಿಂದ ಸಂಗೀತ ನಿರ್ದೇಶಕರಾಗಿ ಬಡ್ತಿ ಪಡೆದಿರುವ ಹರ್ಷ ಎಲ್ಲ ಹಾಡುಗಳಿಗೂ ಲೈವ್ ವಾದ್ಯಗಳನ್ನು ಬಳಸಿರುವುದು ಮತ್ತೊಂದು ವಿಶೇಷ.

ಸದ್ಯದಲ್ಲೇ ಆಡಿಯೋ ಬಿಡುಗಡೆ ಮಾಡಿಕೊಳ್ಳಲಿರುವ ಈ ಸಿನಿಮಾ ಈ ನೆಲದ ಸೊಗಡನ್ನು ಹೊಂದಿದ್ದು ಚೆನ್ನಾಗಿ ಮೂಡಿಬಂದಿರುವ ಮಾತುಗಳು ಕೇಳಿಬರುತ್ತಿವೆ. ಸದಭಿರುಚಿಯ ಬರಹಗಾರನಾಗಿ ಪ್ರಶಸ್ತಿ ಗಳಿಸಿರುವ ಟಿ.ಕೆ.ದಯಾನಂದ್ ನಿರ್ದೇಶನದ 'ಬೆಂಕಿಪಟ್ನ' ಚಿತ್ರ ಹೇಗೆ ಮೂಡಿಬಂದಿದೆ ಎಂಬ ಕುತೂಹಲ ಸಹಜವಾಗಿ ಎಲ್ಲರಲ್ಲೂ ಇರುವಂಥದ್ದೇ...






## ಬಾಬು ಆಸೆಗೆ ಸಾಧು ಸಾಥ್

ಮಗನನ್ನು ಹೀರೋ ಮಾಡಲು ಹೊರಟ ನಿರ್ಮಾಪಕ ಶೈಲೇಂ... ಬಾಬು ಸೋಲಿನ ಮೇಲೆ ಸೋಲು ಅನುಭವಿಸುತ್ತಿರುವ ವಿಷಯ ಎಲ್ಲರಿಗ... ಗೊತ್ತಿರುವಂಥದ್ದೇ. ಸೋತರೂ ಕಂಗೆಡದ ಬಾಬು ಈಗ ಮತ್ತೊಮ್ಮೆ ಮಗನ... ಹೀರೋ ಮಾಡಲು ಹೊರಟಿದ್ದಾರೆ. ಈ ಬಾರಿ ಬಾಬು ಅವರ ಈ ಸಾಹಸ... ಸಾಥ್ ಕೊಡುತ್ತಿರುವವರು ಸಾಧು ಕೋಕಿಲ. 'ಅಲಾ ಮೊದಲೈಂದಿ' ಎಂ... ತೆಲುಗು ಸಿನಿಮಾ ತಂದು ಕನ್ನಡಕೆ ಭಟ್ಟಿ ಇಳಿಸುವ ಕೆಲಸ ಜೂನ್ ಕೊನೆ... ವಾರದಲ್ಲಿ ಶುರುವಾಗುತ್ತದಂತೆ. ನಾಣಿ, ನಿತ್ಯಾ ಮೆನನ್, ಸ್ನೇಹಾ ಉಳ್ಳಾ... ನಟಿಸಿರುವ ಆ ರೊಮ್ಯಾಂಟಿಕ್ ತೆಲುಗು ಸಿನಿಮಾ ಅಲ್ಲಿ ಓಡಿತ್ತು ಇಲ... ಓಡುತ್ತದೆ ಎಂಬುದು ಬಾಬು ಅಂಡ್ ಗ್ಯಾಂಗ್ ನಂಬುಗೆ ಅಂತ ಕಾಣುತ್ತ... ಚಿತ್ರದಲ್ಲಿ ಬಾಬು ಸುಪುತ್ರ ಸುಮಂತ್ ಏಕೈಕ ಹೀರೋ ಆಗಿದ್ದು ಆತ... ಜೊತೆಗೆ ಹರಿಪ್ರಿಯ, ಹರ್ಷಿಕಾ ಪೂಣಚ್ಚ ಹಾಗೂ ಸಾನ್ವಿ ಶ್ರೀವಾಸ್ತವ್ ಎಂ... ಮೂರು ನಾಯಕಿಯರು ಇರುತ್ತಾರಂತೆ. ಇನ್ನೂ ನಾಮಕರಣ ಮಾಡದ ... ಚಿತ್ರ 'ಸುಮಂತ್ ಪ್ರೊಡಕ್ಷನ್ಸ್' ಲಾಂಛನದಲ್ಲಿ ತಯಾರಾಗುತ್ತಂತೆ. ಮಗನ... ಹೀರೋ ಮಾಡುವ ಶೈಲೇಂದ್ರ ಬಾಬು ಅವರ ಬಹುಕಾಲದ ಕನಸು ... ಬಾರಿಯಾದರೂ ನನಸಾಗಲಿ.

## ಅರುಂಧತಿ: ಬುಗುರಿಗೊಂದು ದಾ...

ಕಾಮಿಡಿ ಟೈಮ್ ಗಣೇಶ್ ಅಭಿನಯದ 'ಬುಗುರಿ' ಚಿತ್ರಕ್ಕೆ ಅರುಂಧ... ಎಂಬ ಮಾಡೆಲ್ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. 'ಕೋಲ್ಮಿಂಚು', 'ಕಡ... ಎಂಬ ಕನ್ನಡ ಚಿತ್ರಗಳಲ್ಲಿ ನಟಿಸಿರುವ ಈ ಅರುಂಧತಿ ಬೆಂಗಳೂ... ಮೂಲದ ಹೆಣ್ಣು ಮಗಳು. ಯಾವಾಗ ಈ ಎರ... ಸಿನಿಮಾಗಳಿಂದ ತನಗೆ ಬ್ರೇಕ್ ಸಿಗುವು... ಅನುಮಾನವೆಂದು ಆಕೆಗೆ ತಿಳಿಯಿತೋ ... ಸೀದಾ ಚೆನ್ನೈಗೆ ಹೋಗಿ ಹೊಸ ಬದು... ಕಂಡುಕೊಳ್ಳುವ ಯೋಜನೆ ತಲೆಯ... ಓಡಿದೆ. ಆ ಪ್ರಯತ್ನದಲ್ಲಿ 'ವೇಳುತ್ತು ಕಟ್ಟು'... 'ಬೋದಿನಾಯಕನೂರ್ ಗಣೇಸರ್'... 'ಸುಂದಾಟ್ಟಂ', 'ನೇಟ್ರು ಇಂಡ್ರು' ತರಹದ ತಮಿ... ಸಿನಿಮಾಗಳಲ್ಲಿ ನಟಿಸುವ ಅವಕಾಶ ಈಕೆಗೆ ಸಿಕ್ಕಿ... ಈ ಮಧ್ಯೆ 'ಅಂತರ್ಯ', 'ಅಗ್ರಜ' ಎಂಬ ಕನ್ನ... ಸಿನಿಮಾಗಳಲ್ಲಿ ನಟಿಸಿದರೂ ಮೂರುಕಾಸಿ... ಉಪಯೋಗವಾಗಲಿಲ್ಲ. ಕನ್ನಡದಲ್ಲಿ ಯಾ... ಆಫರ್‌ಗಳೂ ಬರಲಿಲ್ಲ. ಸದ್ಯಕ್ಕೆ 'ವೆಟ್ರಿ', 'ತೊ... ತೊಡರುಂ' ಎಂಬ ತಮಿಳು ಸಿನಿಮಾಗಳ... ಬ್ಯುಸಿಯಾಗಿರುವ ಈ ನಟಿ ಕಾಮಿಡಿ ಟೈ... ಗಣೇಶ್- ಎಂ.ಡಿ.ಶ್ರೀಧರ್ ಜೋಡಿ... 'ಬುಗುರಿ'ಗೆ ಆಯ್ಕೆಯಾಗಿದ್ದಾರೆ. ಈ ಮೂ... ಕನ್ನಡದ ಕಲಾವಿದರು ತವರಿನಲ್ಲಿ ಬ್ಯುಸಿಯಾಗಲು ಬೇರೆ ಕಡೆಗೆ ಹೋಗಿ ಒಂದಿಷ್ಟು ಸಿನಿಮಾಗಳಲ್ಲಿ ನಟಿಸಿ ಬರಬೇಕೆಂಬ ಅಲಿ... ಸಿದ್ಧಾಂತ ಇನ್ನಷ್ಟು ಕಾಲ ಜಾರಿಯಲ್ಲಿರುವಂತಾಯಿತು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4. Pho...
Fax : 26604526...